# ಜನಶಕ್ತಿ

ದುಡಿಯುವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

Blog :janashakthi.wordpress.com e-mail : js_weekly@yahoo.com

ಸಂಪುಟ 8 ಸಂಚಿಕೆ 43

ಅಕ್ಟೋಬರ್ 26, 2014

ಪುಟ 16 ರೂ. 10/-









## ಸಿದ್ರಾಮಯ್ಯನವರೇ, ಒಕ್ಕಲೆಬ್ಬಿಸುವುದನ್ನು ನಿಲ್ಲಿಸಿ.. 'ಪ್ರಾಣವನ್ನಾದರೂ ಬಿಟ್ಟೇವು, ಭೂಮಿಯನ್ನಲ್ಲ..'



## 'ಗಾಂಧಿ-ಅಂಬೇಡ್ಕರ್-ಲೋಹಿಯಾ-ಮಾರ್ಕ್ಸ್' ಸಿದ್ಧಾಂತಗಳ ನಡುವೆ ಸ್ನೇಹಾನುಸಂಧಾನ ಇಂದಿನ ಅಗತ್ಯ



## ಬೊಲಿವಿಯಾ: ಇವೋ ಮೊರಾಲೆಸ್ ಹ್ಯಾಟ್ರಿಕ್



## ಮೋದಿ ದರ್ಬಾರ್‌ನಲ್ಲಿ ಹಣದುಬ್ಬರ ಕೋಮುದ್ವೇಷದ ಅಬ್ಬರ




# 'ಗಾಂಧಿ-ಅಂಬೇಡ್ಕರ್-ಲೋಹಿಯಾ-ಮಾರ್ಕ್ಸ್' ಸಿದ್ಧಾಂತಗಳ ನಡುವೆ ಸ್ನೇಹ ಸಂಧಾನ ಇಂದಿನ ಅಗತ್ಯ

## - ಪ್ರಗತಿಪರರು 'ಸಮಾನ್ಯ ಕನಿಷ್ಟ ಕಾರ್ಯಕ್ರಮ' ರೂಪಿಸಿ ಐಕ್ಯ ಹೋರಾಟಕ್ಕೆ ಮುಂದಾಗಬೇಕು- ವಿಚಾರ ಸಂಕಿರಣದ ಆಶಯ

ಜನವರಿ 08 ರಿಂದ 11, 2015 ರವರೆಗೆ ಬೆಂಗಳೂರಿನಲ್ಲಿ ನಡೆಯಲಿರುವ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ-ಸಿಪಿಐ(ಎಂ)ನ ಕರ್ನಾಟಕ ರಾಜ್ಯ ಸಮ್ಮೇಳನದ ಅಂಗವಾಗಿ ಹಾಗೂ ಗಾಂಧಿ ಜಯಂತಿ ಅಂಗವಾಗಿ ವಿಚಾರ ಸಂಕಿರಣವೊಂದನ್ನು ಸಂಘಟಿಸಿಲಾಗಿತ್ತು.

ಅಕ್ಟೋಬರ್, 01, 2014 ರಂದು ಬೆಂಗಳೂರಿನ ಸೆನೆಟ್ ಸಭಾಂಗಣದಲ್ಲಿ ಸಮಕಾಲೀನ ಸಂದರ್ಭದ ಸೈದ್ಧಾಂತಿಕ ನೆಲೆಗಳು - ಎಂಬ ಮುಖ್ಯ ಭೂಮಿಕೆ ಅಡಿಯಲ್ಲಿ 'ಗಾಂಧೀಜಿ-ಅಂಬೇಡ್ಕರ್ -ಲೋಹಿಯಾ-ಮಾರ್ಕ್ಸ್‌ರವರ ದೃಷ್ಟಿಕೋನದಲ್ಲಿ ಸಮಾಜವಾದ' ಎಂಬ ವಿಷಯದ ಕುರಿತು ವಿಚಾರ ಸಂಕಿರಣವನ್ನು ಸಂಘಟಿಸಲಾಗಿತ್ತು.

ವಿಚಾರ ಸಂಕಿರಣದ ಆಶಯ ಭಾಷಣವನ್ನು ಖ್ಯಾತ ಸಾಹಿತಿಗಳು ಹಾಗೂ ಚಲನಚಿತ್ರ ನಿರ್ದೇಶಕರೂ ಆದ ನಾಡೋಜ. ಪ್ರೊ. ಬರಗೂರು ರಾಮಚಂದ್ರಪ್ಪ ಮಾಡಿದರು.

'ಗಾಂಧೀಜಿ - ಅಂಬೇಡ್ಕರ್ - ಲೋಹಿಯಾ- ಮಾರ್ಕ್ಸ್ ಈ ನಾಲ್ಕೂ ಮಹಾನ್ ಚಿಂತಕರ ಚಿಂತನೆ ಏನು? ಸಮಕಾಲೀನ ಸಂದರ್ಭ ಏನು? ಎಂದು ಚಿಂತಿಸುವ ಇಂತಹ ವಿಚಾರ ಸಂಕಿರಣ ಮಹತ್ವದ್ದು ಎಂದ ಬರಗೂರು ಅವರು ಎಲ್ಲವನ್ನು ಅಪವ್ಯಾಖ್ಯಾನ ಮಾಡಲಾಗುತ್ತಿರುವ ಸಂದರ್ಭ ಇದು ಎಂದು ಎಚ್ಚರಿಸಿದರು. ಕೋಟ್ಯಾಧಿಪತಿಗಳ ಕೋಟಾ ವ್ಯಕ್ತಿತ್ವವೇ ಇಂದು ಆದರ್ಶದ ಮಾದರಿಯಾಗಿದೆ ಎಂದು ಬರಗೂರು ವಿಷಾದಿಸಿದರು.

ಇಂದು 'ಸಮಾಜವಾದ ಕ್ಷೀಣಿಸುತ್ತಿದೆ' ಎಂದು ಸಂಭ್ರಮ ಪಡುವುದು ನಡೆದಿದೆ. ನರೇಂದ್ರ ಮೋದಿ, ವಿವೇಕಾನಂದರನ್ನು ಪರಸ್ಪರ ಹೋಲಿಸಲಾಗುತ್ತಿದೆ. ನರೇಂದ್ರ ಮೋದಿ, ವಿವೇಕಾನಂದರು ಇಬ್ಬರು ಸೆಪ್ಟೆಂಬರ್ 27 ರಂದು ಒಂದೇ ದಿನಾಂಕದಂದು ಅಮೇರಿಕದಲ್ಲಿ ಮಾತನಾಡಿದರು ಎಂಬುದೊಂದೇ ಇರುವ ಹೋಲಿಕೆ. ಅಮೇರಿಕದಲ್ಲಿ ಮೋದಿ ವಿರೋಧಿ ಪ್ರತಿಭಟನಾಕಾರರನ್ನು ಸಂಪರ್ಕಿಸಿದ್ದಕ್ಕೆ ಟಿವಿ ಪತ್ರಕರ್ತ ರಾಜ್ ದೀಪ್ ಸರ್ದೇಸಾಯಿ ಅವರ ಮೇಲೆ ಮೋದಿ ಬೆಂಬಲಿಗರು ನಡೆಸಿದ ಹಲ್ಲೆಯ ಕುರಿತು ಮಾಧ್ಯಮಗಳು ವರದಿ ಮಾಡಲಿಲ್ಲ. ನಮ್ಮ ಹಳ್ಳಿಗಳ ಕಡೆ 'ಮೋಡಿ' ಮಾಡುವುದು ಎನ್ನುತ್ತಾರೆ. 'ಮೋಡಿ' ಎಂದರೆ ಮೋಸ ಎಂದು ಜನರ ಅರ್ಥ. ಮೋದಿಯವರ 'ಮೋಡಿ' ನಡೆದಿದೆ. ಪ್ರಗತಿಪರರ ನಡುವೆ ವಿಚಾರಗಳ ನಡುವೆ ತಾಕಲಾಟ ನಡೆದಿದೆ. ಭಿನ್ನಾಭಿಪ್ರಾಯ ತಪ್ಪಲ್ಲ. ಸೈದ್ಧಾಂತಿಕ ನಂಬಿಕೆ ತಪ್ಪಲ್ಲ. ಸೈದ್ಧಾಂತಿಕ ಮೂಢ ನಂಬಿಕೆ ತಪ್ಪು. ಶ್ರೇಷ್ಠತೆಯನ್ನು ಶೋಧಿಸುವವರು ತಾವೇ ಶ್ರೇಷ್ಠರು ಎಂದುಕೊಂಡರೆ ಅದು ಕರ್ಮಠತನವಾಗುವ ಅಪಾಯ ಇರುತ್ತದೆ. ಕಾಲದ ಪರೀಕ್ಷೆಯಲ್ಲಿ ಗೆದ್ದು ಬರುವುದಿಲ್ಲ. ತಾತ್ವಿಕ ಮೂಲ ಆಶಯಗಳಿಗೆ ಬದ್ಧವಾಗಿದ್ದು, ಬದ್ಧತೆ ಬಿಟ್ಟುಕೊಡದೆ ಕಾಲಾಂತರಕ್ಕೆ ತಕ್ಕಂತೆ ಸಾಗಬೇಕಾದ ದಾರಿ ಯಾವುದು ಎಂದು ಕಂಡು ಕೊಳ್ಳಬೇಕಾಗಿದೆ ಎಂದ ಬರಗೂರು ಅವರು 'ಗಾಂಧೀಜಿ - ಅಂಬೇಡ್ಕರ್ - ಲೋಹಿಯಾ ಮತ್ತು ಮಾರ್ಕ್ಸ್ ಈ ನಾಲ್ಕು ಸಿದ್ಧಾಂತಗಳ ನಡುವೆ ಜಾತ್ಯತೀತತೆ-ಸಮಾನತೆ ಇವೆರಡು ಸಾಮಾನ್ಯವಾದ ಅಂಶಗಳು. ಜಾತ್ಯತೀತತೆ-ಸಮಾನತೆ, ಈ ತತ್ವಗಳು ಗಾಂಧಿ, ಲೋಹಿಯಾ, ಅಂಬೇಡ್ಕರ್, ಮಾರ್ಕ್ಸ್ ಎಲ್ಲರದೂ ಆಗಿವೆ. ಇವುಗಳ ನಡುವೆ ಸೈದ್ಧಾಂತಿಕ ಸ್ನೇಹಾನುಸಂಧಾನ ನಡೆಯದಿದ್ದರೆ ಸಣ್ಣ ಪುಟ್ಟ ಭಿನ್ನಾಭಿಪ್ರಾಯಗಳನ್ನು ಮೀರಿ ಹೋಗುವುದು ಸಾಧ್ಯವಾಗುವುದಿಲ್ಲ.

ಯಾವುದೇ ಪ್ರಗತಿಪರ ಸಿದ್ಧಾಂತ ತನ್ನತನವನ್ನು ಬಿಡದೇ ಆತ್ಮಾವಲೋಕನ ಮಾಡಿಕೊಳ್ಳಬೇಕಾದ ಸಂದರ್ಭ ಬಂದಿದೆ. ಲೋಹಿಯಾ ಕಾಂಗ್ರೆಸ್ ಮತ್ತು ಕಮ್ಯುನಿಸ್ಟರನ್ನು ವಿರೋಧಿಸಿಕೊಂಡು ಬಂದರು. 1939 ರ ಮುಂಚಿನ ಗಾಂಧಿ ಬೇರೆ, ವಿಚಾರವಾದಿ 'ಗೋರಾ' ಭೇಟಿಯ ನಂತರದ ಗಾಂಧಿ ಬೇರೆ. ಅಂಬೇಡ್ಕರ್ ಜೊತೆಗಿನ ಸಂವಾದದಿಂದಲೂ ಗಾಂಧಿ ಬೆಳೆದಿದ್ದಾರೆ. ಮೊದಲಿಗೆ ಗಾಂಧಿ ಜಾತಿ ವ್ಯವಸ್ಥೆಯಲ್ಲಿ ನಂಬಿಕೆ ಇದ್ದವರು. ಆ ನಂತರ ಅವರು ಅಂತರ್ ಜಾತೀಯ ವಿವಾಹವಾದರೆ ಮಾತ್ರ ಕರೆಯಿರಿ. ಮತ್ತು ಆಶ್ರಮದಲ್ಲಿರಿ ಎಂದರು.

ಗಾಂಧೀಜಿಗೆ ಹಿಂದೂ ಧರ್ಮದ ಬಗೆಗೆ ಅಚಲವಾದ ನಂಬಿಕೆ ಇತ್ತು. ವೈಯುಕ್ತಿಕವಾಗಿ ದೇವರು, ಧರ್ಮದಲ್ಲಿ ನಂಬಿಕೆ ಇದ್ದಂತಹ ಗಾಂಧಿ ಸಾರ್ವಜನಿಕ ಜೀವನದಲ್ಲಿ ದೇವರು ಧರ್ಮವನ್ನು ಮುನ್ನೆಲೆಗೆ ತರಲಿಲ್ಲ. ಖಾದಿ, ಉಪ್ಪು, ಚರಕ ಯಾವುದೇ ಧರ್ಮಕ್ಕೆ ಸೇರಿದವಲ್ಲ. ಇಂತಹವುಗಳನ್ನು ರಾಜಕೀಯ ಚಳುವಳಿಯಲ್ಲಿ ಜನರನ್ನು ಅಣಿನೆರೆಸಲು ಸಂಕೇತವಾಗಿ ಸಾಧನವಾಗಿ ಬಳಸಿದರು.

ಅಧ್ಯಾತ್ಮಿಕ ಕಲ್ಪನೆಯನ್ನು ವಿರೋಧಿಸುವುದು ಹಾಗೂ 'ಆರ್ಥಿಕ ವ್ಯಾಖ್ಯಾನ' ಮಾರ್ಕ್ಸ್‌ವಾದದ ಕೊರತೆ ಎಂದು ಅಂಬೇಡ್ಕರ್ ಟೀಕೆ ಮಾಡಿದರೂ 'ತತ್ವಜ್ಞಾನದ ಕೆಲಸ ಜಗತ್ತನ್ನು ಬರೀ ವಿವರಿಸುವುದಲ್ಲ, ಅದನ್ನು ಪುನರ್‌ರಚಿಸುವುದು' ಎಂಬ ಮಾರ್ಕ್ಸ್ ಅವರ ಚಿಂತನೆಯನ್ನು ಅಂಬೇಡ್ಕರರು ಒಪ್ಪುತ್ತಾರೆ. ಇಂಡಿಯಾಕ್ಕೆ ಸಮಾಜವಾದ ತೀರಾ ಅನಿವಾರ್ಯ. ಅದಿಲ್ಲದಿದ್ದರೆ ಖಾಸಗಿ ಸಂಸ್ಥೆಗಳು ಎಲ್ಲವನ್ನು ಕಬಳಿಸುತ್ತವೆ ಎಂದಿದ್ದಾರೆ.

**ಆರ್. ರಾಮಕೃಷ್ಣ**

ಜಾತಿ ವ್ಯವಸ್ಥೆ, ತಾರತಮ್ಯದ ಬಗೆಗೆ ಹೆಚ್ಚು ಮಾತನಾಡುವುದಿಲ್ಲ ಎಂಬ ಕಾರಣ-ಕ್ಕೆ ಕಮ್ಯೂನಿಸ್ಟರನ್ನು ಟೀಕಿಸುತ್ತಾರೆ ಎಂದ ಬರಗೂರು ಏಕಕಾಲಕ್ಕೆ ಜಾತಿ ವ್ಯವಸ್ಥೆ ಮತ್ತು ಆರ್ಥಿಕ ಅಸಮಾನತೆಯ ವಿರುದ್ಧ ಹೋರಾಟ ನಡೆಯಬೇಕು. ಈ ವಿಷಯದಲ್ಲಿ ಕಮ್ಯೂನಿಸ್ಟರು ತಮ್ಮ ತಪ್ಪು ತಿದ್ದಿಕೊಂಡಿದ್ದಾರೆ. ನಾನಾ ಸಿದ್ಧಾಂತಗಳ ನಡುವೆ ನಿರಂತರ ಅನುಸಂಧಾನ ನಡೆಯಬೇಕು ಎಂದು ಪ್ರತಿಪಾದಿಸಿದರು.

ಮಾರ್ಕ್ಸ್, ಇಂಡಿಯಾ ದೇಶದ ಪುರೋಹಿತಶಾಹಿಯ ವಿರುದ್ಧ, ಜಾತಿ ವ್ಯವಸ್ಥೆಯ ವಿರುದ್ಧ ಬರೆಯುತ್ತಾರೆ. ಯುರೋಪ್‌ನದು ಇಂಡಿಯಾದಂತಹ ಸಂಕೀರ್ಣ ವ್ಯವಸ್ಥೆ ಅಲ್ಲ. ಅಲ್ಲಿ ಜಾತಿ ವ್ಯವಸ್ಥೆ ಇರಲಿಲ್ಲ. ಅದು ಭಿನ್ನತೆ.

ಪ್ರಗತಿಪರರು ಸಾಮಾನ್ಯ ಕನಿಷ್ಠ ಕಾರ್ಯಕ್ರಮ ರೂಪಿಸಿ ಅದರ ಆಧಾರದಲ್ಲಿ ಐಕ್ಯ ಆಂದೋಲನ ನಡೆಸಬೇಕು ಎಂದೂ ಬರಗೂರು ಅವರು ಕರೆ ನೀಡಿದರು.

ಕರ್ನಾಟಕ ಸರಕಾರದ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರು, ಖ್ಯಾತ ಪತ್ರಕರ್ತರೂ ಆದ ದಿನೇಶ್ ಅಮೀನ್ ಮಟ್ಟು ಅವರು ಮಾತನಾಡಿ 'ಒಡೆಯುವವವರು ಬಹಳ ಬೇಗ ಒಂದಾಗುತ್ತಿದ್ದಾರೆ. ಕಟ್ಟುವವವರು ಬಹಳ ಬೇಗ ಒಡೆಯುತ್ತಿದ್ದಾರೆ. ಇದು ತಪ್ಪಬೇಕು. ಒಂದೇ ಮನೆಗೆ ಸೇರಿದ್ದರೂ ಕುಟುಂಬ ಸದಸ್ಯರ ನಡುವೆ ಸಣ್ಣ ಪುಟ್ಟ ಜಗಳ ಇರುವಂತೆ ಪ್ರಗತಿಪರರ ನಡುವೆ ಭಿನ್ನಾಭಿಪ್ರಾಯಗಳು ಇರುತ್ತವೆ.

ಅದನ್ನು ಮೀರಿ ಒಟ್ಟಾಗಿ ದೊಡ್ಡ ಹೋರಾಟ ಮಾಡಬೇಕಾಗಿದೆ. ಅನಂತ ಮೂರ್ತಿ..ಗಣಪತಿಯಪ್ಪ ಅಂತಹವರು ಸಾಯುವುದಿಲ್ಲ. ಲೋಹಿಯಾ ಸಾಯುವವರೆಗೆ ಬಾಡಿಗೆ ಮನೆಯಲ್ಲಿದ್ದರು. ಅವರಿಗೆ ಬ್ಯಾಂಕ್ ಖಾತೆ ಇರಲಿಲ್ಲ. ಗಾಂಧಿ ಅರೆಬೆತ್ತಲೆಯಾಗಿದ್ದರು. ಅಮೇರಿಕಕ್ಕೆ ಹೋದ ಮೋದಿ ಬಗೆಗೆ ಏನು ಪ್ರಚಾರ!! ಎಷ್ಟು ಜೊತೆ ಜುಬ್ಬ !!! ಅವರ ವಾಚ್ 50 ಲಕ್ಷ... ಎಂಬ ಬಗ್ಗೆ .. ಅದೇ ರೀತಿ ಕರ್ಚೀಫ್ ..ಇತ್ಯಾದಿ ಕುರಿತು. ಜಯಲಲಿತ ಜೈಲಿಗೆ ಹೋದಾಗ ಗಾಂಧೀಜಿಯವರ ಅಪರಿಗ್ರಹ ಸಿದ್ಧಾಂತ ನೆನಪಾಗುತ್ತದೆ. ಇವತ್ತು ಅಧಿಕಾರ ಕೆಲವರ ಕೈಯಲ್ಲಿ ಇದೆ. ಸರ್ವಾಧಿಕಾರದ ನೆರಳು ಕಾಣುತ್ತಿದೆ. ಗುಡಿ ಕೈಗಾರಿಕೆಗಳ ರಕ್ಷಣೆ ಪ್ರತಿಪಾದಿಸಿದ ಲೋಹಿಯಾ, ಕರ್ನಾಟಕದ ಭೂಮಿಗಾಗಿ ನಡೆದ ಹೋರಾಟ 'ಕಾಗೋಡು ಸತ್ಯಾಗ್ರಹದಲ್ಲಿ' ಪಾಲ್ಗೊಂಡಿದ್ದರು. ರಾಜ್ಯಮಟ್ಟದಲ್ಲಿ ಲೋಹಿಯಾ ಯಾಕೆ ಪ್ರಸ್ತುತವಾಗಲಿಲ್ಲ. ಮಾರ್ಕ್ಸ್‌ವಾದ ಯಾ-ಕೆ ಲೋಹಿಯಾವಾದದಷ್ಟು ಜನಪ್ರಿಯ ಆಗಲಿಲ್ಲ ಎಂಬ ಬಗ್ಗೆ ಚರ್ಚೆಯಾಗಬೇಕು ಎಂದ ಮಟ್ಟು ಲೋಹಿಯಾ ಕಮ್ಯೂನಿಸ್ಟರ ವಿಷಯದಲ್ಲಿ ಜಗಳ, ಗೇಲಿ, ವ್ಯಂಗ್ಯ ಮಾಡಿದ್ದಾರೆ. 'ಪಾಶ್ಚಿಮಾತ್ಯ ಯಜಮಾನಿಕೆಯ ಮುಂದುವರಿಕೆ..' ಎಂದು ಟೀಕಿಸಿದ್ದಾರೆ. ಕಮ್ಯೂನಿಸ್ಟರು ಇದಕ್ಕೆ ಉತ್ತರ ಕೊಟ್ಟಿದ್ದಾರೆ. ಎರಡೂ ಕಡೆ ಆತ್ಮಾವಲೋಕನ ಆಗಬೇಕು ಎಂದರು.

### ಸಂಸ್ಕೃತಿ ರಾಜಕೀಯ ಸಂದೇಶದ ರವಾನೆಗೆ ವಾಹಕ

ರಾಜಕೀಯದ ಸಂದೇಶದ ರವಾನೆಗೆ ಸಂಸ್ಕೃತಿ ಕೂಡ ವಾಹಕ ಎಂದು ತೋರಿಸಿಕೊಟ್ಟವರು ಲೋಹಿಯಾ.

'ಧರ್ಮ ಎಂದರೆ ದೀರ್ಘ ಕಾಲೀನ ರಾಜಕೀಯ.

ರಾಜಕೀಯ ಎಂದರೆ ಅಲ್ಪಾವಧಿಯ ಧರ್ಮ'

ಎಂದು ಲೋಹಿಯಾ ವಿಶ್ಲೇಷಿಸಿದ್ದಾರೆ ಎಂದ ಮಟ್ಟು ಈಗ ನಡೆಯುತ್ತಿರುವ ರಾಜಕಾರಣ ಸಾಂಸ್ಕೃತಿಕ ರಾಜಕಾರಣ ಎಂದು ಅಭಿಪ್ರಾಯಪಟ್ಟರು. ಕೋಮುವಾದಿ ರಾಜಕಾರಣವನ್ನು ಸಾಂಸ್ಕೃತಿಕ ರಾಜಕಾರಣದ ಮೂಲಕ ಎದುರಿಸಬಹುದೇ? ಪ್ರಯತ್ನಿಸಬೇಕು - ಎಂದ ಮಟ್ಟು ಅವರು 'ಇಂಗ್ಲೀಷ್ ಭಾಷೆ ಶ್ರೇಣೀಕರಣವನ್ನು ಸೃಷ್ಟಿಸುತ್ತದೆ. ಭಾಷಾವಾರು ಪ್ರಾಂತ್ಯಗಳ ನಂತರ ಇಂಗ್ಲೀಷನ್ನು ಕಿತ್ತು ಹಾಕಬೇಕು. ದಕ್ಷಿಣ ಭಾರತದಲ್ಲಿ ಅದನ್ನು ಸಂವಹನದ ಭಾಷೆಯಾಗಿ ಉಳಿಸಿಕೊಂಡು ಆಂತರಿಕವಾಗಿ ಅದನ್ನು ಕಿತ್ತು ಹಾಕಬೇಕು.' ಎಂದು ಲೋಹಿಯಾ ಪ್ರತಿಪಾದಿಸಿದ್ದರು.

ಆದರೆ ಈಗ ಇಂಗ್ಲೀಷ್ ಬಗೆಗೆ ಲೋಹಿಯಾ ಅವರ ನಿಲುವಿನ ಕುರಿತು ಲೋಹಿಯಾವಾದಿಗಳು

ಪುಟ 12 ಕ್ಕೆ

ಸಂಪಾದಕೀಯ



▌ನಿತ್ಯಾನಂದಸ್ವಾಮಿ

# ನಕ್ಸಲೀಯರು ಪ್ರಜಾತಾಂತ್ರಿಕ ಮುಖ್ಯವಾಹಿನಿಗೆ ಬರಲು ಬಯಸಿರುವುದು ಸ್ವಾಗತಾರ್ಹವಾಗಿದೆ

ನಕ್ಸಲ್ಬರಿ ಚಳುವಳಿ ಹಾಗೂ ಚಿಂತನೆಯಿಂದ ಪ್ರಭಾವಿತರಾಗಿ, ಸುಮಾರು 25 ವರ್ಷಗಳಿಂದ ಮಾವೋವಾದಿ ಕಮ್ಯುನಿಸ್ಟ್ ಪಕ್ಷದ ಪೂರ್ಣಾವಧಿ ಕಾರ್ಯಕರ್ತರಾಗಿ ಕೆಲಸ ಮಾಡುತ್ತಾ ಬಂದಿದ್ದ ಕರ್ನಾಟಕದವರಾದ ಸಿರಿಮನೆ ನಾಗರಾಜ್ ಹಾಗೂ ನೂರ್ ಜುಲ್ಫಿಕರ್ ತಮ್ಮ ಅಜ್ಞಾತವಾಸದಿಂದ ಹೊರಬಂದು ಬಹಿರಂಗವಾಗಿ ಪ್ರಜಾಚಳುವಳಿಯ ಮುಖ್ಯವಾಹಿನಿಗೆ ಸೇರಿಕೊಳ್ಳಲು ಬಯಸಿರುವುದು ಸ್ವಾಗತಾರ್ಹವಾಗಿದೆ. ಸುದೀರ್ಘ ಚಿಂತನೆ ಹಾಗೂ ಪರಾಮರ್ಶೆಯ ನಂತರ ಇವರಿಬ್ಬರು ಕೈಗೊಂಡಿರುವ ತೀರ್ಮಾನ ಭೂಗತರಾಗಿರುವ ಇನ್ನೆಷ್ಟೋ ಹೋರಾಟಗಾರರಿಗೆ ದಾರಿತೋರಬಹುದು. ಸರ್ಕಾರ ಮತ್ತು ಇವರ ನಡುವೆ ಸಂವಾದವನ್ನು ಏರ್ಪಡಿಸಲು ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿ, ಪತ್ರಕರ್ತೆ ಗೌರಿ ಲಂಕೇಶ್, ನ್ಯಾಯವಾದಿ ಎ.ಕೆ. ಸುಬ್ಬಯ್ಯ ಮೊದಲಾದವರ ನೇತೃತ್ವದ 'ಶಾಂತಿಗಾಗಿ ನಾಗರಿಕ ವೇದಿಕೆ' ನಡೆಸಿದ ಪ್ರಯತ್ನ ಶ್ಲಾಘನೀಯವಾಗಿದೆ.

ತೀವ್ರವಾದ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳ ಕಾರಣದಿಂದಾಗಿ 2006 ರಲ್ಲೇ ಮಾವೋವಾದಿ ಪಕ್ಷದಿಂದ ಹೊರಬಂದ ಸಿರಿಮನೆ ನಾಗರಾಜ ಮತ್ತು ನೂರ್ ಜುಲ್ಫೀಕರ್ ಅವರು 'ಕ್ರಾಂತಿಕಾರಿ ಕಮ್ಯೂನಿಸ್ಟ್ ಪಕ್ಷ' ಕಟ್ಟಿಕೊಂಡು ತೆರೆಮರೆಯಲ್ಲೇ ತಮ್ಮ ಕೆಲಸಗಳನ್ನು ಮುಂದುವರೆಸಿಕೊಂಡು ಬಂದಿದ್ದರು. ಮಾವೋವಾದಿ ಪಕ್ಷದೊಳಗೆ 1993 ರಿಂದ ನಡೆಯುತ್ತಾ ಬಂದ ಗಂಭೀರ ಚರ್ಚೆಗಳ ಆಧಾರದಲ್ಲಿ 'ಕರ್ನಾಟಕದಲ್ಲಿ ಸಶಸ್ತ್ರ ವರ್ಗ ಹೋರಾಟವನ್ನು ಕಟ್ಟಿ ಬೆಳೆಸುವಲ್ಲಿ ಪಕ್ಷ ಸೋತಿದೆ ಎಂದೂ ವಿಶಾಲ ಜನಸಮೂಹವನ್ನು ಆಧರಿಸದೆ, ಸೀಮಿತ ಪ್ರದೇಶದಲ್ಲಿ ಸೀಮಿತ ಶಕ್ತಿಯೊಂದಿಗೆ ಸಶಸ್ತ್ರ ಹೋರಾಟ ಮಾಡಲು ಹೋದ ಸಂಕುಚಿತವಾದಿ ಮಾರ್ಗವೇ ಈ ಸೋಲಿಗೆ ಕಾರಣ' ಎಂಬ ಖಚಿತ ನಿಲುವಿಗೆ ಬಂದ ನಂತರ ಇವರಿಬ್ಬರು ಮಾವೋವಾದಿ ಪಕ್ಷವನ್ನು ತೊರೆದಿದ್ದರು.

ಮಾವೋವಾದಿ ಪಕ್ಷವನ್ನು ತೊರೆದ ನಂತರವೂ ಪೊಲೀಸರು ಇವರ ಮೇಲೆ ಹಲವು ಸುಳ್ಳು ಕೇಸುಗಳನ್ನು ಹಾಕಿದ್ದರು. ಹಾಗಾಗಿ ಅವರಿಗೆ ಬಹಿರಂಗವಾಗಿ ಜನಚಳುವಳಿಗೆ ದುಮುಕಲು ಸಾಧ್ಯವಾಗಲಿಲ್ಲ. ಸರ್ಕಾರ ಇವರೊಂದಿಗೆ ಮಾತುಕತೆಗೆ ಮುಂದಾದಾಗ, 'ತಮ್ಮ ಮೇಲೆ ಹಾಕಿರುವ ಕೇಸುಗಳನ್ನು ಹಿಂತೆಗೆದುಕೊಂಡಲ್ಲಿ ತಾವು ಬಹಿರಂಗವಾಗಿ ಬರುಲು ಸಿದ್ಧ' ಎಂಬ ನಿಲುವನ್ನು ಅವರು ಸರ್ಕಾರದ ಮುಂದೆ ಇಟ್ಟಿದ್ದಾರೆ. ಸರ್ಕಾರ ಇವರ ವಿರುದ್ಧ ದಾಖಲಾಗಿರುವ ಒಂದೆರಡು ಪ್ರಕರಣಗಳನ್ನು ಹಿಂಪಡೆಯಲು ಒಪ್ಪಿಕೊಂಡಿದೆ ಎನ್ನಲಾಗಿದೆ. ಉಳಿದಂತೆ, ಅವರು ಕಾನೂನು ಪ್ರಕ್ರಿಯೆಗೆ ಒಳಗಾಗುವುದಾದರೆ ಅಗತ್ಯ ನೆರವನ್ನು ಒದಗಿಸುವ ಭರವಸೆಯನ್ನೂ ನೀಡಿದೆ. ಸರ್ಕಾರ ತನ್ನ ಮಾತನ್ನು ಹೇಗೆ ಉಳಿಸಿಕೊಳ್ಳುತ್ತದೆ ಎಂಬುದನ್ನು ಕಾದು ನೋಡಬೇಕಾಗಿದೆ. ಶಸ್ತ್ರಗಳನ್ನು ತ್ಯಜಿಸಿ, ಪ್ರಜಾತಾಂತ್ರಿಕ ಚಳುವಳಿಯಲ್ಲಿ ಸಕ್ರೀಯರಾಗಿ ಭಾಗವಹಿಸಲು ಬಯಸುವ ಇವರನ್ನು ಮತ್ತು ಇವರಂತೆ ಯೋಚಿಸುತ್ತಿರುವ ಇತರರನ್ನು ನಾಡಿನ ಎಲ್ಲ ಎಡ– ಪ್ರಜಾತಾಂತ್ರಿಕ ಸಂಘಟನೆಗಳು ಬೆಂಬಲಿಸುವುದು ಅವರ ಕರ್ತವ್ಯವಾಗಿದೆ.


ಶೋಷಣೆ ಹಾಗೂ ದಮನದ ನೆಲೆಯ ಮೇಲೆ ನಿಂತಿರುವ ಭಾರತದ ಸಮಾಜದ ವಿಮೋಚನೆಗಾಗಿ ನಡೆದು ಬಂದಿರುವ ಚಳುವಳಿಯಲ್ಲಿ ತಲೆದೋರಿರುವ ಬಲ ಮತ್ತು ಎಡ ಮಾರ್ಗಚ್ಯುತಿಗಳಿಂದ ಅಪಾರ ಹಾನಿಯಾಗಿದೆ. ಚಳುವಳಿಯ ಅಸಂಖ್ಯಾತ ದಿಟ್ಟ ಹೋರಾಟಗಾರರನ್ನು ಕಳೆದುಕೊಂಡಿದೆ. ಅಸಂಖ್ಯಾತ ಅಮಾಯಕರು ಬಲಿಯಾಗಿದ್ದಾರೆ. ಎಡ ಪಕ್ಷಗಳ ಅದೆಷ್ಟೋ ಜನ ಕಾರ್ಯಕರ್ತರು ಕೊಲ್ಲಲ್ಪಟ್ಟಿದ್ದಾರೆ. ಇದೆಲ್ಲವನ್ನು ಕಂಡ, ಕೇಳಿದ ಜನರಲ್ಲಿ ಕ್ರಾಂತಿಯ ಬಗ್ಗೆ, ಕ್ರಾಂತಿಕಾರಿಗಳ ಬಗ್ಗೆ ಭೀತಿ, ಆಕ್ರೋಶ, ತಿರಸ್ಕಾರ ಮನೆಮಾಡಿಕೊಂಡಿವೆ. ಆಳುವ ವರ್ಗಗಳ ಉತ್ಪ್ರೇಕ್ಷಿತ ಅಪಪ್ರಚಾರಗಳೂ ಈ ಭಾವನೆಗಳನ್ನು ಇನ್ನಷ್ಟು ಗಟ್ಟಿಗೊಳಿಸಿವೆ. ಹೀಗೆ ತುಳಿಯಲ್ಪಟ್ಟ ಹಾದಿ ಈಗ ಕೊನೆಯ ಅಂಚಿಗೆ ಬಂದು ನಿಂತಿದೆ. ಮುಂದೆ ದಾರಿ ಇಲ್ಲದಾಗಿದೆ.

ಇನ್ನೂ ಕಾಲ ಮಿಂಚಿಲ್ಲ. ಈಗಲಾದರೂ ಈ ದುಸ್ಸಾಹಸದ ದಾರಿಯನ್ನು ತ್ಯಜಿಸಿ ಕ್ರಾಂತಿಗಾಗಿ ವಿಶಾಲ ಜನಸಮೂಹಗಳ ವಿಶ್ವಾಸವನ್ನು ಗೆಲ್ಲುವ ಕೆಲಸಕ್ಕೆ ಮುಂದಾಗುವುದು ಆಗಬೇಕಾಗಿದೆ. ಪಾಳೆಗಾರಿ ಸಂಬಂಧಗಳು ಇನ್ನೂ ಜೀವಂತವಾಗಿರುವ ಭಾರತದ ಸಮಾಜದಲ್ಲಿ ಜನರ ಪ್ರಜ್ಞೆ ತೀರಾ ಕೆಳಮಟ್ಟದಲ್ಲಿದೆ. ಕ್ರಾಂತಿಯ ಘೋಷಣೆ ಅವರನ್ನು ಆಕರ್ಷಿಸುವುದಿಲ್ಲ. ಅವರ ಪ್ರಜ್ಞೆಯನ್ನು ಎತ್ತರಿಸದೆ ಅವರು ಕ್ರಾಂತಿಕಾರಿ ದಾರಿಯಲ್ಲಿ ಸಾಗುವುದು ಸಾಧ್ಯವಿಲ್ಲ. ಕೆಲವೇ ಜನ ಕಟ್ಟಾ ಕ್ರಾಂತಿಕಾರಿಗಳು ಎಲ್ಲೋ ಕಾಡಿನಲ್ಲಿ ಅವಿತುಕೊಂಡು ಸಶಸ್ತ್ರ ಕ್ರಾಂತಿ ಮಾಡಬಹುದು ಎಂಬುದು ರೋಮಾಂಚನಕಾರಿ ಕಲ್ಪನೆ. ಈ ಕಲ್ಪನೆಗೆ ಆಕರ್ಷಿತರಾಗಿ ಎಷ್ಟೋ ಜನ ಯುವಕ ಯುವತಿಯರು ನಕ್ಸಲೀಯ ಚಳುವಳಿಯ ದಾರಿ ತುಳಿದಿದ್ದಾರೆ. ಅವರ ತ್ಯಾಗ, ಬಲಿದಾನ, ಅಧ್ಯಯನಶೀಲತೆ ಇತರ ಎಡಪಂಥೀಯರಿಗೆ ಮಾದರಿಯಾಗಿದೆ. ಆದರೆ ಅವರು ಆಯ್ಕೆಮಾಡಿಕೊಂಡ ದಾರಿ ತಪ್ಪು ದಾರಿಯಾಗಿದೆ. ಜನತೆಯೇ ಇತಿಹಾಸವನ್ನು ನಿರ್ಮಿಸುತ್ತದೆ. ಜನತೆಯೇ ಕ್ರಾಂತಿಯನ್ನು ಯಶಸ್ವಿಗೊಳಿಸುತ್ತದೆ. ಕ್ರಾಂತಿಯ ಹಾದಿಯಲ್ಲಿ ಜನತೆಯನ್ನು ಮುನ್ನಡೆಸುವ ಪಾತ್ರವನ್ನು ಕಮ್ಯೂನಿಸ್ಟ್ ಪಕ್ಷ ನಿರ್ವಹಿಸುತ್ತದೆ. ■

# ಉದ್ಯೋಗದ ಹಸಿವು ಹಿಂಗಿಸದ ಹೂಡಿಕೆ ನೀತಿಗಳು

ಕೇಂದ್ರ ಮತ್ತು ರಾಜ್ಯ ಸರಕಾರಗಳು ಮಾಡುವುದೆಲ್ಲಾ ಅಭಿವೃದ್ಧಿಗೆ ಸಂಬಂಧಿಸಿದ್ದೇ ಆಗಿದೆ ಎಂದು ಬಿಂಬಿಸಲಾಗುತ್ತಿದೆ. ಅದು ಮೋದಿಯೇ ಆಗಲಿ, ಇಲ್ಲಿ ಸಿದ್ಧರಾಮಯ್ಯನವರೇ ಇರಲಿ ಅವರ ಸಾಮರ್ಥ್ಯ ಸಾಬೀತಾಗುವುದು ಎಷ್ಟು ಬಂಡವಾಳ ಬಳಿದು ತರುತ್ತಾರೆ ಎಂಬುದರಲ್ಲಿದೆ ಅಂತಾರೆ ವಾಣಿಜ್ಯ ಪಂಡಿತರು! ಸರಕಾರ ಬಿಜೆಪಿಯೋ, ಕಾಂಗ್ರೆಸ್ಸೋ ಯಾವುದೇ ಇರಲಿ ಹೂಡಿಕೆದಾರರನ್ನು ಸೆಳೆಯಲು ಕಸರತ್ತುಗಳು ಮಾಡೋದು ಮಾತ್ರ ನಿಶ್ಚಿತ. ಇದಕ್ಕಾಗಿ ವಿಶ್ವ ಹೂಡಿಕೆದಾರರ ಸಮಾವೇಶದಂತಹ ಹಲವು ಮನೋರಂಜಕ ಮೇಳಗಳೂ ಆಯೋಜಿತಗೊಳ್ಳುತ್ತವೆ. ಇಷ್ಟಾದರೆ ಸಾಕು ದೇಶ–ರಾಜ್ಯ ಅಭಿವೃದ್ಧಿಯಾಗಿ ಬಿಡುತ್ತದೆ ಎಂಬಂತಿದೆ ಆಳುವವರ ಧೋರಣೆ!

ಮೊನ್ನೆ ನಮ್ಮ ಸಿ.ಎಂ. ಸಿದ್ಧರಾಮಯ್ಯನವರು ಉನ್ನತ ಮಟ್ಟದ ಸಮಿತಿಯ ಸಭೆ ನಡೆಸಿ ಹೂಡಿಕೆ ಮತ್ತು ಅದು ಸೃಷ್ಟಿಸಲಿರುವ ಉದ್ಯೋಗಗಳ ಬಗ್ಗೆ ಹೇಳಿದರು. ಸುಮಾರು 9,912 ಕೋಟಿ ರೂಪಾಯಿಗಳ ಹೂಡಿಕೆಯ ಒಟ್ಟು 13 ಹೊಸ ಯೋಜನೆಗಳಿಗೆ ಅನುಮತಿ ನೀಡಲು ಮುಖ್ಯಮಂತ್ರಿ ಅಧ್ಯಕ್ಷತೆಯ ಸರಕಾರದ ಉನ್ನತ ಸಮಿತಿ ನಿರ್ಧರಿಸಿದೆ. ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಅನುಷ್ಠಾನಗೊಳ್ಳಲಿರುವ ಇವುಗಳಿಂದ 6,000 ಜನರಿಗೆ ನೇರ ಉದ್ಯೋಗ ಸಿಗಲಿದೆಯೆಂದು, ಸಿ.ಎಂ. ಹೇಳಿದ್ದಾರೆ. ಇದಲ್ಲದೇ ತಮ್ಮ ಸರಕಾರ ಬಂಡವಾಳ ಹೂಡಿಕೆಗೆ ಪರವಾಗಿದೆಯೆಂದು ಅದಕ್ಕೆ ಅನುಕೂಲವಾಗುವ ಔದ್ಯಮಿಕ ಹೂಡಿಕೆಯ ಹೊಸ ನೀತಿಯನ್ನು ಪ್ರಕಟಿಸುವುದಾಗಿ ತಿಳಿಸಿದ್ದಾರೆ.




ಕಳೆದ ಮಾರ್ಚ್ 5 ರಂದು 34ನೇಯ ಉನ್ನತ ಸಮಿತಿಯು ರೂ.13,770 ಕೋಟಿಗಳ ಹೂಡಿಕೆಯ ಸುಮಾರು 31 ಯೋಜನೆಗಳಿಗೆ ಅನುಮೋದನೆಯನ್ನು ನೀಡಿತ್ತು. ಇದರಿಂದ 44,726 ಜನರಿಗೆ ಕೆಲಸ ಸಿಗುವುದಾಗಿಯೂ ಘೋಷಿಸಲಾಗಿತ್ತು. ಅಂದರೆ ಇಂತಹ ಹೂಡಿಕೆಗಳ ಪ್ರಸ್ತಾವನೆಯನ್ನು ಅಂಗೀಕರಿಸುವ ಸಭೆಗಳು 5–6 ತಿಂಗಳಿಗೊಮ್ಮೆ ಯಥಾ ರೀತಿ ನಡೆಯುತ್ತಲೇ ಇರುತ್ತವೆ. ಇಂತಹ ಹೂಡಿಕೆಯ ಪ್ರಸ್ತಾವಗಳೂ, ಅಂಗೀಕಾರಕ್ಕಾಗಿ 'ಏಕ ಗವಾಕ್ಷಿ ಅನುಮೋದನೆ' ವ್ಯವಸ್ಥೆಗಳೂ ಪ್ರತಿ ಜಿಲ್ಲೆಗಳಲ್ಲಿಯೂ, ರಾಜ್ಯ ಮಟ್ಟದಲ್ಲಿಯೂ ರೂಪಿತಗೊಂಡಿವೆ. ಇವು ಹೂಡಿಕೆಯ ಬಂಡವಾಳದ ಪ್ರಮಾಣಕ್ಕೆ ಅನುಗುಣವಾಗಿ ಯಾವ ಹಂತದಲ್ಲಿ ನಿರ್ಧಾರ ತೆಗೆದುಕೊಳ್ಳುವುದು ಎಂಬುದು ನಿಗದಿಯಾಗುತ್ತದೆ. 10ಕೋಟಿಯೊಳಗಿದ್ದರೆ ಅದು ಜಿಲ್ಲಾ ವಿಂಡೋ ಸಮ್ಮತಿ ಕೊಡುತ್ತದೆ, ಹಾಗೇ 100 ಕೋಟಿ ಮೇಲಾದರೆ ಸಂಪುಟ, 1,000 ಕೋಟಿ ಮೇಲಾದರೆ ಉನ್ನತ ಸಮಿತಿ ಹೀಗೆ.

ಆರಂಭದಲ್ಲಿ ಬಂಡವಾಳಗಾರರು, ಅವರ ಮಾಧ್ಯಮಗಳು ಸಿದ್ದು ಬಂಡವಾಳ ಹೂಡಿಕೆಯ ವಿರೋಧಿ ಎಂಬಂತೆ ಬಿಂಬಿಸಿ ಚೌಕಾಸಿಗೆ ಇಳಿದಿದ್ದವು. ಬಿಜೆಪಿ ಆಡಳಿತದಲ್ಲಿ ಬಂಡವಾಳ ಹೂಡಿಕೆದಾರರದೇ ಆಧಿಪತ್ಯ ಎನ್ನುವ ವಾತಾವರಣಕ್ಕೆ ಭಿನ್ನವಾಗಿ ಬಿಂಬಿಸಿಕೊಳ್ಳಲು ಕಾಂಗ್ರೆಸ್ ಸರಕಾರವೂ ಯತ್ನಿಸಿತ್ತು. ಆದರೆ ಕೆಲವೇ ದಿನಗಳಲ್ಲಿ ತಾನೂ ಸಹ ವಿಶ್ವ ಹೂಡಿಕೆದಾರರ ಸಮಾವೇಶ ನಡೆಸಲು ಸಜ್ಜಾಯಿತು. ಈಗಲೂ ಆ ಪ್ರಯತ್ನ ನಿಂತಿಲ್ಲ.

ಹಿಂದೆ ಬಿಜೆಪಿ ಸರಕಾರ 2009–14 ರ ಒಂದು ನೀತಿಯನ್ನು ಅಂಗೀಕರಿಸಿ ಜಾರಿಗೊಳಿಸಿತ್ತು. ಅದರ ಅವಧಿ ಈ ಮಾರ್ಚ್ 31ಕ್ಕೆ ಮುಗಿದಿದೆ. ಆದ್ದರಿಂದ ಈ ಸರಕಾರವೂ ಹೊಸ ನೀತಿಯನ್ನು ಅಂಗೀಕರಿಸುವ ಹಂತದಲ್ಲಿದೆ. ಮುಖ್ಯಮಂತ್ರಿ ಸಿದ್ಧರಾಮಯ್ಯ ಪ್ರಕಟಿಸಿರುವಂತೆ ಹೊಸ ಕೈಗಾರಿಕಾ ಬಂಡವಾಳ ಹೂಡಿಕೆ ನೀತಿ 2014–19 ರ ಅನುಷ್ಠಾನದಿಂದ ಸುಮಾರು 5 ವರುಷಗಳಲ್ಲಿ 5 ಲಕ್ಷ ಕೋಟಿ ರೂಪಾಯಿಗಳ ಬಂಡವಾಳ ಹರಿದು ಬರಲಿದ್ದು, ಸುಮಾರು 15 ಲಕ್ಷ ಉದ್ಯೋಗಗಳ ಸೃಷ್ಟಿಸುವ ಭರವಸೆಯನ್ನು ನೀಡುತ್ತಿದೆ. ಆದರೆ ಇದು ಸಾಧ್ಯವೇ?

ಈ ಪ್ರಶ್ನೆ ಏಳುವುದು ಯಾಕೆಂದರೆ ಹಿಂದಿನ ಸರಕಾರಗಳು ಇಂತಹುದೇ ಅಂಕಿ–ಅಂಶಗಳನ್ನು ನೀಡಿದ್ದವು. ಬಿಜೆಪಿ ಸರಕಾರ ಸುಮಾರು 8–9 ಲಕ್ಷ ಕೋಟಿ ರೂ.ಗಳ ಹೂಡಿಕೆಯನ್ನು, ಇದರಿಂದ 25 ಲಕ್ಷ ಉದ್ಯೋಗಗಳ ಸೃಷ್ಟಿಯನ್ನು ನಿರೀಕ್ಷಿಸಿತ್ತು. ಆದರೆ ಭರವಸೆಯಂತೆ ಯೋಜನೆಗಳಲ್ಲಿ ಹೂಡಿಕೆಯೂ ಆಗಲಿಲ್ಲ, (ಸ. 2014ರಲ್ಲಿ ರೂ.81.3 ಬಿಲಿಯನ್ ಹೂಡಿಕೆಯಂತೆ, ದೇಶದಲ್ಲಿ ಮೊದಲ ಸ್ಥಾನ ಎಂಬ ಹೆಗ್ಗಳಿಕೆ!) ಉದ್ಯೋಗವೂ ದೊರೆಯಲಿಲ್ಲ, ದೊರೆತದ್ದು ಬಹಳವೆಂದರೆ ಹೇಳಿದ್ದರ ಅಂ–ದಾಜು ಶೇ.15–20 ರಷ್ಟು ಅಷ್ಟೇ. ಇದಕ್ಕಾಗಿ ಬಂಡವಾಳಗಾರರನ್ನು ಆಕರ್ಷಿಸಲು ಭೂಮಿ ಒಳಗೊಂಡು ಸರಕಾರ ಕೊಡ ಮಾಡುವ ತೆರಿಗೆ ರಿಯಾಯಿತಿಗಳು, ಸಬ್ಸಿಡಿಗಳು, ಒದಗಿಸುವ ಮೂಲ ಸೌಲಭ್ಯಗಳು ಎಷ್ಟೆಲ್ಲಾ! ಈಗಿನ ಸರಕಾರ ಉದ್ಯಮಿಪತಿಗಳ ಮಾತು ಕೇಳಿದರೂ ಸಿಗುವ ಪ್ರತಿಫಲವೆಷ್ಟು? ರಾಜ್ಯ ಸರಕಾರವೊಂದು ಹಲವಾರು ವ್ಯತಿರಿಕ್ತ ಸನ್ನಿವೇಶಗಳಲ್ಲಿ ಕೆಲಸ ಮಾಡಬೇಕಾಗುವುದು. ಇತ್ತೀಚೆಗೆ ಚರ್ಚೆಗೆ ಗ್ರಾಸವಾದ ಹೀರೋ ಮೋಟೋ ಕಾರ್ಪೋ ಎಂಬ ಜಪಾನಿ ಕಂಪನಿಯು ರಾಜ್ಯದಲ್ಲಿ (ಧಾರವಾಡ) ಹೂಡಿಕೆ ಮಾಡಲು ಸಿದ್ಧವಾಗಿರುವಾಗಲೇ ಪಕ್ಕದ ಆಂಧ್ರ ಸರಕಾರದ ಹೆಚ್ಚಿನ ರಿಯಾಯಿತಿಯ ಆಹ್ವಾನದಿಂದಾಗಿ ಅಲ್ಲಿಗೇ ಹೋಯಿತು. ಇದಕ್ಕೆ ಕೇಂದ್ರ ಸರಕಾರ ನೀಡಿದ ವಿಶೇಷ ರಿಯಾಯಿತಿಯೂ ಕಾರಣ. ಇಂತಹ ಕಂಪನಿಗಳನ್ನು ಒಲಿಸಿಕೊಳ್ಳಲು ಹೋಗಿ ನಮ್ಮ ನೆಲ, ಜಲ ಸಂಪತ್ತನ್ನು ಅದೆಷ್ಟು ಕಳೆದುಕೊಳ್ಳುತ್ತೇವೆ. ಕಾರ್ಮಿಕ ವಿರೋಧಿ ನೀತಿಗಳನ್ನು ಅನುಸರಿಸಬೇಕು, ಹಕ್ಕುಗಳನ್ನು ದಮನಿಸಬೇಕು. ಇಷ್ಟೆಲ್ಲಾ ಆದ ಮೇಲೂ ನಿರೀಕ್ಷಿತ ಆದಾಯ, ಉತ್ಪಾದನೆ ವಹಿವಾಟು, ಉದ್ಯೋಗ ಸೃಷ್ಟಿ ಆಗುವುದೇ ಇಲ್ಲ.

ಇನ್ನೂ ಒಂದಂಶವೆಂದರೆ ಈಗಿನ ಬಹುತೇಕ ಹೂಡಿಕೆ ಎಂಬುದು ಸೇವಾ ಕ್ಷೇತ್ರದಲ್ಲಿಯೇ ಅತ್ಯಧಿಕವೇ ಹೊರತು, ಮೂಲಭೂತವಾಗಿ ಉತ್ಪಾದನಾ ಕ್ಷೇತ್ರದಲ್ಲಿ ಅಲ್ಲ. ಇದಿಲ್ಲವಾದರೆ ಉದ್ಯೋಗಗಳ ಸೃಷ್ಟಿ ಮತ್ತು ಆರ್ಥಿಕ ಬೆಳವಣಿಗೆಯ ಸ್ಥಿರತೆ ಅಸಾಧ್ಯ. ಇದನ್ನೇ ಪೂರ್ಣ ನಿರ್ಲಕ್ಷಿಸಲಾಗಿದೆ.

ಹೀಗಿರುವಾಗ, ರಾಜ್ಯ ಸರಕಾರದ ಉದಾರೀಕರಣದ ಕೈಗಾರಿಕಾ ನೀತಿ ಸ್ವರ್ಗವನ್ನು ಸೃಷ್ಟಿಸಲಾರದು. ನರಕವನ್ನು ತಪ್ಪಿಸಲಾರದು. ಅದೇನೋ ಒಟ್ಟು ಅಭಿವೃದ್ಧಿ ದರದಲ್ಲಿ ಶೇ.20 ರಷ್ಟು ಹೆಚ್ಚಳವನ್ನು ನಿರೀಕ್ಷಿಸಿದೆ. 6 ವಲಯಗಳಲ್ಲಿ (ಹೈ–ಕ ಸೇರಿ)ಬೆಳವಣಿಗೆಗೆ ಯೋಜಿಸಿದೆ. ಇಲ್ಲಿ ಅಹಿಂದ ಮಂತ್ರದಂತೆ ಶೇ.22.5 ಮೀಸಲಾತಿ ಸೌಲಭ್ಯ, ಸ್ವ–ಉದ್ಯೋಗ ಯೋಜನೆ ಇತ್ಯಾದಿಯ ಸೂಚನೆಗಳು ಉದ್ಯೋಗದ ಹಸಿವನ್ನು ಹಿಂಗಿಸಿಯಾವೇ? ●

# ಬೆಂಗಳೂರಿನಲ್ಲಿ ಹಾಸ್ಟೆಲ್ ಹೊರಗುತ್ತಿಗೆ ನೌಕರರ ಧರಣಿ




ನಿತ್ಯಾನಂದ ಸ್ವಾಮಿ

ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಅಲ್ಪಸಂಖ್ಯಾತರ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ನಡೆಸುತ್ತಿರುವ ಹಾಸ್ಟೆಲ್‌ಗಳಲ್ಲಿ ಹಾಗೂ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ನಡೆಸುತ್ತಿರುವ ಮೊರಾರ್ಜಿ ದೇಸಾಯಿ, ಕಿತ್ತೂರ ರಾಣಿ ಚನ್ನಮ್ಮ, ಏಕಲವ್ಯ ವಸತಿ ಶಾಲೆಗಳಲ್ಲಿ ಅಡುಗೆ, ಸಫಾಯಿ, ಕಾವಲು ಮುಂತಾದ ಕೆಲಸಗಳನ್ನು ಮಾಡುತ್ತಿರುವ ಬಹುತೇಕವಾಗಿ ದಲಿತ. ಹಿಂದುಳಿದ, ಅಲ್ಪಸಂಖ್ಯಾತ ಸಮುದಾಯಗಳಿಗೆ ಸೇರಿರುವ ಹೊರಗುತ್ತಿಗೆ ನೌಕರರು ಬಾಕಿ ವೇತನ ಪಾವತಿಗಾಗಿ, ಕನಿಷ್ಟ ವೇತನ ಜಾರಿಗಾಗಿ, ಪಿ. ಎಫ್. ವಂತಿಗೆ ದಾಖಲೆಗಾಗಿ, ಹೊರಗುತ್ತಿಗೆ ಪದ್ಧತಿ ರದ್ಧತಿಗಾಗಿ ಹಾಗೂ ತಮ್ಮ ನ್ಯಾಯಸಮ್ಮತವಾದ ಇತರ ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸಿ ಇದೇ ಅಕ್ಟೋಬರ್ 9 ರಂದು ಬೆಂಗಳೂರಿನಲ್ಲಿ ರೈಲು ನಿಲ್ದಾಣದಿಂದ ಬೃಹತ್ ಪ್ರತಿಭಟನಾ ಮೆರವಣಿಯನ್ನು ಹೊರಡಿಸಿ ಸ್ವಾತಂತ್ರ್ಯ ಉದ್ಯಾನದಲ್ಲಿ ದಿನವಿಡಿ ಸಾಮೂಹಿಕ ಧರಣಿ ಸತ್ಯಾಗ್ರಹ ನಡೆಸಿದರು.ಕಳೆದ ಮೇ ತಿಂಗಳಲ್ಲಿ ಇದೇ ನೌಕರರು ಕರ್ನಾಟಕ ರಾಜ್ಯ ಸರ್ಕಾರಿ ಹಾಸ್ಟೆಲ್ ಮತ್ತು ವಸತಿ ಶಾಲಾ ಹೊರಗುತ್ತಿಗೆ ನೌಕರರ ಸಂಘದ ಆಶ್ರಯದಲ್ಲಿ ಇದೇ ರೀತಿ ರಾಜ್ಯ ರಾಜಧಾನಿಯಲ್ಲಿ ಪ್ರತಿಭಟನೆ ನಡೆಸಿ ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸಚಿವರಾದ ಶ್ರೀ ಆಂಜನೇಯ ಅವರಿಗೆ ತಮ್ಮ ತುರ್ತು ಬೇಡಿಕೆಗಳ ಮನವಿಯನ್ನು ಸಲ್ಲಿಸಿದ್ದರು 'ನೌಕರರ ಬೇಡಿಕೆಗಳ ಬಗ್ಗೆ ಸಹಾನುಭೂತಿ ವ್ಯಕ್ತಪಡಿಸಿದ ಸಚಿವರು ಸಂಬಂಧಪಟ್ಟ ಇಲಾಖೆಗಳ ಹಿರಿಯ ಅಧಿಕಾರಿಗಳ ಮತ್ತು ನೌಕರರ ಸಂಘದ ಪದಾಧಿಕಾರಿಗಳ ಜಂಟಿ ಸಭೆಯನ್ನು ಏರ್ಪಡಿಸಿದ್ದರು. ಸಭೆಯ ತೀರ್ಮಾನಗಳಿಗೆ ಅನುಗುಣವಾಗಿ ನೌಕರರ ಬಾಕಿ ವೇತನವನ್ನು ಕೂಡಲೇ ಪಾವತಿ ಮಾಡುವಂತೆ ಮತ್ತು ನೌಕರರಿಗೆ ವೇತನ ಚೀಟಿ ನೀಡುವಂತೆ ಹಾಗೂ ನೌಕರರ ಸಂಬಳದಿಂದ ಕಡಿತಮಾಡಲಾಗುವ ಪಿ.ಎಫ್. ಮತ್ತು ಇ. ಎಸ್.ಐ. ವಂತಿಗೆಯನ್ನು ಹಾಗೂ ಸರ್ಕಾರದ ವಂತಿಗೆಯನ್ನು ಸಂಬಂಧಪಟ್ಟ ಇಲಾಖೆಗಳಲ್ಲಿ ನೌಕರರ ವೈಯುಕ್ತಿಕ ಖಾತೆಗೆ ಜಮಾ ಮಾಡಿ ದಾಖಲೆ ನೀಡಬೇಕೆಂದು ನಿರ್ದೇಶಿಸುವ ಸುತ್ತೋಲೆಯನ್ನು ಮಾನ್ಯ ಸಮಾಜ ಕಲ್ಯಾಣ ಆಯುಕ್ತರು ಹೊರಡಿಸಿದ್ದರು. ಆದರೆ ಆ ಸುತ್ತೋಲೆಯ ಸೂಚನೆಗಳು ಇದುವರೆಗೂ ಜಾರಿಯಾಗದೆ ಇರುವುದರಿಂದ ನೌಕರರು ಅನಿವಾರ್ಯವಾಗಿ ಮತ್ತೊಮ್ಮೆ ಬೆಂಗಳೂರಿಗೆ ಬಂದು ಸರ್ಕಾರದ ಗಮನ ಸೆಳೆಯಲು ಪ್ರಯತ್ನಿಸಿದರು.

**ನೌಕರರ ಪರಿಸ್ಥಿತಿ:**

ಶಿಕ್ಷಣದ ಹಕ್ಕಿನಿಂದ ವಂಚಿತರಾಗುತ್ತಿರುವ ದಲಿತ, ಹಿಂದುಳಿದ ಮತ್ತು ಅಲ್ಪಸಂಖ್ಯಾತ ಮಕ್ಕಳಿಗಾಗಿ ಸರ್ಕಾರ ಮೆಟ್ರಿಕ್ ಪೂರ್ವ ಮತ್ತು ನಂತರದ ವಿದ್ಯಾರ್ಥಿನಿಲಯಗಳನ್ನು ಹಾಗೂ ವಸತಿ ಶಾಲೆಗಳನ್ನು ನಡೆಸುತ್ತಿರುವುದು ಅತ್ಯಂತ ಶ್ಲಾಘನೀಯವಾಗಿದೆ. ಆದರೆ ಈ ವಿದ್ಯಾರ್ಥಿನಿಲಯಗಳನ್ನು ಹಾಗೂ ವಸತಿ ಶಾಲೆಗಳನ್ನು ವ್ಯವಸ್ಥಿತವಾಗಿ ನಡೆಸಿಕೊಂಡು ಹೋಗದಿರುವುದರಿಂದ ಅಲ್ಲಿರುವ ಮಕ್ಕಳ ಶಿಕ್ಷಣ, ಅವರ ಆರೋಗ್ಯ ಹಾಗೂ ಅವರ ಒಟ್ಟಾರೆ ಬೆಳವಣಿಗೆಗೆ ದಕ್ಕೆಯಾಗುತ್ತಿದೆ.

ಯಾವುದೇ ಒಂದು ಯೋಜನೆ ಅದರ ಗುರಿ ಸಾಧಿಸಬೇಕಾದರೆ ಅದನ್ನು ಅನುಷ್ಠಾನಗೊಳಿಸುವ ಸಿಬ್ಬಂದಿಗಳ ಪಾತ್ರವು ಮುಖ್ಯವಾಗುತ್ತದೆ. ಅಗತ್ಯವಿರುವಷ್ಟು ಸಿಬ್ಬಂದಿಗಳನ್ನು ನೇಮಿಸದಿದ್ದರೆ, ಸಿಬ್ಬಂದಿಗಳಿಗೂ ಅಧಿಕಾರಿಗಳಿಗೂ ನಡುವೆ ಸಾಮರಸ್ಯವಿಲ್ಲದಿದ್ದರೆ, ಸಿಬ್ಬಂದಿಗಳಿಗೆ ನೀಡಬೇಕಾದ ಸಂಬಳ ಸೌಲತ್ತುಗಳನ್ನು ಕ್ರಮಬದ್ಧವಾಗಿ ನೀಡದಿದ್ದರೆ ಯೋಜನೆಯ ಉದ್ದೇಶ ಸಫಲವಾಗುವುದಿಲ್ಲ.

ಅನೇಕ ವಿದ್ಯಾರ್ಥಿನಿಲಯ ಮತ್ತು ವಸತಿ ಶಾಲೆಗಳಿಗೆ ಅಗತ್ಯ ಮೂಲಸೌಕರ್ಯಗಳಿಲ್ಲ. ಎಷ್ಟೋ ಕಡೆ ಸ್ವಂತ ಕಟ್ಟಡಗಳಿಲ್ಲ. ಮಳೆಗಾಲದಲ್ಲಿ ಕಟ್ಟಡಗಳು ಸೋರುತ್ತಿರುತ್ತವೆ. ಕೆಲವು ಕಡೆ ಕುಡಿಯುವ ನೀರಿನ ವ್ಯವಸ್ಥೆ ಇರುವುದಿಲ್ಲ. ದೂರದಿಂದ ನೀರನ್ನು ಹೊತ್ತು ತರಬೇಕಾಗುತ್ತದೆ. ಅವರಣ ಗೋಡೆಗಳಿರುವುದಿಲ್ಲ. ಭದ್ರವಾದ ಗೇಟ್ ಇರುವುದಿಲ್ಲ. ಕೆಲವು ವಿದ್ಯಾರ್ಥಿನಿಲಯಗಳಲ್ಲಿ ಕಾವಲುಗಾರರ ಸ್ಥಾನ ಖಾಲಿ ಇರುತ್ತವೆ. ಕಾವಲುಗಾರರ ನೇಮಕಾತಿ ಆಗಿರುವುದಿಲ್ಲ. ಸ್ನಾನದ ಮನೆಗಳನ್ನು ಮತ್ತು ಶೌಚಾಲಯಗಳನ್ನು ಪ್ರತಿದಿನ ಸ್ವಚ್ಛಮಾಡುವ ವ್ಯವಸ್ಥೆ ಇರುವುದಿಲ್ಲ. ಅದಕ್ಕಾಗಿ ಪ್ರತ್ಯೇಕ ಸಿಬ್ಬಂದಿ ನೇಮಕ ಮಾಡಿರುವುದಿಲ್ಲ. ಕೆಲವು ಕಡೆ ವಾರ್ಡನ್‌ಗಳು ಅಡಿಗೆ ಮಾಡುವ ಹೊರಗುತ್ತಿಗೆ ನೌಕರರಿಂದಲೇ ಶೌಚಾಲಯ ಸಫಾಯಿ ಮಾಡಿಸುತ್ತಾರೆ. ಇದನ್ನು ಅಲ್ಲಿರುವ ವಿದ್ಯಾರ್ಥಿಗಳು ಸಹಜವಾಗಿ ಇಷ್ಟ ಪಡುವುದಿಲ್ಲ.

ಈ ವಿದ್ಯಾರ್ಥಿ ನಿಲಯಗಳಲ್ಲಿ ಎರಡು ತರಹದ ನೌಕರರು ಇರುತ್ತಾರೆ, ಕಾಯಂ ನೌಕರರು ಮತ್ತು ಹೊರಗುತ್ತಿಗೆಯವರು. ಕಾಯಂ ನೌಕರರು ಕೆಲಸದ ಹೊರೆಯನ್ನು ಹೊರ ಗುತ್ತಿಗೆ ನೌಕರರ ಮೇಲೆ ಹಾಕುತ್ತಾರೆ. ಇಲ್ಲಿ "ಸಮಾನ ಕೆಲಸಕ್ಕೆ ಸಮಾನ ವೇತನ" ಎಂಬ ಸರ್ವೋಚ್ಚ ನ್ಯಾಯಾಲಯದ ಆದೇಶದ ಉಲ್ಲಂಘನೆಯಾಗಿರುತ್ತದೆ. ಕಾಯಂ ನೌಕರರಿಗೆ ಕಡಿಮೆ ಕೆಲಸ ಆದರೆ ಹೆಚ್ಚು ಸವಲತ್ತುಗಳು. ಹೊರ ಗುತ್ತಿಗೆ ನೌಕರರಿಗೆ ಹೆಚ್ಚು ಕೆಲಸ ಆದರೆ ಕಡಿಮೆ ಸವಲತ್ತುಗಳು.



ಕಾಯಂ ಸ್ವರೂಪದ ಕೆಲಸಕ್ಕೆ ಕಾಯಂ ನೌಕರರನ್ನು ನೇಮಿಸಬೇಕೆಂಬ ನಿರ್ದೇಶನವನ್ನೂ ಇಲ್ಲಿ ಉಲ್ಲಂಘಿಸಲಾಗುತ್ತದೆ. ಹಿಂದೆ ದಿನಗೂಲಿ ನೌಕರರಾಗಿ ದುಡಿಯುತ್ತಿದ್ದ ಇವರನ್ನು ಕಳೆದ ಕೆಲವು ವರ್ಷಗಳಿಂದ ಹೊರಗುತ್ತಿಗೆ ನೌಕರರೆ-ಂದು ಪರಿವರ್ತಿಸಿ ಗುತ್ತಿಗೆದಾರರ ಶೋಷಣೆಗೆ ಒಳಪಡಿಸಲಾಗಿದೆ. ಈ ಗುತ್ತಿಗೆದಾರರು ಟೆ-ಂಡರ್ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ನಿರಂತರವಾಗಿ ಯಾವುದೇ ಭೀತಿಯಿಲ್ಲದೆ ಉಲ್ಲಂಘಿಸುತ್ತಿರುತ್ತಾರೆ.



ಹೊರಗುತ್ತಿಗೆದಾರರು ತಮ್ಮ ನೌಕರರಿಗೆ ನೇಮಕಾತಿ ಆದೇಶವನ್ನಾಗಲಿ, ಗುರುತಿನ ಚೀಟಿಯನ್ನಾಗಲಿ ನೀಡುವುದಿಲ್ಲ. ನೌಕರರಿಗೆ ಸರ್ಕಾರ ನಿಗದಿಪಡಿಸಿದ ಕನಿಷ್ಟ ವೇತನವನ್ನು ನೀಡುವುದಿಲ್ಲ. ಮನಸ್ಸಿಗೆ ಬಂದಂತೆ ನೌಕರರ ವೇತನದಲ್ಲಿ ಕಡಿತ ಮಾಡುತ್ತಾರೆ. ಹೀಗಾಗಿ ಒಂದೊಂದು ಜಿಲ್ಲೆಯಲ್ಲಿ, ಒಂದೊಂದು ವಿದ್ಯಾರ್ಥಿನಿಲಯದಲ್ಲಿ ಹೊರಗುತ್ತಿಗೆ ನೌಕರರಿಗೆ ಒಂದೊಂದು ರೀತಿಯ ವೇತನ ದೊ-ರೆಯುತ್ತದೆ, ಕೆಲವು ಕಡೆ ನಗದು ರೂಪದಲ್ಲಿ ವಾರ್ಡನ್/ಪ್ರಿನ್ಸಿಪಾಲರ ಮೂಲಕ ಕೊಡುತ್ತಾರೆ. ಅವರು ಸಹ ಅಕ್ರಮ ಕಡಿತ ಮಾಡುತ್ತಾರೆ. ಕೆಲವು ಕಡೆ ಚಕ್ ಮೂಲಕ ಕೊಡುತ್ತಾರೆ. ಚೆಕ್ ಪಡೆಯಬೇಕಾದರೂ ಲಂಚ ಕೊಡಬೇಕಾಗುತ್ತದೆ. ವೇತನವನ್ನು ನೌಕರರ ಬ್ಯಾಂಕ್ ಖಾತೆಗಳಿಗೆ ಜಮಾ ಮಾಡಬೇಕೆಂಬ ಆದೇಶ ಜಾರಿ ಮಾಡುತ್ತಿಲ್ಲ. ಪ್ರತಿಯೊಬ್ಬ ನೌಕರನಿಗೆ ಕಾನೂನು ಪ್ರಕಾರ ಕೊಡಬೇಕಾದ ವೇತನ ಚೀಟಿ(ಪೇ ಸ್ಲಿಪ್) ಕೊಡುವುದಿಲ್ಲ.

ಹೊರಗುತ್ತಿಗೆದಾರರು ಟೆಂಡರ್ ನಿಬಂಧನೆಗಳಲ್ಲಿ ಒಪ್ಪಿಕೊಂಡಿರುವಂತೆ ತಿಂಗಳಿಗೊಮ್ಮೆ ತಪ್ಪದೆ ವೇತನ ಸಂದಾಯ ಮಾಡುವುದಿಲ್ಲ. ಪ್ರತಿ ತಿಂಗಳ 5ನೇ ತಾರೀಖಿನೊಳಗಾಗಿ ನೌಕರರ ಸಂಬಳವನ್ನು ಅವರ ಬ್ಯಾಂಕ್ ಖಾತೆಗೆ ಜಮಾ ಮಾಡುವುದಿಲ್ಲ. ಎಪ್ರಿಲ್ 1, 2014ರಿಂದ ಕಾರ್ಮಿಕ ಇಲಾಖೆ ಪರಿಷ್ಕರಿಸಿದ ವೇತನವನ್ನು ಬಹುತೇಕವಾಗಿ ಎಲ್ಲಿಯೂ ಸಂದಾಯ ಮಾಡಲಾಗಿಲ್ಲ.

ಹೊರಗುತ್ತಿಗೆದಾರರು ನೌಕರರ ಪಿ.ಎಫ್. ಮತ್ತು ಇ.ಎಸ್.ಐ. ವಂತಿಗೆ ಹಣವನ್ನು ಸಹ ಕದಿಯುತ್ತಾರೆ. ನೌಕರರ ಸಂಬಳದಿಂದ ಕಡಿತ ಮಾಡುವ ಪಿ.ಎಫ್. ವಂತಿಗೆಯನ್ನು ಹಾಗೂ ಇ.ಎಸ್.ಐ. ವಂತಿಗೆ ಹಣವನ್ನು ಸಂಬಂಧಪಟ್ಟ ಇಲಾಖೆಗಳಲ್ಲಿ ಸರ್ಕಾರದ ಪಾಲಿನ ವಂತಿಗೆಯನ್ನು ಒಟ್ಟಿಗೆ ಸೇರಿಸಿ ನೌಕರರ ಖಾತೆಗಳಿಗೆ ಜಮಾ ಮಾಡುವುದಿಲ್ಲ. ಇದರಿಂದ ನೌಕರರಿಗೆ ಇದುವರೆಗೆ ಬಾರೀ ಮೋಸವಾಗಿದೆ. ಇಲಾಖೆಯ ಮೂಲಕ ಸಂಬಳ ಪಡೆಯುವ ಹೊರಗುತ್ತಿಗೆ ನೌಕರರ ಪರಿಸ್ಥಿತಿಯೂ ಭಿನ್ನವಾಗಿಲ್ಲ. ಬಡ ನೌಕರರ ಅಸಹಾಯಕತೆಯನ್ನು ದುರುಪಯೋಗಗೊಳಿಸುತ್ತಾ ಬರಲಾಗಿದೆ.

ಹೊರಗುತ್ತಿಗೆದಾರರು ಮಾಡುತ್ತಿರುವ ಶೋಷಣೆಯಲ್ಲಿ ಅನೇಕ ಕಡೆ ವಾರ್ಡನ್‌ಗಳ/ಪ್ರಿನ್ಸಿಪಾಲರುಗಳ ಪಾತ್ರವೂ ಇರುತ್ತದೆ. ಪ್ರತಿ ತಿಂಗಳ ಸರಿಯಾಗಿ ಸಂಬಳ ಯಾಕೆ ಕೊಡುವುದಿಲ್ಲ ಮುಂತಾದ ಪ್ರಶ್ನೆ ಕೇಳಿದರೆ ಕೆಲಸದಿಂದ ತೆಗೆದುಹಾಕುವ ಬೆದರಿಕೆ ಹಾಕುತ್ತಾರೆ. ಮಹಿಳಾ ನೌಕರರನ್ನು ಹೀನಾಯವಾಗಿ ಬೈದು ಅವಮಾನಿಸುತ್ತಾರೆ. ಅಡುಗೆಗೆ ಬೇಕಾಗುವ ಒಳ್ಳೆಯ ಗುಣಮಟ್ಟದ ಪದಾರ್ಥಗಳನ್ನು ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಪೂರೈಸದೆ, ಅಡುಗೆಯವರ ವಿರುದ್ಧ ಮಕ್ಕಳನ್ನು ಎತ್ತಿಕಟ್ಟಿ ಗಲಾಟೆಮಾಡಿಸುತ್ತಾರೆ. ನೌಕರರಿಗೆ ತಮ್ಮ ಸಂಘದ ಚಟುವಟಿಕೆಗಳಲ್ಲಿ ಭಾಗವಹಿಸಲು ಕೆಲವು ಅಧಿಕಾರಿಗಳು ಸಹಕಾರ ನೀಡುವುದಿಲ್ಲ.

ಈ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಮತ್ತು ಮಕ್ಕಳ ಹಿತ ಕಾಪಾಡಲು

➥

# ಕ್ರಾಂತಿಕಾರಿ ಸಾಹಿತ್ಯವನ್ನು ಮನೆ ಮನೆಗೆ ಹಂಚಿದ ಸಂಗಾತಿ ಆರ್. ಕೋದಂಡರಾಮ್


ಆರ್. ಕೋದಂಡರಾಮ್

ಐಕ್ಯರಂಗ, ಜನಶಕ್ತಿ, ಪೀಪಲ್ಸ್ ಡೆಮಾಕ್ರೆಸಿ, ತಿಕದೀರ್, ಸೆಮ್ಮಲರ್, ದಿ ಮಾರ್ಕ್ಸಿಸ್ಟ್ ಮುಂತಾದ ಕ್ರಾಂತಿಕಾರಿ ವೈಚಾರಿಕ ಸಾಹಿತ್ಯವನ್ನು ಮನೆ, ಮನೆಗೆ ಮನ ಮನಗಳಿಗೆ ಕೊಂಡೊಯ್ದು ಸಂಗಾತಿಗಳಿಗೆ ತಲುಪಿಸುತ್ತಿದ್ದ ಹಿರಿಯ ಒಡನಾಡಿ 'ಕಾಮ್ರೇಡ್' ಆರ್.ಕೋದಂಡರಾಮ್ (72)ಇನ್ನಿಲ್ಲ. ಇತ್ತೀಚಿನ ಕೆಲ ವರುಷಗಳಿಂದ ಆರೋಗ್ಯದಲ್ಲಿ ತೀವ್ರತರ ಸಮಸ್ಯೆಗಳನ್ನು ಎದುರಿಸುತ್ತಿದ್ದ ಅವರು ಇದೇ 2014 ಅಕ್ಟೋಬರ್ 15 ರಂದು ಬೆಂಗಳೂರಿನಲ್ಲಿ ಕೊನೆಯುಸಿರೆಳೆದರು. ಎಲ್ಲರನ್ನೂ ಅಗಲುವ ಮೊದಲಿನ ಕೆಲವು ಕ್ಷಣಗಳಲ್ಲೂ ಕಮ್ಯೂನಿಸ್ಟ್ ಚಳುವಳಿ, ಸಿಪಿಐ(ಎಂ) ಪಕ್ಷದ ಬಗ್ಗೆ ಚಿಂತಿಸುತ್ತಿದ್ದರು, ಮಾತನಾಡುತ್ತಿದ್ದರು. ಅವರ ಅಗಲಿಕೆಯಿಂದಾಗಿ ನಿಷ್ಠಾವಂತ, ಸಿದ್ಧಾಂತಕ್ಕೆ ಬದ್ಧನಾಗಿದ್ದ ಒಬ್ಬ ಪ್ರಮುಖ ಸಂಗಾತಿಯನ್ನು ಕಳೆದುಕೊಂಡಂತಾಗಿದೆ.

ಕಾಮ್ರೇಡ್ ಕೋದಂಡರಾಮ್ ರವರು ಜನಸಿದ್ದು ತಮಿಳುನಾಡು ರಾಜ್ಯದ ತಂಜಾವೂರು ಜಿಲ್ಲೆಯ ವೈದೇಶ್ವರ ಕೊಯ್ಲು ಊರಿನಲ್ಲಿ, 1942 ರಲ್ಲಿ. ಆರಂಭದ ದಿನಗಳಲ್ಲಿ ಅವರು ದ್ರಾವಿಡ ಚಳುವಳಿಗೆ ಆಕರ್ಷಿತರಾದರು. ನಂತರ ಉದ್ಯೋಗವನ್ನರಸಿ ಬೆಂಗಳೂರಿಗೆ ಬಂದ ನಂತರ ಅವರಿಗೆ ಸಾರ್ವಜನಿಕ ವಲಯದ ಉದ್ದಿಮೆಯಾದ 'ಇಂಡಿಯನ್ ಟೆಲಿಫೋನ್ ಇಂಡಸ್ಟ್ರಿ'ಯಲ್ಲಿ ಕಾರ್ಮಿಕನಾಗಿ ದುಡಿಯುವಾಗ ಎಡ ಪಂಥೀಯರ ಪರಿಚಯವಾಯಿತು. ಕಾರ್ಮಿಕ ಸಂಘದ ಸಂಪರ್ಕ ಮತ್ತು ಚಳುವಳಿಯಲ್ಲಿ ತೊಡಗಿಕೊಂಡರು. ಅವರಲ್ಲಿದ್ದ ವೈಚಾರಿಕತೆ ಮಾರ್ಕ್ಸ್‌ವಾದವನ್ನು ಅರಿಯಲು, ಬೆರೆಯಲು ಸಾಧ್ಯವಾಗಿಸಿತು. ಆ ಹೊತ್ತಲ್ಲೇ ಸಿಪಿಐ(ಎಂ) ಪಕ್ಷದ ಕಾರ್ಯಕ್ರಮ ಮತ್ತು ಸಂವಿಧಾನದ ಅಧ್ಯಯನದಿಂದಾಗಿ ಸಮಾಜ ಬದಲಾವಣೆಗೆ ಕಾರ್ಮಿಕ ವರ್ಗದ ಕ್ರಾಂತಿಕಾರಿ ಪಕ್ಷ ಮತ್ತು ರಾಜಕೀಯ ಚಳುವಳಿಯ ಅಗತ್ಯ ಮನಗಂಡು ಅವರು 1976ರಲ್ಲಿ (ಅದು ತುರ್ತುಸ್ಥಿತಿ ಹೇರಿದ್ದ ಕಾಲ) ಸದಸ್ಯರಾದರು. ಅಲ್ಲಿಂದ ಕೊನೆಯುಸಿರೆಳೆಯುವವರೆಗೂ ಪಕ್ಷವನ್ನು,



ಚಳುವಳಿಯೊಂದಿಗಿನ ಸಂಬಂಧವನ್ನು ಗಾಢವಾಗಿ ಪ್ರೀತಿಸುತ್ತಿದ್ದರು, ಶಿಸ್ತಿಗೆ ಬದ್ಧವಾಗಿದ್ದರು. ಅವರು ಪಕ್ಷದ ಐ.ಟಿ.ಐ. ಶಾಖೆಯ ಕಾರ್ಯದರ್ಶಿಯಾಗಿ, ನಂತರ ಕೆ.ಆರ್.ಪುರಂ ಶಾಖೆಯಲ್ಲಿ, ನಂತರ ವಲಯ ಸಮಿತಿಯಲ್ಲಿದ್ದು ಕಾರ್ಯ ನಿರ್ವಹಿಸಿದ್ದಾರೆ. ಅವರನ್ನು ಸಂಗಾತಿಗಳು ಪ್ರೀತಿಯಿಂದ ' ಕೋದ್ಯೆ' ಎಂದು ಕರೆಯುತ್ತಿದ್ದರು.

ಹೀಗೆ ದುಡಿಯುವ ವರ್ಗದ ಚಳುವಳಿಯಲ್ಲಿ ತಮ್ಮನ್ನು ತೊಡಗಿಸಿಕೊಂಡ ಕಾಂ: ಕೋದಂಡರಾಮ್ ಕೃಷ್ಣರಾಜಪುರವನ್ನು ತಮ್ಮ ಮುಖ್ಯ ಕಾರ್ಯ–ಕ್ಷೇತ್ರ ವನ್ನಾಗಿಸಿಕೊಂಡಿದ್ದರು. ಕಾರ್ಮಿಕ ವರ್ಗದ ಚಳುವಳಿ ನಡೆದಿರುವಾಗ, ಚಳುವಳಿಯನ್ನು ದಮನಿಸಲು ಸಮಾಜಘಾತುಕ ಶಕ್ತಿಗಳನ್ನು ಆಡಳಿತ ವರ್ಗ ಉಪಯೋಗಿಸಿದಾಗ ಅದರ ವಿರುದ್ಧ ದೃಢವಾಗಿ ನಿಂತು ಎದುರಿಸಿದವರು.

ಹಲವಾರು ಚಟುವಟಿಕೆಗಳು, ಚಳುವಳಿಗಳಲ್ಲಿ ಸಕ್ರಿಯವಾಗಿ ತೊಡಗಿರುವಾಗಲೇ ಸೈದ್ಧಾಂತಿಕ ತಿಳುವಳಿಕೆಯ ಮಹತ್ವವನ್ನು ಅರಿತಿದ್ದ ಅವರು ಪ್ರಗತಿಪರ, ಮಾರ್ಕ್ಸ್‌ವಾದಿ ಸಾಹಿತ್ಯವನ್ನು ಪ್ರಸಾರಿಸುವುದರಲ್ಲಿ ಪ್ರಮುಖ ಪಾತ್ರ ವಹಿಸಿದರು. ಅದನ್ನು ಖುದ್ದಾಗಿ ತಾವೇ ಹೋಗಿ ಪುಸ್ತಕ, ಪತ್ರಿಕೆಗಳನ್ನು ಪ್ರತಿ ವಾರವೂ ನೀಡಿ ಬರುತ್ತಿದ್ದರು. ಹಾಗೇ ಪತ್ರಿಕೆಗಳ ಹಣದ ಪಾವತಿ ವಿಷಯದಲ್ಲಿ ಯಾವುದೇ ರೀತಿಯಲ್ಲಿ ಬಾಕಿ ಉಳಿಸಿಕೊಳ್ಳುವುದು ಅವರಿಗೆ ಇಷ್ಟವಾಗುತ್ತಿರಲಿಲ್ಲ. ಇತ್ತೀಚೆಗೆ ನಮ್ಮನ್ನಗಲಿದ ಕಾಂ: ಬೃಹಸ್ಪತಿ ಮತ್ತು ಕಾಂ: ಕೋದಂಡರಾಮ್ ರವರನ್ನು ಅನೇಕ ಸಂಗಾತಿಗಳು ತುಂಬು ಮನಸ್ಸಿನಿಂದ

ಪುಟ 10 ಕ್ಕೆ

---

➥

ವಿದ್ಯಾರ್ಥಿನಿಲಯಗಳಲ್ಲಿ ಮತ್ತು ವಸತಿ ಶಾಲೆಗಳಲ್ಲಿ ನೌಕರರನ್ನು ಹೊರಗುತ್ತಿಗೆ ನೌಕರರಾಗಿ ದುಡಿಸುವ ಪದ್ಧತಿಯನ್ನು ಕೈಬಿಟ್ಟು ಎಲ್ಲಾ ಹೊರಗುತ್ತಿಗೆ ನೌಕರರ ಸೇವೆಯನ್ನು ಕಾಯಂಗೊಳಿಸಲು ಸರ್ಕಾರ ಮುಂದಾಗಬೇಕು, ಅಲ್ಲಿಯ ವರೆಗೆ ಹೊರಗುತ್ತಿಗೆ ನೌಕರರ ಬಹುದಿನಗಳ ಬೇಡಿಕೆಗಳನ್ನು ಈಡೇರಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕೆಂಬುದು ಈ ಹೋರಾಟದ ಗುರಿಯಾಗಿತ್ತು.

**ಸರ್ಕಾರದ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ಜಂಟಿ ಸಭೆ :**

ಸ್ವಾತಂತ್ರ್ಯ ಉದ್ಯಾನದಲ್ಲಿ ಆರಂಭವಾದ ಸಾಮೂಹಿಕ ಧರಣಿ ಸತ್ಯಾಗ್ರಹವನ್ನು ಸಂಘದ ರಾಜ್ಯ ಅಧ್ಯಕ್ಷ ನಿತ್ಯಾನಂದ ಸ್ವಾಮಿ ಉದ್ಘಾಟಿಸಿದರು. ಸಿಐಟಿಯು ರಾಜ್ಯ ಕಾರ್ಯದರ್ಶಿಗಳಲ್ಲಿ ಒಬ್ಬರಾದ ಸೈಯದ್ ಮುಜೀಬ್, ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ಎಸ್. ಲಕ್ಷ್ಮಿ ಮತ್ತು ಎಸ್.ಎಫ್.ಐ. ರಾಜ್ಯ ಉಪಾಧ್ಯಕ್ಷ ಬಸವರಾಜ ಪೂಜಾರ್ ಮಾತನಾಡಿ ಹೊರಗುತ್ತಿಗೆ ನೌಕರರ ಹೋರಾಟಕ್ಕೆ ತಮ್ಮ ಸಂಘಟನೆಗಳ ಬೆಂಬಲವನ್ನು ಪ್ರಕಟಿಸಿದರು.

ಆರಂಭದಲ್ಲಿ ಸಂಘದ ಖಜಾಂಚಿ ಚಂದ್ರಪ್ಪ ಹೊಸ್ಕೇರಾ ಎಲ್ಲರನ್ನು ಸ್ವಾಗತಿಸಿದರು. ಪ್ರಧಾನ ಕಾರ್ಯದರ್ಶಿ ಭೀಮಶೆಟ್ಟಿ ಯಂಪಳ್ಳಿ ನೌಕರರ ತುರ್ತು ಬೇಡಿಕೆಗಳನ್ನು ವಿವರಿಸಿದರು, ಸಂಘದ ಪದಾಧಿಕಾರಿಗಳಾದ ಕರಿಯಪ್ಪ ಅಚ್ಚೊಳ್ಳಿ, ಇ. ಆರ್. ಯಲ್ಲಪ್ಪ, ಲಿಂಗಪ್ಪ ಹಣವಾಳ, ಮೋಹನ್ ಕಟ್ಟಿಮನಿ, ಎನ್.ಕೆ.ಸುಬ್ರಮಣ್ಯ,ಕೆ. ಹನುಮೇಗೌಡ, ಪೀರು ರಾಠೋಡ್, ಭೀಮಣ್ಣ ಭೋವಿ,ಇಸಾಮೋದಿನ್, ಕೆ. ಎಸ್. ನರಸಿಂಹಮೂರ್ತಿ, ರಮೇಶ್ ಹುಲಸ್ವಾರ್, ಮಂಜುನಾಥ ಕೊರವರ, ಯೋಗೀಶ್ ಕುಮಾರ್, ಜಯಂತ ಜಿ.ಎಂ., ಚೆನ್ನಪ್ಪ ಕುಂಬಾರ್, ಶಿವರಾಜ ಹೆಚ್.ಎನ್, ಶಶಿವರ್ಧನ್, ಪಾವಡೆಪ್ಪ ಚಲವಾದಿ, ಮಾಳಪ್ಪ ಇಂಗಳಗಿ, ಗೌರಮ್ಮ ಚಲವಾದಿ, ವಸಂತ ರಾಠೋಡ್, ಅಶೋಕ್ ರೆಡ್ಡಿ, ಶಿವಾನಂದ ಮಠಪತಿ ಮೊದಲಾದವರು ಹೋರಾಟದ ನೇತೃತ್ವವಹಿಸಿದ್ದರು.

ಸ್ವಾತಂತ್ರ್ಯ ಉದ್ಯಾನದಲ್ಲಿ ಧರಣಿ ನಡೆ–ಯುತ್ತಿದ್ದಾಗ ಹಿರಿಯ ಅಧಿಕಾರಿಗಳೊಂದಿಗೆ ಸ್ಥಳಕ್ಕೆ ಆಗಮಿಸಿದ ಸರ್ಕಾರದ ಕಾರ್ಯದರ್ಶಿ (ಸಮಾಜ ಕಲ್ಯಾಣ ಇಲಾಖೆ) ಶ್ರೀ ಮಂಜುನಾಥ ಪ್ರಸಾದ್ ಅವರು ನೌಕರರ ಮನವಿಯನ್ನು ಸ್ವೀಕರಿಸಿದರು. ಹಾಸ್ಟೆಲ್ ನೌಕರರ ಬೇಡಿಕೆಗಳು ನ್ಯಾಯಸಮ್ಮತವಾಗಿವೆ ಎಂದು ಹೇಳಿದ ಅವರು ತಮ್ಮ ವ್ಯಾಪಿಯಲ್ಲಿ ಬರುವ ಎಲ್ಲ ಬೇಡಿಕೆಗಳನ್ನು


ಡಾ. ಅಂಬೇಡ್ಕರ್ ಭವನದಲ್ಲಿ ಸಭೆ

ಪರಿಶೀಲಿಸಲು ಇದೇ ಅಕ್ಟೋಬರ್ 14 ರಂದು ಸಂಬಂಧಪಟ್ಟ ಎಲ್ಲ ಇಲಾಖೆಗಳ ಹಿರಿಯ ಅಧಿಕಾರಿಗಳ ಸಭೆಯನ್ನು ಕರೆಯುವುದಾಗಿಯೂ, ಆ ಸಭೆಯಲ್ಲಿ ಹೊರಗುತ್ತಿಗೆ ನೌಕರರ ಸಂಘದ ಪದಾಧಿಕಾರಿಗಳಿಗೂ ಆಹ್ವಾನ ನೀಡಲಾಗುವುದೆಂದು ಭರವಸೆ ನೀಡಿದರು.

ನಿಗದಿಪಡಿಸಿದಂತೆ ಅಕ್ಟೋಬರ್ 14 ರಂದು ಮಧ್ಯಾಹ್ನ 12.30 ಕ್ಕೆ ಡಾ. ಅಂಬೇಡ್ಕರ್ ಭವನದಲ್ಲಿ ಸಭೆಯನ್ನು ಕರೆಯಲಾಗಿತ್ತು ಸರ್ಕಾರದ ಕಾರ್ಯದರ್ಶಿ ಶ್ರೀ ಮಂಜುನಾಥ ಪ್ರಸಾದ್ ಅವರ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ಆಯುಕ್ತರು, ಹಿಂದುಳಿದ ವರ್ಗಗಳ ಇಲಾಖೆಯ ಆಯುಕ್ತರು, ಕಾರ್ಮಿಕ ಇಲಾಖೆಯ ಉಪ ಆಯುಕ್ತರು, ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿಗಳು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ (ಕ್ರೈಸ್) ಕಾರ್ಯನಿರ್ವಾಹಣಾಧಿಕಾರಿಗಳು ಉಪಸ್ಥಿತರಿದ್ದರು. ನೌಕರರ ಕಡೆಯಿಂದ ಸಂಘದ ಅಧ್ಯಕ್ಷರಾದ ನಿತ್ಯಾನಂದ ಸ್ವಾಮಿ, ಪ್ರಧಾನ ಕಾರ್ಯದರ್ಶಿ ಭೀಮಶೆಟ್ಟಿ ಯಂಪಳ್ಳಿ ಅಲ್ಲದೆ 25 ಮಂದಿ ಜಿಲ್ಲಾ ಮುಖಂಡರು ಭಾಗವಹಿಸಿದ್ದರು.

ಸಂಘದ ಅಧ್ಯಕ್ಷರು ಹೊರಗುತ್ತಿಗೆ ನೌಕರರ ಬೇಡಿಕೆಗಳನ್ನು ಒಂದೊಂದಾಗಿ ಅಧಿಕಾರಿಗಳ ಗಮನಕ್ಕೆ ತಂದರು. ಹೊರಗುತ್ತಿಗೆ ಪದ್ಧತಿಯನ್ನು ರದ್ದು ಮಾಡಿ ನೌಕರರ ಸೇವೆಯನ್ನು ಕಾಯಂ ಮಾಡುವ ಬೇಡಿಕೆಯು ಸರಕಾರದ ದೋರಣೆಗೆ ಸಂಬಂಧಪಟ್ಟಿದ್ದು ಸರ್ಕಾರದ ಮಟ್ಟದಲ್ಲಿ ಅದರ ಚರ್ಚೆಯಾಗಬೇಕು ಎಂದು ಸರ್ಕಾರದ ಕಾರ್ಯದರ್ಶಿ ಹೇಳಿದರು. ಇನ್ನುಳಿದಂತೆ ಗುತ್ತಿಗೆ ಕಾರ್ಮಿಕರ ಕಾಯ್ದೆ ಪ್ರಕಾರ ನೀಡಬೇಕಾದ ಎಲ್ಲ ಸೌಲಭ್ಯಗಳನ್ನು ಹಂತ ಹಂತವಾಗಿ ಒದಗಿಸಲಾಗುವುದು ಎಂದು ಅವರು ಭರವಸೆ ನೀಡಿದರು. ಕಳೆದ ಕೆಲವು ತಿಂಗಳುಗಳಿಂದ ಬಾಕಿ ಇರುವ ವೇತನವನ್ನು ಸಂದಾಯ ಮಾಡಲು ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದ ಅವರು ಇನ್ನು 15 ದಿನಗಳ ಒಳಗಾಗಿ ಎಲ್ಲಾ ಕಡೆ ಬಾಕಿ ವೇತನವನ್ನು ಸಂದಾಯಮಾಡಲಾಗುವುದೆಂದು ತಿಳಿಸಿದರು. ಎಪ್ರಿಲ್ ಒಂದರಿಂದ ಪರಿಷ್ಕೃತಗೊಂಡ ತುಟ್ಟಿ ಭತ್ಯೆಯೊಂದಿಗೆ ವೇತನವನ್ನು ಅರಿಯರ್ಸ್ ಸಹಿತವಾಗಿ ನೀಡಬೇಕೆಂದು ಸ್ವಷ್ಟಪಡಿಸಲಾಯಿತು, ನೌಕರರ ವೇತನದಿಂದ ಕಡಿತ ಮಾಡಲಾಗುತ್ತಿರುವ ಪಿ. ಎಫ್. ಮತ್ತು ಇ. ಎಸ್. ಐ. ವಂತಿಗೆಯನ್ನು ಸರ್ಕಾರದ ಪಾಲಿನ ವಂತಿಗೆ ಸಹಿತವಾಗಿ ನೌಕರರ ಖಾತೆಗೆ ಜಮಾಮಾಡಿ ದಾಖಲೆ ನೀಡುವುದನ್ನು ಜಾರಿಗೊಳಿಸಲಾಗುವುದೆಂದೂ ಪ್ರತಿಯೊಬ್ಬ ಹೊರಗುತ್ತಿಗೆ ನೌಕರನಿಗೆ ವಾರದಲ್ಲಿ ಒಂದು ದಿನ ರಜೆ ಕೊಡಲಾಗುವುದು ಎಂದು ಹೇಳಿದರು. ವೇತನ ಚೀಟಿ, ಹೆರಿಗೆ ಭತ್ಯೆ ಸಹಿತ ರಜೆ, ಹಬ್ಬ ಹರಿದಿನಗಳ ಸಂಬಳ ಇತ್ಯಾದಿ ಕಾನೂನು ಸೌಲಭ್ಯಗಳನ್ನು ನೀಡುವ ಕುರಿತು ಕಾರ್ಮಿಕ ಕಾನೂನನ್ನು ಜಾರಿಮಾಡಲಾಗುವುದೆಂದು ಭರವಸೆ ನೀಡಿದರು.

ಅಷ್ಟರ ಮಟ್ಟಿಗೆ ಜಂಟಿ ಸಭೆಯ ತೀರ್ಮಾನಗಳು ನೌಕರರ ಹೋರಾಟಕ್ಕೆ ಸಿಕ್ಕ ಯಶಸ್ಸಿನ ದಾಖಲೆಯಾಗಿದೆ. ಹಾಸ್ಟೆಲ್ ನೌಕರರ ಕನಿಷ್ಠ ವೇತನವನ್ನು ಹೆಚ್ಚಿಸುವಂತೆ ಕಾರ್ಮಿಕ ಆಯುಕ್ತರಿಗೆ ಪ್ರತ್ಯೇಕ ಮನವಿ ಸಲ್ಲಸಲು ನಿರ್ಧರಿಸಲಾಯಿತು. ಸಂಘಕ್ಕೆ ಎಲ್ಲಾ ಜಿಲ್ಲೆಗಳ ಹೆಚ್ಚೆಚ್ಚು ನೌಕರರನ್ನು ಸದಸ್ಯರನ್ನಾಗಿ ಸೇರಿಸಿಕೊಂಡು ಸಂಘವನ್ನು ಬಲಪಡಿಸಬೇಕೆಂದೂ ಜಿಲ್ಲಾ ಮಟ್ಟದಲ್ಲಿ ನೌಕರರ ಸಮಾವೇಶಗಳನ್ನು ಏರ್ಪಡಿಸಿ ಜಿಲ್ಲಾ ಮಟ್ಟದ ಪದಾಧಿಕಾರಿಗಳನ್ನು ತುರ್ತಾಗಿ ಆಯ್ಕೆ ಮಾಡಬೇಕೆಂದು ನಿರ್ಧರಿಸಲಾಯಿತು.

# ಉದ್ದಾಲಕ ಅರುಣಿ ಎಂಬ ಜಗತ್ತಿನ ಮೊದಲ ವಿಜ್ಞಾನ ಪ್ರಯೋಗಕಾರ

ಉದ್ದಾಲಕ ಅರುಣಿ: ಈ ಉಪ್ಪನ್ನು ನೀರಿನಲ್ಲಿ ಹಾಕಿ ಬೆಳಗ್ಗೆ ನನ್ನ ಬಳಿಗೆ ಬಾ (ಲವಣಂ ಏತದ್ ಉದಕೇ ಅವಧಾಯ, ಅಥ ಮಾ ಪ್ರಾತರ್ ಉಪಸೀದಥಾ)

ಶ್ವೇತಕೇತುವು ಹಾಗೆಯೇ ಮಾಡಿದನು.(ಇತಿ ಸ ಹ ತಥಾ ಚಕಾರ)

ಮರುದಿನ ಬೆಳಗ್ಗೆ

ಉದ್ದಾಲಕ ಅರುಣಿ: ವತ್ಸ ನಿನ್ನೆ ರಾತ್ರಿ ಯಾವ ಉಪ್ಪನ್ನು ನೀರಿನಲ್ಲಿ ಹಾಕಿದೆಯೋ ಅದನ್ನು ತೆಗೆದುಕೊಂಡು ಬಾ.

ಶ್ವೇತಕೇತುವು ನೀರಿನಲ್ಲಿ ಎಷ್ಟು ಹುಡುಕಿದರೂ ಸಿಗಲಿಲ್ಲ. ಏಕೆಂದರೆ ಉಪ್ಪು ನೀರಿನಲ್ಲಿ ಕರಗಿಹೋಗಿತ್ತು.

ಉದ್ದಾಲಕ: ವತ್ಸ, ಈ ನೀರಿನ ಮೇಲ್ಭಾಗವನ್ನು ಕುಡಿ. ಹೇಗಿದೆ?

ಶ್ವೇತಕೇತು: ಉಪ್ಪಾಗಿದೆ.

ಉದ್ದಾಲಕ: ಈ ನೀರಿನ ಮಧ್ಯಭಾಗವನ್ನು ಕುಡಿ; ಹೇಗಿದೆ? ಶ್ವೇತಕೇತು: ಉಪ್ಪಾಗಿದೆ.

ಉದ್ದಾಲಕ: ವತ್ಸ, ಈಗ ನೀರಿನ ಕೆಳಭಾಗವನ್ನು ಕುಡಿ; ಹೇಗಿದೆ? ಶ್ವೇತಕೇತು: ಉಪ್ಪಾಗಿದೆ.

ಇದನ್ನು ನೋಡಿದರೆ ನಮ್ಮ ಇಂದಿನ ಪ್ರೌಢಶಾಲೆಯೊಂದರಲ್ಲಿ ಅಧ್ಯಾಪಕರು ವಿದ್ಯಾರ್ಥಿಗಳಿಗೆ ರಸಾಯನ ಶಾಸ್ತ್ರದ ಪ್ರಯೋಗ ಮಾಡಿಸುತ್ತಾ ದ್ರವಗಳಲ್ಲಿ ವಸ್ತುಗಳ ಕರಗುವಿಕೆ, ದ್ರಾವಣಗಳ ಗುಣ ಸ್ವರೂಪಗಳ ಬಗ್ಗೆ ಕಲಿಸಿಕೊಡುತ್ತಿರುವಂತೆ ಕಾಣುವುದಿಲ್ಲವೇ?

ಈಗ ಮತ್ತೊಂದು ಪ್ರಯೋಗವನ್ನು ನೋಡೋಣ.

ಉದ್ದಾಲಕ: ಸೋಮ್ಯನೇ ,ಮನುಷ್ಯನು ಹದಿನಾರು ಭಾಗವುಳ್ಳವನು. ಹದಿನೈದು ದಿನಗಳವರೆಗೆ ಊಟ ಮಾಡಬೇಡ. ಬೇಕಾದಷ್ಟು ನೀರನ್ನು ಕುಡಿ. ನೀರನ್ನು ಕುಡಿಯುವವನಿಗೆ ಪ್ರಾಣವೇನೂ ಹೋಗುವುದಿಲ್ಲ.

ಶ್ವೇತಕೇತುವು ಹದಿನೈದು ದಿನಗಳವರೆಗೆ ಊಟ ಮಾಡಲಿಲ್ಲ. ಆನಂತರ ಉದ್ದಾಲಕನ ಬಳಿ ಬಂದು ಭಗವಾನ್ ಈಗ ಏನು ಮಾಡಲಿ.

ಉದ್ದಾಲಕ: ಋಕ್ಕುಗಳನ್ನೂ (ಋಗ್ವೇದದ ಮಂತ್ರಗಳನ್ನು) ಯಜುಸ್ಸುಗಳನ್ನು (ಯಜುರ್ವೇದದ ಮಂತ್ರಗಳನ್ನು)

ಸಾಮಗಳನ್ನು (ಸಾಮವೇದದ ಗಾನವನ್ನು) ಹೇಳು.

ಶ್ವೇತಕೇತು: ಭಗವಂತನೇ ಅವು ನನಗೆ ತೋಚುವುದೇ ಇಲ್ಲ.

ಉದ್ದಾಲಕ: ಸೋಮ್ಯನೇ, ಒಂದು ಮಹಾಗ್ನಿಯಲ್ಲಿ ಒಂದು ಮಿಣುಕು ಹುಳುವಿನ ಭಾಗವಷ್ಟೇ ಉಳಿಯಬಹುದಲ್ಲವೇ? ಆ ಮಿಣುಕು ಹುಳದ ಗಾತ್ರದ ಕೆಂಡದಿಂದ ಅದಕ್ಕಿಂತ ದೊಡ್ಡದಾದುದನ್ನು ಸುಡಲಾಗದೋ ಹಾಗೆ ಸೋಮ್ಯನೇ ನಿನ್ನ ಹದಿನಾರು ಭಾಗಗಳಲ್ಲಿ ಒಂದು ಭಾಗ ಮಾತ್ರ ಉಳಿದುಕೊಂಡಿದೆ. ಅದರಿಂದ ವೇದಗಳನ್ನು ನೀನು ಹೇಳಲಾರೆ. ಈಗ ನೀನು ಊಟ ಮಾಡಿ ಬಾ ನಂತರ ನನ್ನ ಮಾತು ಇನ್ನಷ್ಟು ಚೆನ್ನಾಗಿ ತಿಳಿದುಕೊಳ್ಳುವೆ.

ಶ್ವೇತಕೇತು ಊಟ ಮಾಡಿದನು. ನಂತರ ಉದ್ದಾಲಕನ ಬಳಿ ಬಂದನು. ಆಗ ಅವನಿಗೆ ಉದ್ದಾಲಕನು ಏನೇನು ಕೇಳಿದ್ದನೋ ಅವನ್ನೆಲ್ಲಾ ಹೇಳಲು ಸಾಧ್ಯವಾಯಿತು.

ಆಗ ಉದ್ದಾಲಕ:

ಸೋಮ್ಯನೇ, ನಿನ್ನ ಹದಿನಾರು ಭಾಗಗಳಲ್ಲಿ ಒಂದು ಭಾಗ ಮಾತ್ರ ಉಳಿದಿತ್ತು, ಅನ್ನದಿಂದ ಅದು ಪ್ರಜ್ವಲಿಸಿತು. ಆದುದರಿಂದ ನಿನಗೆ ವೇದವನ್ನು ಅನುಭವಿಸಲು ಸಾಧ್ಯವಾಯಿತು. ಆದುದರಿಂದ ಸೋಮ್ಯನೇ ಮನಸ್ಸು ಅನ್ನಮಯ, ಪ್ರಾಣವು ಅಪೋಮಯ (ನೀರಿನಿಂದ ಕೂಡಿದ್ದು). ವಾಕ್ಕು ತೇಜೋಮಯ(ಮಾತು ಬೆಳಕಿನಿಂದ ಆಗಿದ್ದು)


ಈ ಪ್ರಯೋಗವಂತೂ ವೇದಗಳ ಮಂತ್ರಗಳು ಸರ್ವಶಕ್ತ, ಅವುಗಳಲ್ಲಿ ಏನೇನೋ ಅತೀತದ ಶಕ್ತಿಗಳು ಹುದುಗಿವೆ ಎಂದೆಲ್ಲಾ ಪ್ರಚಾರ ಮಾಡುತ್ತಿದ್ದವರ ಮುಖದ ಮೇಲೆ ಹೊಡೆದಂತಿದೆ. ಅನ್ನವೆಂಬ ತೀರಾ ಸಾಮಾನ್ಯ ಲೌಕಿಕ ವಸ್ತುವಿಲ್ಲದೆ ವೇದಗಳ ಉಚ್ಚಾರಣೆ ಮತ್ತು ಅವುಗಳ ಮಂತ್ರಶಕ್ತಿಯೇನೂ ಫಲಿಸುವುದಿಲ್ಲ ಎಂದು ಸಾಬೀತು ಮಾಡುವ ಪ್ರಯೋಗ ಇದು.

ಹದಿನೈದು ದಿನಗಳ ದೀರ್ಘ ಉಪವಾಸದ ಮೂಲಕ ಮಾಡಿದ ಇಂತಹ ಪ್ರಯೋಗವಂತೂ ವಿಶ್ವದಲ್ಲೇ ಬಹಳ ಅಪೂರ್ವ. ಮತ್ತು ಈ ಪ್ರಯೋಗ ತಂದೆ ತನ್ನ ಮಗನ ಮೇಲೆಯೆ ನಡೆಸಿದ್ದು ಎನ್ನುವುದಂತೂ ಈ ಪ್ರಯೋಗ ಮಾಡಿದವರ ಬಗ್ಗೆ ಗೌರವ ಮೂಡಿಸುವಂತಹದು.

ಈ ಪ್ರಯೋಗ ಛಾಂದೋಗ್ಯ ಉಪನಿಷತ್ತಿನ ಆರನೇ ಅಧ್ಯಾಯದಲ್ಲಿ ಉಲ್ಲೇಖಿತವಾಗಿದೆ. ಇದು ರಚಿಸಲ್ಪಟ್ಟಿರುವ ಕಾಲ-ಬುದ್ಧ ಪೂರ್ವ ಕಾಲದಲ್ಲಿ ಸುಮಾರು ಕ್ರಿ.ಪೂ. 700 ರಿಂದ 600 ವರ್ಷಗಳ ಕಾಲದಲ್ಲಿ ಅಂದರೆ 2,500 ವರ್ಷಗಳ ಹಿಂದೆ ಈ ಪ್ರಯೋಗಗಳು ನಡೆದಿವೆ ಎಂಬುದು ಬಹಳ ಮಹತ್ವದ ಸಂಗತಿ. ಹೀಗೆ ಜಗತ್ತಿನ ಮೊದಲ ವೈಜ್ಞಾನಿಕ ಪ್ರಯೋಗ ನಡೆದಿರುವುದು ಉಪನಿಷತ್ತುಗಳಲ್ಲಿ ಎಂಬುದನ್ನುಗಮನಿಸಬೇಕಾಗಿದೆ. ಗ್ರೀಸ್ ದೇಶದ ಥೇಲ್ಸ್ ಎಂಬುವರನ್ನು ಮೊದಲ ವಿಜ್ಞಾನಿ, ತತ್ವಶಾಸ್ತ್ರಜ್ಞ ಎಂದೆಲ್ಲಾ ಯೂರೋಪಿನ ತತ್ವಶಾಸ್ತ್ರದ ಚರಿತ್ರೆಯಲ್ಲಿ ವರ್ಣಿಸಲಾಗಿದೆ. ಆದರೆ ಉದ್ದಾಲಕ ಅರುಣಿ ಅವರಿಗಿಂತ ಕನಿಷ್ಠ ನೂರು ವರ್ಷ ಮೊದಲಿನವರಾಗಿ, ದಾಖಲಾದ ಮೊದಲ ಪ್ರಯೋಗಗಳನ್ನು ನಡೆಸಿದವರಾಗಿದ್ದಾರೆ.

ಈ ರೀತಿಯ ಪ್ರಯೋಗಗಳ ಮೂಲಕ ತಮ್ಮ ಮಗನಿಗೆ ಉದ್ದಾಲಕ ಅರುಣಿ ಕಲಿಸ ಬಯಸಿದ್ದೇನು ಎನ್ನುವದರ ವಿವರಣೆಯೂ ಛಾಂದೋಗ್ಯ ಉಪನಿಷತ್ತಿನಲ್ಲಿದೆ. ಉದ್ದಾಲಕ ತನ್ನ ಮಗನನ್ನು ವೇದ ಪಾರಂಗತನಾಗಿ ಬರಲು ಹನ್ನೆರಡು ವರ್ಷ ಗುರುಕುಲಕ್ಕೆ ಕಳಿಸಿರುತ್ತಾನೆ. ಮಗ 'ಸರ್ವಾನ್ ವೇದಾನಧೀತ್ಯ ಮಹಾಮನಾ ಅನೂಚಾನಮಾನೀ'ಯಾಗಿ ಬರುತ್ತಾನೆ. ಎಲ್ಲ ವೇದಗಳನ್ನು ಕಲಿತವನಾಗಿ, ಪರಂಪರೆ ಪದ್ಧತಿಗಳನ್ನು ಅರಿತವನಾಗಿರುತ್ತಾನೆ. ಅದೇ ಸಮಯದಲ್ಲಿ ತನಗೆ ಯಾರೂ ಸಮಾನರಿಲ್ಲವೆಂದು ಅಹಂಕಾರಿಯಾಗಿದ್ದನು. ಆಗ ತಂದೆ ಅವನಿಗೆ ಕೆಲ ಪ್ರಶ್ನೆಗಳನ್ನು ಹಾಕುತ್ತಾನೆ. ಶ್ರುತಿಯನ್ನು ಓದಿದ ನಿನಗೆ ಒಂದು ಮಣ್ಣು ಮುದ್ದೆಯನ್ನು ತಿಳಿದುಕೊಂಡದ್ದರಿಂದ ಮಣ್ಣಿನಿಂದ ಮಾಡಲ್ಪಟ್ಟ ಎಲ್ಲವೂ ತಿಳಿದುಕೊಂಡಂತಾಗುತ್ತದೋ ಅದರ ಬಗ್ಗೆ ತಿಳಿದಿದೆಯೇ? ಜೇಡಿ ಮಣ್ಣಿನಿಂದ ಮಾಡಲ್ಪಟ್ಟ ಬೇರೆಲ್ಲ ವಸ್ತುಗಳು ಕೇವಲ ಪದಗಳ ವ್ಯತ್ಯಾಸ ಮಾತ್ರವೇ ಆಗುತ್ತದೆ. ಮೂಲಗುಣ ಮಾತ್ರ ಜೇಡಿ ಮಣ್ಣಿನದೇ ಆಗಿರುತ್ತದೆ. ಹಾಗೆಯೇ ಚಿನ್ನದ ಗಟ್ಟಿಯ ಬಗ್ಗೆ ತಿಳಿದುಕೊಂಡರೆ ಚಿನ್ನದಿಂದ ಮಾಡಿದ್ದೆಲ್ಲವನ್ನೂ, ಕಬ್ಬಿಣದ ಉಗುರು ಕತ್ತರಿಯನ್ನು ತಿಳಿದುಕೊಂಡರೆ ಕಬ್ಬಿಣದಿಂದ ಮಾಡಿದ್ದೆಲ್ಲವನ್ನೂ ತಿಳಿದುಕೊಂಡಂತಾಗುತ್ತದೆ. ಈ ಆದೇಶ- ಅರಿವನ್ನು ಪಡೆದಿರುವೆಯಾ ಎಂದು ಕೇಳುತ್ತಾನೆ. ಆಗ ಮಗ ಹೇಳುತ್ತಾನೆ ಇದು ನನ್ನ ಗುರುಗಳಿಗೆ ತಿಳಿದಿರಲಿಲ್ಲ ನನಗೆ ಹೇಳಿಕೊಟ್ಟಿಲ್ಲ, ಆದ್ದರಿಂದ ನೀವು ನನಗೆ ಇದನ್ನು ಕಲಿಸಿಕೊಡಿ ಎಂದು ತಂದೆಯನ್ನು ಕೇಳುತ್ತಾನೆ.

ಮಗನ ಈ ವಿನಂತಿಗೆ ಉತ್ತರವಾಗಿ ಉದ್ದಾಲಕ ಈ ಪ್ರಯೋಗಗಳ ಮೂಲಕ ವೇದಗಳಿಗೂ ಮೀರಿದ ಜ್ಞಾನವನ್ನು ಪ್ರಯೋಗಗಳ ಮೂಲಕ ತಿಳಿಸಿಕೊಡಲು ಆರಂಭಿಸುತ್ತಾನೆ. ಇದರಿಂದ ಸ್ಪಷ್ಟವಾಗುವುದು ಹನ್ನೆರಡು ವರ್ಷಗಳ ವೇದ ಕಲಿಕೆ ಜೀವನದ ಮೂಲಭೂತ ಪ್ರಶ್ನೆಗಳ ಕಡೆಗೆ ಗಮನವನ್ನೇ ಕೊಟ್ಟಿರಲಿಲ್ಲ. ಪದಗಳ ಮೇಲೆ, ಹೆಸರುಗಳ ಮೇಲೆಯೇ ಅವಲಂಬಿಸಿದ ಶಿಕ್ಷಣವಾಗಿತ್ತು. ಪದಗಳ ಹಿಂದಿನ ವಸ್ತುಗಳು, ಅದರ ಸ್ವಭಾವ, ಗುಣಗಳು ಇಂತಹ ಮೂಲಭೂತ ವಿಷಯಗಳ ಕಡೆಗೆ ಗಮನ ಕೊಡುತ್ತಿರಲಿಲ್ಲ. ಆದರೆ ನನಗೆ ಸಮಾನರಿಲ್ಲವೆಂಬ ಅಹಂಕಾರವನ್ನು ಮಾತ್ರ ಹೇರಳವಾಗಿ ಬೆಳೆಸುತ್ತಿತ್ತು. ಇದನ್ನು ಉದ್ದಾಲಕ ಪ್ರಶ್ನಿಸುತ್ತಿದ್ದಾನೆ. ಮತ್ತು ನಿಜ ಬದುಕಿನ ಮೂಲಕ ತಿಳಿದುಕೊಳ್ಳಬೇಕೆಂಬ ಶಿಕ್ಷಣದ ರೀತಿಯನ್ನು ಹಾಕಿಕೊಡುತ್ತಿದ್ದಾನೆ. ಅವನು ನೀಡಿದ ಉದಾಹರಣೆಗಳನ್ನು ನೋಡಿ. ಕುಂಬಾರ, ಕಮ್ಮಾರ, ಅಕ್ಕಸಾಲಿಗಳ ದಿನನಿತ್ಯದ ಕಸುಬಿನಲ್ಲಿ ಪಡೆವ ಜ್ಞಾನ ಅದು. ಅದು ನಿನಗೆ ಗೊತ್ತೆ ಎನ್ನುವ, ಮತ್ತು ಅದು ಗೊತ್ತಿಲ್ಲದಿದ್ದರೆ ನಿನ್ನೆಲ್ಲಾ ವೇದ ಶಿಕ್ಷಣ ವ್ಯರ್ಥವೆನ್ನುವ ಧ್ವನಿ ಇದರಲ್ಲಿ ಸ್ಪಷ್ಟವಾಗಿದೆ. ವೇದ ಪಂಡಿತರ ಜ್ಞಾನಕ್ಕೆ ಪರ್ಯಾಯವಾಗಿ ಕುಂಬಾರ, ಕಮ್ಮಾರರ ಅನುಭವ ಇದು ಉದ್ದಾಲಕ ತನ್ನ ಮಗನಿಗೆ ತೋರಿಸುತ್ತಿರುವ ಜ್ಞಾನ ಮಾರ್ಗ.




ಪರೋಕ್ಷ ಜ್ಞಾನವೇ ದೇವರಿಗೆ ಬಹಳ ಪ್ರಿಯ. 'ಪರೋಕ್ಷಪ್ರಿಯಾ ಇವ ಹಿ ವೈ ದೇವಾ' ಎಂಬ ಬ್ರಾಹ್ಮಣಗಳು ಹಾಗೂ ಅರಣ್ಯಕಗಳ ಜ್ಞಾನ ತತ್ವಕ್ಕೇ, ಉಪನಿಷತ್ತುಗಳಲ್ಲಿಯೂ ಪ್ರಧಾನವಾಗಿರುವ ಆಧ್ಯಾತ್ಮ ಜ್ಞಾನದಲ್ಲಿ ಕೂಡ ಯಾಜ್ಞವಲ್ಕ್ಯನೆಂಬ ಬಹಳ ಪ್ರಸಿದ್ಧಿಗೊಳಿಸಲ್ಪಟ್ಟ ಋಷಿ ಹೇಳುವಂತೆ 'ಪರೋಕ್ಷ ಪ್ರಿಯ ಇವ ಹಿ ವೈ ದೇವಾಃ, ಪ್ರತ್ಯಕ್ಷ ದ್ವಿಷಃ'. ಅಂದರೆ ದೇವರು ಪರೋಕ್ಷವನ್ನು ಪ್ರೀತಿಸುವವರು ಮಾತ್ರವಲ್ಲ ಪ್ರತ್ಯಕ್ಷವನ್ನು ದ್ವೇಷಿಸುವವರೂ ಕೂಡ. ಕಣ್ಣಿಗೆ ಕಾಣುವುದನ್ನು ಬಿಟ್ಟು ಕಾಣದುದಕ್ಕೆ, ಜನರಿಗೆ ಬದುಕನ್ನು ತಿರಸ್ಕರಿಸಿ ಪರವೆಂಬ ಕಾಣದ ಲೋಕದ ಕಡೆಗೆ ಸೆಳೆಯುವ 'ಜ್ಞಾನ' ಮತ್ತು ಅದನ್ನು ಪಡೆಯುವ ಜ್ಞಾನ ಪದ್ಧತಿಗೇ ವಿರೋಧವಾಗಿದೆ ಉದ್ದಾಲಕನ ಮಾರ್ಗ.


ನಿತ್ಯದ ಬದುಕಿನ ಅನೇಕ ಉದಾಹರಣೆಗಳನ್ನು ನೀಡುತ್ತಾನೆ ಉದ್ದಾಲಕ: ಮೊಸರನ್ನು ಕಡೆದಾಗ ಯಾವುದು ಸೂಕ್ಷಾಂಶವೋ ಅದು ಮೇಲಕ್ಕೇಳುತ್ತದೆ ಮತ್ತು ಬೆಣ್ಣೆಯಾಗುತ್ತದೆ. ಅದೇ ರೀತಿ ಅನ್ನವನ್ನು ತಿಂದಾಗ ಅದರಲ್ಲಿನ ಸೂಕ್ಷಾಂಶ ಅದು ಮೇಲಕ್ಕೇಳುತ್ತದೆ ಮತ್ತು ಮನಸ್ಸಾಗುತ್ತದೆ. ಇದು ಒಂದು ಉದಾಹರಣೆ.

ಉದ್ದಾಲಕ ತನ್ನದೇ ಆದ ಸೃಷ್ಟಿ ತತ್ವವನ್ನು ಮುಂದಿಡುತ್ತಾನೆ. ಇಡೀ ಜಗತ್ತಿನ ಮೂಲವಸ್ತು ಒಂದೇ ಎಂದು ಅದಕ್ಕೆ 'ಸತ್' ಎಂದು ಹೆಸರು ನೀಡಿದ್ದಾನೆ. ಅದು ಮೊದಲು ತೇಜವಾಗುತ್ತದೆ. ಅಂದರೆ ಬೆಳಕು, ಸೂರ್ಯನ ತೇಜ. ಇದು ಬೆವರನ್ನು ಹುಟ್ಟಿಸುತ್ತದೆ. ಆದ್ದರಿಂದ ಅದು ನೀರಿಗೆ ಜನ್ಮ ನೀಡುತ್ತದೆ. ನೀರು ಮಳೆಯ ರೂಪದಲ್ಲಿ ಬೆಳೆಗೆ ಕಾರಣವಾಗುತ್ತದೆ. ಆದ್ದರಿಂದ ನೀರು ಅನ್ನಕ್ಕೆ ಜನ್ಮ ನೀಡುತ್ತದೆ. ಹೀಗೆ ಪ್ರತಿಯೊಂದೂ ಮೂರು ಮೂರಾಗಿ ಸಂಸ್ಕೃತದಲ್ಲಿ ತ್ರಿವೃತ್ಕರಣ ಎಂದು ಕರೆಯಲಾದ ಪ್ರಕ್ರಿಯೆಗೆ ಒಳಗಾಗುತ್ತದೆ. ಇದೇ ಎಲ್ಲ ವಸ್ತುಗಳ ಹಾಗೂ ಜೀವಿಗಳ ಹುಟ್ಟಿಗೆ ಕಾರಣ. ಈ ಸೃಷ್ಟಿ ಕ್ರಿಯೆಯ ವಿವರಣೆಯಲ್ಲಿ ಎಲ್ಲಿಯೂ ದೇವರ ಪ್ರಸ್ತಾಪವಾಗಲೀ, ಉಪನಿಷತ್ತುಗಳು ಬಹಳವಾಗಿ ವಿವರಿಸಿದೆ ಎಂಬ ಬ್ರಹ್ಮನ್ ಎಂಬ ತತ್ವವಾಗಲೀ ಇಲ್ಲ. ಇದು ಬಹಳ ಮುಖ್ಯವಾಗಿ ಗಮನಿಸಬೇಕಾದ್ದು.

ಉಪನಿಷತ್ತುಗಳ ಬಗ್ಗೆ ಎಷ್ಟು ಟನ್ ಕಾಗದ ಮತ್ತು ಈಗ ನೆಟ್ ಪ್ರಪಂಚದಲ್ಲಿ ಎಷ್ಟು ಜಿಬಿ (ಗಿಗಾ ಬೈಟ್) ಜಾಗವನ್ನು ವ್ಯಯಿಸಿದ ವ್ಯಾಖ್ಯಾನಗಳು ಸೃಷ್ಟಿಯಾಗಿರಬಹುದು? ಎಷ್ಟೊಂದು ರೀತಿಯ ವ್ಯಾಖ್ಯಾನಗಳು ಬಂದಿರಬಹುದು? ಆದರೆ ಉದ್ದಾಲಕನ ಪ್ರಪಂಚ ಮುಖಿ ಅರಿವಿನ ಮಾರ್ಗವನ್ನು ವಿವರಿಸುವುದೇ ಇಲ್ಲ. ವೇದ, ಪುರಾಣಗಳಲ್ಲಿ ಇಂದಿನ ವಿಜ್ಞಾನದ ಎಲ್ಲಾ ಶೋಧಗಳೂ ಇವೆ ಎಂದು ದಿನ ನಿತ್ಯ ಬೊಗಳೆ ಹೊಡೆಯುವವರೂ ಕೂಡ ಉದ್ದಾಲಕನ ಈ ವೈಜ್ಞಾನಿಕ ಪ್ರಯೋಗಗಳ ಬಗ್ಗೆ, ಅವನು ಜಗತ್ತಿನ ಮೊದಲ ಪ್ರಯೋಗಕಾರನೆಂಬ ಬಗ್ಗೆ ಹೆಮ್ಮೆಯನ್ನು ಪಡುವುದು ಕಾಣುವುದಿಲ್ಲ. ವಿಜ್ಞಾನದ ಕಲಿಕೆಯ ಬಗ್ಗೆ ಸಕಾರಾತ್ಮಕವಾಗಿ ಬಿಂಬಿಸಿದ ವಿವೇಕಾನಂದರು ಸ್ಥಾಪಿಸಿದ ರಾಮಕೃಷ್ಣಾಶ್ರಮ ಪ್ರಕಟಿಸಿದ ಸ್ವಾಮಿ ಆದಿ ದೇವಾನಂದರ ಅನುವಾದ ಮತ್ತು ಟಿಪ್ಪಣಿಗಳಿಗೆ ಅವರು ಬರೆದ ದೀರ್ಘ ಪ್ರಸ್ತಾವನೆಯಲ್ಲಿ ಉದ್ದಾಲಕ ಅರುಣಿಯ ಈ ಪ್ರಯೋಗಗಳ ಬಗ್ಗೆ ಒಂದೇ ಒಂದು ಮಾತು ಆಡುವುದಿಲ್ಲ. ಎಲ್ಲ ಅಧ್ಯಾಯಗಳ ಸಾರಾಂಶವನ್ನು ಕೊಡುವ ಆದಿ ದೇವಾನಂದರು ಆರನೇ ಅಧ್ಯಾಯದ ಈ ಪ್ರಯೋಗಗಳ ಭಾಗವನ್ನು ಹಾರಿಸಿಯೇ ಬಿಡುತ್ತಾರೆ. ಇಂತಹ ಒಕ್ಕಣ್ಣ ನೋಟದ ಮೂಲಕವೇ ಭಾರತದ ತತ್ವಶಾಸ್ತ್ರ ನಮಗೆ ದಕ್ಕಿರುವುದು. ನಮ್ಮ ದೇಶದಲ್ಲಿ ವಿಜ್ಞಾನದ ಬೆಳವಣಿಗೆಯನ್ನು, ಬದುಕಿನ ಜೀವಂತಿಕೆಯನ್ನು ಕಮರಿಸಿದೆ ಎಂಬುದಕ್ಕೆ ಉದ್ದಾಲಕ ಅರುಣಿಯ ಈ ಉದಾಹರಣೆಯೆ ಸಾಕ್ಷಿ.

ಮತ್ತೊಂದು ಮುಖ್ಯವಾದ ಮಾತು ಏನೆಂದರೆ ಉಪನಿಷತ್ತಿನ ಸಾರವನ್ನು ಹೇಳುತ್ತವೆ ಎಂದು ನಾಲ್ಕು ಮಹಾವಾಕ್ಯಗಳಲ್ಲಿ ಒಂದು ತತ್ ತ್ವಂ ಅಸಿ ಎಂಬ ತತ್ವಮಸಿ ಎಂಬ ವಾಕ್ಯ ಇದನ್ನು ಹೇಳಿದವನು ಉದ್ದಾಲಕ. ಇದನ್ನು ಅವನು ಈ ಪ್ರಯೋಗಗಳು ಮತ್ತು ಜೀವನದ ಉದಾಹರಣೆಗಳಿಂದ ಕಂಡುಕೊಂಡುದುದು. ಆದರೆ ಈ ವಾಕ್ಯವನ್ನು ಎಷ್ಟೆಲ್ಲಾ ರೀತಿಯಲ್ಲಿ ತಿರುಚಿ ವ್ಯಾಖ್ಯಾನಗಳನ್ನು ನೀಡಲಾಗಿದೆಯೆಂದರೆ ಉದ್ದಾಲಕನೇ ತಿರುವು ಮುರುವಾಗಿದ್ದಾನೆ.

ಈ ರೀತಿಯ ವ್ಯಾಖ್ಯಾನಗಳ ಮೂಲ ಯಾರು ಗೊತ್ತೆ ? ಮತ್ತೆ ಅದೇ ಶಂಕರರು. ಉಪನಿಷತ್ತುಗಳಲ್ಲಿ ಏಳು ಮುಖ್ಯ ವೈಚಾರಿಕ ಪಂಥಗಳಿವೆ ಎಂಬ ಬರುವಾರವರ ವಿಶ್ಲೇಷಣೆಯನ್ನು ಹಿಂದಿನ ಸಂಚಿಕೆಯಲ್ಲಿ ಉಲ್ಲೇಖಿಸಿದ್ದೇನೆ. ಅದರಲ್ಲಿ ಒಂದು ಮುಖ್ಯವಾದದ್ದು ಉದ್ದಾಲಕನ ವಿಚಾರ ಸರಣಿ. ಆದರೆ ಉಪನಿಷತ್ತಿನ ವಿಚಾರ ಸಂಪತ್ತನ್ನು, ವೈವಿಧ್ಯತೆಯನ್ನು ಮುಚ್ಚಿ ಹಾಕಿ ಅವುಗಳನ್ನು ವೇದಾಂತ ಎಂಬ ಒಂದೇ ವಿಚಾರ ಸರಣಿಯ ಪ್ರತಿಪಾದನೆ ಮಾಡಿದ ಗ್ರಂಥಗಳು ಎಂದೇ ಭಾರತದ ಜನರೆಲ್ಲಾ ಕಣ್ಮುಚ್ಚಿ ನಂಬಿಕೊಳ್ಳುವಂತಾಗಿದೆ. ಇದನ್ನು ಕೆಲ ಆಧುನಿಕ ವಿದ್ವಾಂಸರು ಎತ್ತಿ ತೋರಿಸಿದ್ದಾರೆ. ಉದ್ದಾಲಕ ಅರುಣಿಯ ಬಗ್ಗೆ ವಿವರವಾದ ಶೋಧವನ್ನು ಮಾಡಿದವರಲ್ಲಿ ದೇವೀಪ್ರಸಾದ್ ಚಟ್ಟೋಪಾಧ್ಯಾಯರು ಮುಖ್ಯರಾದವರು. ಅವರ ಲೋಕಾಯತ, ಭಾರತದ ವಿಜ್ಞಾನದ ಇತಿಹಾಸದ ಬಗೆಗಿನ ಅವರ ಎರಡು ಸಂಪುಟಗಳನ್ನು ಆಸಕ್ತರು ಅಧ್ಯಯನ ಮಾಡಬಹುದು. ಕನ್ನಡದಲ್ಲಿ ಇದನ್ನು ಜಿ. ರಾಮಕೃಷ್ಣರ ಲೇಖನಗಳ ಮತ್ತು ಲೋಕಾಯತದ ಸಂಗ್ರಹಾನುವಾದದ ಮೂಲಕ ಕೆಲ ಮಟ್ಟಿಗೆ ಪಡೆದುಕೊಳ್ಳಬಹುದು. ●



ಸಗಟು ಬೆಲೆ ಸೂಚ್ಯಂಕ ಇಳಿದಿದೆ ಎಂದು ಡಂಗೂರ ಸಾರಲಾಗುತ್ತಿದೆ. ಆದರೆ ಇದು ಸಂಭವಿಸಿರುವುದು ಅಂತರ್ರಾಷ್ಟ್ರೀಯ ತೈಲ ಬೆಲೆಗಳಲ್ಲಿ ತೀವ್ರ ಇಳಿಕೆ ನಡೆದಿರುವ ಸಂದರ್ಭದಲ್ಲಿ ಎಂದು ಹೇಳುತ್ತಿಲ್ಲ. ವಾಸ್ತವವಾಗಿ ಇಂತಹ ಸನ್ನಿವೇಶದಲ್ಲಿ ನಮ್ಮ ದೇಶದ ಚಾಲ್ತಿ ಖಾತೆ ಕೊರತೆ ಇಳಿದು ದೇಶದ ಆರ್ಥಿಕ ನೆಮ್ಮದಿಯ ಉಸಿರು ಬಿಡುವಂತಾಗಬೇಕಿತ್ತು. ಹಾಗೆ ಆಗಿಲ್ಲ. ಬದಲಾಗಿ ದುಷ್ಟ ಅಜೆಂಡಾದ ಅನುಷ್ಠಾನ ಮುಂದುವರೆಯುತ್ತಿದೆ.



# ಮೋದಿ ಸರಕಾರದ ಮಾರಣಾಂತಿಕ ವಿಷಪ್ರಾಶಾಣ

– ಸೀತಾರಾಮ್ ಯೆಚೂರಿ

ಜನತೆಯ ಮೇಲೆ ಹೆಚ್ಚೆಚ್ಚು ಆರ್ಥಿಕ ಹೊರೆಗಳ ಹೇರಿಕೆ ಒಂದೆಡೆಯಲ್ಲಿ, ಮತ್ತೊಂದೆಡೆಯಲ್ಲಿ, ಕೋಮುಧ್ರುವೀಕರಣವನ್ನು ತೀಕ್ಷ್ಣಗೊಳಿಸುವ ಕೆಲಸ, ಇವೆರಡರ ಮಾರಣಾಂತಿಕ ಅಮಲುಕೋರ ಮಿಶ್ರಣ ಈ ಮೋದಿ ಸರಕಾರದ ಅಡಿಯಲ್ಲಿ ತೀವ್ರಗೊಳ್ಳುತ್ತಲೇ ಇದೆ.

ಸಗಟು ಬೆಲೆ ಸೂಚ್ಯಂಕ(ಡಬ್ಲ್ಯುಪಿಐ)ದಲ್ಲಿ ಆಗಾಗ ಕಾಣಿಸಿಕೊಳ್ಳುವ ಇಳಿಕೆಯ ಬಗ್ಗೆ ಬಹಳ ಪ್ರಚಾರ ಮಾಡಲಾಗುತ್ತಿದೆ. ಕೇಂದ್ರ ವಾಣಿಜ್ಯ ಮಂತ್ರಾಲಯದ ಬಿಡುಗಡೆ ಮಾಡಿರುವ ಮಾಹಿತಿಗಳ ಪ್ರಕಾರ ಮಾಸಿಕ ಸಗಟು ಬೆಲೆ ಸೂಚ್ಯಂಕವನ್ನು ಆಧರಿಸಿದ ವಾರ್ಷಿಕ ಹಣದುಬ್ಬರ ದರ ಸಪ್ಟಂಬರ್ 2014ರಲ್ಲಿ 2.38 ಶೆ. ಕ್ಕೆ ಬಂದು ನಿಂತಿದೆ, ಕಳೆದ ತಿಂಗಳು ಇದು 3.74ಶೇ. ಇತ್ತು. ಕಳೆದ ವರ್ಷ ಈ ತಿಂಗಳು 7.05ಶೇ. ಇತ್ತು.

ಜನಸಾಮಾನ್ಯರ ದೈನಂದಿನ ಸ್ಥಿತಿ–ಗತಿಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಬಳಕೆದಾರ ಬೆಲೆ ಸೂಚ್ಯಂಕ(ಸಿಪಿಐ)ವೇ ಆಧಾರ ಎಂಬುದು ಯಾರಿಗಾದರೂ ಗೊತ್ತಿರುವ ಸಂಗತಿ. ಇದು ಯಾವಾಗಲೂ ಸಗಟು ಬೆಲೆ ಸೂಚ್ಯಂಕಕ್ಕಿಂತ ಎಷ್ಟೋ ಪಟ್ಟು ಮೇಲಿರುತ್ತದೆ. ಎಲ್ಲ ಜೀವನಾವಶ್ಯಕ ವಸ್ತುಗಳ ಬೆಲೆಗಳು ಸತತವಾಗಿ ಏರುತ್ತಲೇ ಇವೆ, ಜನಸಾಮಾನ್ಯರ ಜೀವನದ ಗುಣಮಟ್ಟದ ಮೇಲೆ ಹೊರೆಗಳನ್ನು ಹಾಕುತ್ತಲೇ ಇವೆ ಎಂಬುದು ನಿಯಮಿತವಾಗಿ ಮಾರುಕಟ್ಟೆಗೆ ಹೋಗುವವರ ಅನುಭವದ ಸಂಗತಿ.

**ಪ್ರಾಥಮಿಕ ಅರ್ಥಶಾಸ್ತ್ರ**

ಅಲ್ಲದೆ ಹಣದುಬ್ಬರ ದರ ಎಂಬ ಪರಿಕಲ್ಪನೆಯನ್ನೂ ಅರ್ಥ ಮಾಡಿಕೊಳ್ಳಬೇಕಾಗಿದೆ. ಹಣದುಬ್ಬರ ದರ ಇಳಿದಿದೆ ಎಂದರೆ ಬೆಲೆಗಳು ಇಳಿದಿವೆ ಎಂದರ್ಥವಲ್ಲ. ಅದರರ್ಥ ಬೆಲೆಯೇರಿಕೆಯ ದರ ಹಿಂದೆ ಇದ್ದುದಕ್ಕಿಂತ ಇಳಿದಿದೆ ಎಂದಷ್ಟೇ. ಬೆಲೆಗಳಂತೂ ಏರುತ್ತಲೇ ಇವೆ. ಈ ಪ್ರಾಥಮಿಕ ಮಟ್ಟದ ಅರ್ಥಶಾಸ್ತ್ರ ಸರಕಾರದ ಮಂತ್ರಿಗಳಿಗೆ, ವಕ್ತಾರರಿಗೆ ತಿಳಿದಿಲ್ಲವೇನೋ. ಸಾಲದ್ದಕ್ಕೆ ಭಾರತದ ಕಾರ್ಪೊರೇಟ್ ಕುಳಗಳು ಅವರಿಗೆ ಪರಾಕು ಹಾಡುತ್ತಿದ್ದಾರೆ.

ಈ ಹಣದುಬ್ಬರದ ಇಳಿಕೆಯ ಅಂಕಿ–ಅಂಶಗಳು ಕೂಡ ಬರುತ್ತಿರುವುದು ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ ಬೆಲೆಗಳಲ್ಲಿ ಒಂದು ಅಭೂತಪೂರ್ವ ಇಳಿಕೆ ಕಂಡು ಬರುತ್ತಿರುವಾಗ. ಈ ಇಳಿಕೆ ಭಾರತದ ಆಮದು ಖರ್ಚುಗಳ ಮೇಲಿನ ಒತ್ತಡಗಳನ್ನು ಬಹಳವಾಗಿ ಇಳಿಸುತ್ತಿದೆ. ಅಂತರ್ರಾಷ್ಟ್ರೀಯ ತೈಲಬೆಲೆಗಳಲ್ಲಿ ಈ ತೀವ್ರ ಇಳಿಕೆ ರಶ್ಯಾವನ್ನು ಹಿಂಡಲಿಕ್ಕಾಗಿ ಕೃತಕವಾಗಿ ರೂಪಿಸಿರುವ ಇಳಿಕೆ ಎಂದು ಹಲವರು ಹೇಳಿದ್ದಾರೆ.

ರಶ್ಯಾ ಒಂದು ಪ್ರಮುಖ ತೈಲ ರಫ್ತು ಮಾಡುವ ದೇಶ. ಅದೀಗ ಉಕ್ರೇನಿನಲ್ಲಿ ದಾಳಿಗೆ ಒಳಗಾಗಿರುವ ಅಲ್ಲಿಯ ಜನಸಾಮಾನ್ಯರನ್ನು ರಕ್ಷಿಸಲು ಮಧ್ಯಪ್ರವೇಶ ಮಾಡಿದೆ. ತೈಲ ಬೆಲೆಗಳನ್ನು ಇಳಿಸುವ ಮೂಲಕ ಅದರ ಆದಾಯಗಳಿಗೆ ಸಂಚಕಾರ ತಂದು ಉಕ್ರೇನಿನಿಂದ ಅದು ಹಿಂದಕ್ಕೆ ಹೋಗುವಂತೆ ಒತ್ತಡ ಹೇರಲು ಹೀಗೆ ಮಾಡಲಾಗುತ್ತಿದೆ ಎನ್ನಲಾಗಿದೆ. ಅಮೆರಿಕ ಮತ್ತು ಯುರೋಪ್ ಉಕ್ರೇನನ್ನು ರಶ್ಯಾದ ಅವಲಂಬನೆಯಿಂದ ತಪ್ಪಿಸಿ ಅದನ್ನು ಯುರೋಪಿಯನ್ ಒಕ್ಕೂಟದೊಳಕ್ಕೆ ಸೇರಿಸಿಕೊಂಡು ಅದರ ವಿಶಾಲ ನೈಸರ್ಗಿಕ ಸಂಪನ್ಮೂಲಗಳನ್ನು ತಮ್ಮ ಏಗುತ್ತಿರುವ ಆರ್ಥಿಕಕ್ಕೆ ಚೈತನ್ಯ ತುಂಬಲು ಬಳಸಿಕೊಳ್ಳಬೇಕೆಂಬ ಪ್ರಯತ್ನ ನಡೆಸಿವೆ.

ಈ ವಿವರಣೆ ಏನೇ ಇರಲಿ, ಅಂತರ್ರಾಷ್ಟ್ರೀಯ ತೈಲ ಬೆಲೆಗಳಲ್ಲಿ ಈ ತೀವ್ರವಾದ ಇಳಿಕೆ ನಮ್ಮ ದೇಶದ ಚಾಲ್ತಿ ಖಾತೆ ಕೊರತೆಯನ್ನು ಕಡಿಮೆ ಮಾಡಬೇಕಾಗಿತ್ತು. ಇದು ಭಾರತೀಯ ಆರ್ಥಿಕದ ಮೇಲಿನ ಮತ್ತು ನಮ್ಮ ಜಾಗತಿಕ ಸ್ಥಾನದ ಮೇಲಿನ ಒತ್ತಡಗಳನ್ನು ಹಗುರಗೊಳಿಸಬಹುದಾಗಿತ್ತು.

**ಕಾರ್ಪೊರೇಟ್ ಕುಳಗಳ ಅನುಕೂಲಕ್ಕಾಗಿ**

ಆದರೆ ಈ ವರ್ಷ ಸಪ್ಟಂಬರಿನಲ್ಲಿ ವ್ಯಾಪಾರ ಕೊರತೆ ವಿಪರೀತವಾಗಿ 14.2 ಬಿಲಿಯ(ಶತಕೋಟಿ) ಡಾಲರುಗಳಿಗೆ ಏರಿತು. ಕಳೆದ 18 ತಿಂಗಳಲ್ಲಿ ಎಂದೂ ಆ ಕೊರತೆ ಈ ಮಟ್ಟಕ್ಕೆ ಏರಿರಲಿಲ್ಲ. ಇದಕ್ಕೆ ಕಾರಣ ಚಿನ್ನದ ಆಮದು ಬೃಹತ್ ಪ್ರಮಾಣದಲ್ಲಿ ಏರಿದ್ದು. ಸಪ್ಟಂಬರ್‌ನ ಒಂದು ತಿಂಗಳಲ್ಲೇ ಆಮದುಗಳು 3.8 ಬಿಲಿಯ(ಅಂದರೆ 380 ಕೋಟಿ) ಡಾಲರುಗಳಿಗೆ ಏರಿದವು. ಹಿಂದಿನ ತಿಂಗಳು ಅದು 682.5 ಮಿಲಿಯ (ಅಂದರೆ 68.2 ಕೋಟಿ)ಡಾಲರುಗಳಷ್ಟೇ ಇತ್ತು! ಎಲ್ಲೆಡೆಗಳಿಂದ ದಾಳಿಗಳಿಗೆ ಒಳಗಾಗಿದ್ದ ಯುಪಿಎ–2 ಸರಕಾರ ತನ್ನ ಕೊನೆಯ ವರ್ಷದಲ್ಲಿ ವ್ಯಾಪಾರ ಕೊರತೆಯನ್ನು ತಡೆಗಟ್ಟಲು ಚಿನ್ನದ ಆಮದಿನ ಮೇಲೆ ತೀವ್ರ ಮಿತಿಗಳನ್ನು ಹೇರಿತು.

ಇದು ಭಾರತದ ಕಾರ್ಪೊರೇಟ್ ಕುಳಗಳನ್ನು ಬಹಳವಾಗಿ ತಟ್ಟಿತ್ತು. ಏಕೆಂದರೆ ಅವರು ತಮ್ಮ ಅಪಾರ ಮಿಗುತಾಯಗಳನ್ನು ಸಟ್ಟಾಕೋರ ಚಟುವಟಿಕೆಗಳಲ್ಲಿ – ರಿಯಲ್ ಎಸ್ಟೇಟ್, ಚಿನ್ನದ ಶೇಖರಣೆಯಲ್ಲಿ ಹೂಡುತ್ತಾರೆ, ಮತ್ತು ತಮ್ಮ ಉಳಿತಾಯಗಳನ್ನು ವಿದೇಶಿ ವಿನಿಮಯಕ್ಕೆ ವರ್ಗಾಯಿಸುತ್ತಾರೆ, ಆಮೂಲಕ ಭಾರತದ ರೂಪಾಯಿಯ ಮೌಲ್ಯವನ್ನು ಇಳಿಸುತ್ತಾರೆ. ಅವರು ಮೋದಿಯವರ ಚುನಾವಣಾ ಪ್ರಚಾರಕ್ಕೆ ನೀಡಿದ ಹಣಕಾಸು ಬೆಂಬಲಕ್ಕೆ ಮತ್ತು ಇಂದು ಕೂಡ ಅವರ ಪರಾಕು ಹಾಡುತ್ತಲೇ ಇರುವುದಕ್ಕೆ ಪ್ರತಿಯಾಗಿ, ಅವರಿಗೆ ಅನುಕೂಲ ಕಲ್ಪಿಸಲೆಂದೇ ಚಿನ್ನದ ಆಮದುಗಳ ಮೇಲೆ ಹಾಕಿದ್ದ ಇಂತಹ ಮಿತಿಗಳನ್ನು ಸಡಿಲಗೊಳಿಸಲಾಯಿತು ಎಂಬುದು ಸ್ಪಷ್ಟ.

ನಿಜ, ಇವೆಲ್ಲ ನಮ್ಮ ಆರ್ಥಿಕದ ಮೂಲಭೂತ ಅಂಶಗಳಿಗೆ ಹಾನಿಕಾರಕ. ನಮ್ಮ ಆರ್ಥಿಕದ ಚೇತರಿಕೆ ತೋರುತ್ತಿದ್ದ ನಾಲ್ಕು ವಲಯಗಳು ಮೋದಿ ಪ್ರಧಾನ ಮಂತ್ರಿಯಾದಂದಿನಿಂದ ವಾಸ್ತವವಾಗಿ ಇಳಿಕೆಯನ್ನು ದಾಖಲಿಸಿವೆ. ಕೈಗಾರಿಕಾ ಉತ್ಪಾದನೆಯ ಸೂಚ್ಯಂಕದ ಅಧಿಕೃತ ಅಂಕಿ–ಅಂಶಗಳ ಪ್ರಕಾರ ಮೇ ಮತ್ತು ಜೂನ್ 2014ರಲ್ಲಿ ತಿಂಗಳಲ್ಲಿ ಈ ನಾಲ್ಕು ವಲಯಗಳ ಉತ್ಪಾದನಾ ಸೂಚ್ಯಂಕಗಳು ಹೀಗಿದ್ದವು:

| | ಮೇ 2014 | ಜೂನ್ 2014 |
|---|---|---|
| ಗಣಗಾರಿಕೆ | 125.6 | 121.5 |
| ತಯಾರಿಕೆ | 181.6 | 178.2 |
| ವಿದ್ಯುತ್ | 183.2 | 181.6 |
| ಸಾಮಾನ್ಯ ಸೂಚ್ಯಂಕ | 173.8 | 170.5 |

ಅಂದರೆ ಎಲ್ಲ ಸೂಚ್ಯಂಕಗಳೂ ಇಳಿದವು. ಇದೀಗ ಸತ್ಯಸಂಗತಿ!

ಇದರ ಮೇಲೆ ಈಗ ಬಳಕೆ ಸರಕುಗಳ ಸೂಚ್ಯಂಕ ಬಂದಿದೆ. ಇದು ಆಗಸ್ಟ್ 2014ರಲ್ಲಿ 159.9 ಶೇ.ದ ಭಾರೀ ಇಳಿಕೆ ತೋರಿಸುತ್ತದೆ. ಕಳೆದ ವರ್ಷದ ಈ ತಿಂಗಳ ಸೂಚ್ಯಂಕಕ್ಕೆ ಹೋಲಿಸಿದರೆ 6.9ಶೇ.ದಷ್ಟು ಕಡಿಮೆ. ವಾಸ್ತವವಾಗಿ ಇದು ಐದು ವರ್ಷಗಳ ಹಿಂದೆ ನವಂಬರ್ 2009ರಲ್ಲಿ ಇದ್ದುದಕ್ಕಿಂತಲೂ ಕಡಿಮೆ.

ಪೆಟ್ರೋಲಿಯಂ ಉತ್ಪನ್ನಗಳ ಮಾರುವ ಬೆಲೆಗಳನ್ನು ಅವುಗಳ ಅಂತರ್ರಾಷ್ಟ್ರೀಯ ಮಾರುವ ಬೆಲೆಗಳಿಗೆ ಸರಿದೂಗಿಸುವ ಸರಕಾರದ ಸಂಪೂರ್ಣ ತರ್ಕಹೀನ ಧೋರಣೆಯಿಂದಾಗಿ ಡೀಸೆಲ್ ದರಗಳನ್ನು ಇನ್ನೂ ಇಳಿಸಿಲ್ಲ. ಪೆಟ್ರೋಲಿಯಂ ಬೆಲೆಗಳನ್ನೇನೋ ಇಳಿಸಲಾಗಿದೆ. ಆದರೆ ಈ ಇಳಿಕೆ ಅಂತರ್ರಾಷ್ಟ್ರೀಯ ಬೆಲೆಗಳಲ್ಲಿ ಆಗಿರುವ ಇಳಿಕೆಗಿಂತ ಎಷ್ಟೋ ಕಡಿಮೆ. ಈ ಮೂಲಕ ಪೆಟ್ರೋಲಿಯಂ ಚಿಲ್ಲರೆ ಮಾರಾಟಗಾರರು ಇನ್ನಷ್ಟು ಲಾಭ ಗಿಟ್ಟಿಸಲು ಅವಕಾಶ ಕೊಡಲಾಗಿದೆ.
ಮೋದಿಯವರ ಚುನಾವಣಾ ಪ್ರಚಾರಕ್ಕೆ ಚೆನ್ನಾಗಿ ಹಣಕಾಸು ಒದಗಿಸಿದವರಿಗೆ 'ಸಂದಾಯದ ಸಮಯ' ಎಂದರೆ ಇದೇ ತಾನೇ!

ಇದರ ಅರ್ಥ ಇಷ್ಟೇ– ಜನಗಳ ಬಳಿ ಬಳಕೆ ವಸ್ತುಗಳನ್ನು ಖರೀದಿಸಲು ಉಳಿಯುವ ಆದಾಯದ ಪಾಲು ಇಳಿಮುಖವಾಗುತ್ತಲೇ ಇದೆ. ಇದು ಸಹಜವೇ. ಏಕೆಂದರೆ ಅವರ ಆದಾಯದ ಹೆಚ್ಚೆಚ್ಚು ಪಾಲು ಕೇವಲ ಬದುಕುಳಿಯಲು ಮಾಡಬೇಕಾದ ಖರ್ಚುಗಳಿಗೇ ಹೋಗುತ್ತದೆ. 'ಹಬ್ಬದ' ಸೀಝನ್‌ನಲ್ಲಿ ಇದು ಬರುತ್ತಿರುವುದು ನಮ್ಮ ವಿಶಾಲ ಜನಸ್ತೋಮದ ನಿಜವಾದ ಹತಾಶ ಜೀವನ ಪರಿಸ್ಥಿತಿಗಳನ್ನು ತೋರಿಸುತ್ತದೆ.

ಬಳಕೆ ಖರ್ಚುಗಳಲ್ಲಿ ಇಂತಹ ಇಳಿಕೆ ಮತ್ತು ಬಳಕೆ ಸರಕುಗಳ ಮಾರಾಟದಲ್ಲಿ ಇಳಿಕೆ ಹೂಡಿಕೆಗಳಲ್ಲಿ ಯಾವುದೇ ಬೆಳವಣಿಗೆಯನ್ನು ಸಹಜವಾಗಿಯೇ ಕುಂಠಿತಗೊಳಿಸುತ್ತವೆ. ಏಕೆಂದರೆ ಜನಗಳ ಕೈಗಳಲ್ಲಿ ಖರೀದಿಸುವ ಶಕ್ತಿ ಹೆಚ್ಚದೆ ಸರಕುಗಳನ್ನು ಕೊಳ್ಳುವ ಅವರ ಸಾಮರ್ಥ್ಯ ಹೆಚ್ಚುವುದಿಲ್ಲ. ಬದಲಾಗಿ, ಎಲ್ಲ ಆವಶ್ಯಕ ಸರಕುಗಳ ಬೆಲೆಗಳು ನಿರಂತರವಾಗಿ ಹೆಚ್ಚುತ್ತಿರುವುದರಿಂದ, ಆ ಸಾಮರ್ಥ್ಯ ಇಳಿಯುತ್ತಿದೆ.

**ಪ್ರತಿಫಲ ಸಂದಾಯದ ಸಮಯ**

ಇದಲ್ಲದೆ, ಅಂತರ್ರಾಷ್ಟ್ರೀಯ ತೈಲ ಬೆಲೆಗಳಲ್ಲಿ ಇಳಿಕೆಗೆ ಅನುಗುಣವಾಗಿ ದೇಶದೊಳಗೆ ಮಾರಾಟ ಮಾಡುವ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳು ಇಳಿಯಬೇಕಾಗಿತ್ತು. ಆದರೆ ನಮ್ಮ ಆಮದಿನಲ್ಲಿ 90ಶೇ.ಕ್ಕಿಂತಲೂ ಹೆಚ್ಚಿರುವ ಕಚ್ಚಾತೈಲವನ್ನು ವಿವಿಧ ಉತ್ಪನ್ನಗಳಾಗಿ ಶುದ್ಧೀಕರಿಸಲು ತಗಲುವ ವೆಚ್ಚ ಅಂತರ್ರಾಷ್ಟ್ರೀಯ ಖರ್ಚುಗಳಿಗೆ ಹೋಲಿಸಿದರೆ ಬಹಳ ಕಡಿಮೆಯಿದ್ದರೂ ನಮ್ಮ ದೇಶದಲ್ಲಿ ಈ ಉತ್ಪನ್ನಗಳ(ಪೆಟ್ರೋಲ್, ಡೀಸೆಲ್ ಮುಂತಾದವುಗಳ) ಮಾರುವ ಬೆಲೆಗಳನ್ನು ಅವುಗಳ ಅಂತರ್ರಾಷ್ಟ್ರೀಯ ಮಾರುವ ಬೆಲೆಗಳಿಗೆ ಸರಿದೂಗಿಸುವ ಸರಕಾರದ ಸಂಪೂರ್ಣ ತರ್ಕಹೀನ ಧೋರಣೆಯಿಂದಾಗಿ ಡೀಸೆಲ್ ದರಗಳನ್ನು ಇನ್ನೂ ಇಳಿಸಿಲ್ಲ.

ಇದು ನಮ್ಮ ಬಹುಪಾಲು ಜನಗಳ ಮೇಲೆ ಹೊರೆಗಳನ್ನು ಹಾಕುವುದನ್ನು ಮುಂದುವರೆಸಿದೆ, ಅದರಲ್ಲಿಯೂ ರೈತರ ಮೇಲೆ. ಅವರು ಈಗಾಗಲೇ ಈ ಮಳೆಗಾಲದಲ್ಲಿ ಸಾಕಷ್ಟು ಮಳೆಯಾಗದೆ ನರಳುತ್ತಿದ್ದಾರೆ. ಅವರು ವಿಪರೀತ ಡೀಸೆಲ್ ಬೆಲೆಗಳ ಹೊರೆಯನ್ನೂ ಹೊರಬೇಕಾಗಿದೆ. ಡೀಸೆಲ್ ಬೆಲೆಗಳನ್ನು ಬೇಗನೇ ಇಳಿಸುವ ಭರವಸೆಯನ್ನಷ್ಟೇ ಕೊಡಲಾಗುತ್ತಿದೆ.

ಪೆಟ್ರೋಲಿಯಂ ಬೆಲೆಗಳನ್ನೇನೋ ಇಳಿಸಲಾಗಿದೆ. ಆದರೆ ಈ ಇಳಿಕೆ ಅಂತರ್ರಾಷ್ಟ್ರೀಯ ಬೆಲೆಗಳಲ್ಲಿ ಆಗಿರುವ ಇಳಿಕೆಗಿಂತ ಎಷ್ಟೋ ಕಡಿಮೆ. ಈ ಮೂಲಕ ಪೆಟ್ರೋಲಿಯಂ ಚಿಲ್ಲರೆ ಮಾರಾಟಗಾರರು ಇನ್ನಷ್ಟು ಲಾಭ ಗಿಟ್ಟಿಸಲು ಅವಕಾಶ ಕೊಡಲಾಗಿದೆ.

ಮೋದಿಯವರ ಚುನಾವಣಾ ಪ್ರಚಾರಕ್ಕೆ ಚೆನ್ನಾಗಿ ಹಣಕಾಸು ಒದಗಿಸಿದವರಿಗೆ 'ಸಂದಾಯದ ಸಮಯ' ಎಂದರೆ ಇದೇ ತಾನೇ!

ನರಳುತ್ತಿರುವ ಜನತೆಗೆ ತುಸು ಪರಿಹಾರ ಒದಗಿಸುವ ಒಂದೇ ಮಾರ್ಗವೆಂದರೆ ಸಾರ್ವಜನಿಕ ಹೂಡಿಕೆಗಳನ್ನು ದೊಡ್ಡ ಪ್ರಮಾಣದಲ್ಲಿ ಹೆಚ್ಚಿಸುವುದು. ಇದು ನಮ್ಮ ಬಹಳ ಅಗತ್ಯವಾದ ಮೂಲರಚನೆಗಳನ್ನು ಕಟ್ಟುವುದರೊಂದಿಗೇ ಹೆಚ್ಚುವರಿ ಉದ್ಯೋಗಾವಕಾಶಗಳನ್ನು ನಿರ್ಮಿಸುತ್ತದೆ. ಆದರೆ ಹೀಗೆ ಮಾಡುವ ಬದಲು ಮೋದಿ ಸರಕಾರ ಬೃಹತ್ ಪ್ರಮಾಣದಲ್ಲಿ ಖಾಸಗೀಕರಣ ಮತ್ತು ಶೇರು ಹಿಂಪಡಿಕೆಯ ಕಾರ್ಯಕ್ರಮವನ್ನು ಕೈಗೆತ್ತಿಕೊಂಡಿದೆ. ಇದು ಈಗಿರುವ ಉದ್ಯೋಗಾವಕಾಶಗಳನ್ನೂ ಮತ್ತಷ್ಟು ಕಡಿತ ಮಾಡುತ್ತದೆ.

ಪುಟ 10 ಕ್ಕೆ

ಹಣದುಬ್ಬರ ದರ ಇಳಿದಿದೆ ಎಂದರೆ ಬೆಲೆಗಳು ಇಳಿದಿವೆ ಎಂದರ್ಥವಲ್ಲ. ಅದರರ್ಥ ಬೆಲೆಯೇರಿಕೆಯ ದರ ಹಿಂದೆ ಇದ್ದುದಕ್ಕಿಂತ ಇಳಿದಿದೆ ಎಂದಷ್ಟೇ. ಬೆಲೆಗಳಂತೂ ಏರುತ್ತಲೇ ಇವೆ. ಈ ಪ್ರಾಥಮಿಕ ಮಟ್ಟದ ಅರ್ಥಶಾಸ್ತ್ರ ಸರಕಾರದ ಮಂತ್ರಿಗಳಿಗೆ, ವಕ್ತಾರರಿಗೆ ತಿಳಿದಿಲ್ಲವೇನೋ. ಸಾಲದ್ದಕ್ಕೆ ಭಾರತದ ಕಾರ್ಪೊರೇಟ್ ಕುಳಗಳು ಅವರಿಗೆ ಪರಾಕು ಹಾಡುತ್ತಿದ್ದಾರೆ.





ವಿಜುಕೃಷ್ಣನ್ ಮಾತನಾಡುತ್ತಿರುವುದು

# "ಒಕ್ಕಲೆಬ್ಬಿಸುವುದನ್ನು ನಿಲ್ಲಿಸಿ – ಪ್ರಾಣವನ್ನಾದರೂ ಬಿಟ್ಟೇವು, ಭೂಮಿಯನ್ನಲ್ಲ"



ಜಿ.ವಿ. ಶ್ರೀರಾಮರೆಡ್ಡಿ



ನಿತ್ಯಾನಂದಸ್ವಾಮಿ

ರಾಜ್ಯದ ಲಕ್ಷಾಂತರ ಬಡ ಬಗರ್ ಹುಕುಂ ಸಾಗುವಳಿದಾರರನ್ನು ಒಕ್ಕಲೆಬ್ಬಿಸುವುದನ್ನು ನಿಲ್ಲಿಸಬೇಕು. ಬಡವರ ಸಾಗುವಳಿಯನ್ನು ಸಕ್ರಮಗೊಳಿಸಬೇಕು. ಅದಕ್ಕೆ ಪೂರಕವಾಗಿ ಅಗತ್ಯವಾದ ಕಾನೂನು ಕ್ರಮಕ್ಕೆ ಮುಂದಾಗಬೇಕು. ಬಡಜನರ ಮನೆ ನಿವೇಶನದ ಸಮಸ್ಯೆಯನ್ನು ಪರಿಹರಿಸಬೇಕು. ಅರಣ್ಯ ಹಕ್ಕು ಕಾಯ್ದೆಯನ್ನು ಸಮರ್ಪಕವಾಗಿ ಜಾರಿಮಾಡಬೇಕು ಮುಂತಾದ ಮಹತ್ವದ ಬೇಡಿಕೆಗಳ ಈಡೇರಿಕೆಗಾಗಿ ಸರ್ಕಾರವನ್ನು ಆಗ್ರಹಿಸುವ ಬೃಹತ್ ಹೋರಾಟಕ್ಕೆ ಬೆಂಗಳೂರು ಸಾಕ್ಷಿಯಾಯಿತು.

ರಾಜ್ಯದ ಲಕ್ಷಾಂತರ ಕುಟುಂಬಗಳ ಬದುಕಿನ ಆಧಾರಭೂತವಾದ ಪ್ರಶ್ನೆ ಈ ಬಗರ್ ಹುಕುಂ ಸಾಗುವಳಿಯ ಪ್ರಶ್ನೆ. ಸರಕಾರ ಹಲವಾರು ತಲೆಮಾರುಗಳಿಂದ, ಹತ್ತಾರು ವರ್ಷಗಳಿಂದ ಸಾಗುವಳಿ ಮಾಡುತ್ತ ಬಂದ ಬಡ ಕುಟುಂಬಗಳನ್ನು ಭೂಮಿಯಿಂದ ಒಕ್ಕಲೆಬ್ಬಿಸಿ ಓಡಿಸುವ ಯತ್ನ ರಾಜ್ಯಸರ್ಕಾರದಿಂದ ನಡೆಯುತ್ತಿದೆ. ಭೂಮಿಯನ್ನೇ ನಂಬಿ ಬದುಕುವವರಿಗೆ ನಿಂತ ನೆಲವೇ ಕುಸಿದಂತಹ ಅನುಭವವಾದರೂ ಸಾವರಿಸಿಕೊಂಡು ನ್ಯಾಯಕ್ಕಾಗಿ, ಭೂಮಿಯ ಹಕ್ಕಿಗಾಗಿ ಸಮರಕ್ಕೆ ಸಜ್ಜಾಗಿ ಹೋರಾಟದ ಬಾವುಟ ಹಿಡಿದು ಬಂದರು.

ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಮೊದಲಾದ ಸಂಘಗಳು ಈ ಚಳುವಳಿಗೆ ಕರೆ ನೀಡಿದ್ದವು.

ಅಕ್ಟೋಬರ್ 13 ಬೆಳಿಗಿನ ಜಾವವೇ ಬೆಂಗಳೂರು ರೈಲು ನಿಲ್ದಾಣದಲ್ಲಿ ಜನಸಂದಣಿ. ರಾತ್ರಿಯೆಲ್ಲಾ ಪ್ರಯಾಣಿಸಿ ಮುಂಜಾನೆಯೇ ತಲುಪಿದವರು. ರೈಲಿನಲ್ಲಿ ಜಾಗಸಿಗಲಾರದೆಂದು ಹಿಂದಿನ ದಿನವೇ ಬಂದು ಕಾದಿದ್ದವರೂ. ಮತ್ತೆ ಬಂದು ಸೇರಿದವರು. ಸು. 11 ಗಂಟೆಯ ಹೊತ್ತಿಗೆ ಮೈಸೂರಿನಿಂದ ಹೊರಟಿದ್ದ ಪಾದಯಾತ್ರೆ ರೈಲ್ವೆ ನಿಲ್ದಾಣಕ್ಕೆ ತಲುಪಿತು.

ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷರಾದ ಮಾರುತಿ ಮಾನ್ಪಡೆ, ರಾಜ್ಯ ಉಪಾಧ್ಯಕ್ಷ ಎನ್. ವೆಂಕಟಾಚಲಯ್ಯ, ರೈತ ಮುಖಂಡರಾದ ಕೂಗೂರು ಶ್ರೀನಿವಾಸ್, ನವೀನ್ ಮುಂತಾದವರ ನೇತೃತ್ವದಲ್ಲಿ ಬಂದ ಕಾಲ್ನಡಿಗೆ ಜಾಥಾವನ್ನು ಮಾಜಿ ಶಾಸಕರೂ, ಸಿಪಿಐ(ಎಂ) ರಾಜ್ಯ ಸಮಿತಿ ಕಾರ್ಯದರ್ಶಿಗಳೂ ಆದ ಜಿ.ವಿ.ಶ್ರೀರಾಮರೆಡ್ಡಿ, ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಯು. ಬಸವರಾಜು, ರಾಜ್ಯ ಉಪಾಧ್ಯಕ್ಷರಾದ ಭೀಮಸಿ ಕಲಾದಗಿ ಮುಂತಾದವರು ಸ್ವಾಗತಿಸಿದರು.

ನಂತರ ಅಲ್ಲಿಂದ ಘೋಷಣೆಗಳನ್ನು ಕೂಗುತ್ತಾ ಮೆರವಣಿಗೆ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನ ಕಡೆಗೆ ನಡೆಯಿತು. ಮುಂದೆ ಪಾದಯಾತ್ರೆಯಲ್ಲಿ ಬಂದ ಮುಖಂಡರು ಮತ್ತು ರೈತ ಕೂಲಿಕಾರರ ಸಂಘಟನೆಯ ಮುಖಂಡರು. ಬಗರ್ ಹುಕುಂ ಸಾಗುವಳಿ ಸಕ್ರಮಕ್ಕಾಗಿ ಅಗ್ರಹಿಸಿ ಮೊರೆಯುವ ಜನರು. ಮೇರೆ ಮೀರುವ ಹೋರಾಟ ಉತ್ಸಾಹ. 30 ಜಿಲ್ಲೆಗಳಿಂದ ಬಂದ ಸಹಸ್ರಾರು ಜನ ರೈತರು, ಕೂಲಿಕಾರರು, ಬಡವರು. ಕೆಂಬಾವುಟಗಳನ್ನು ಬೀಸುತ್ತಾ ಜನರು ನುಗ್ಗಿ ಬಂದರು. ನಂತರ ಬೃಹತ್ ಅನಿರ್ಧಿಷ್ಟ ಅಹೋ ರಾತ್ರಿ ಧರಣಿ ಸತ್ಯಾಗ್ರಹ ಆರಂಭವಾಯಿತು.

**ಕಾರ್ಪೋರೇಟ್ ಕಂಪನಿಗಳ ವಶಕ್ಕೆ ರೈತರ ಭೂಮಿ– ವಿಜು ಕೃಷ್ಣನ್**

ಅಖಿಲ ಭಾರತ ಕಿಸಾನ್ ಸಭಾದ ರಾಷ್ಟ್ರೀಯ ಸಹಕಾರ್ಯದರ್ಶಿ ವಿಜು ಕೃಷ್ಣನ್ ಅವರು ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಮೊದಲು ಮಾತನಾಡಿ ಇಂತಹ ಬೃಹತ್ತಾದ ಮತ್ತು ಮಹತ್ವದ ಹೋರಾಟವನ್ನು ಸಂಘಟಿಸಿರುವ ಕರ್ನಾಟಕ ಚಳುವಳಿಯನ್ನು ಅಭಿನಂದಿಸಿದರು. ಬಗರ್ ಹುಕುಂ ಸಾಗುವಳಿದಾರರನ್ನು ಭೂಮಿಯಿಂದ ಒಕ್ಕಲೆಬ್ಬಿಸುವ ನೀತಿಯನ್ನು ತೀವ್ರವಾಗಿ ಖಂಡಿಸಿದ ಅವರು ಸರಕಾರ ಕೂಡಲೇ ಕಾನೂನು ತಿದ್ದುಪಡಿ ಮೂಲಕ ಸಮಸ್ಯೆ ಬಗೆಹರಿಸಲು ಮುಂದಾಗಬೇಕು ಎಂದು ಒತ್ತಾಯಿಸಿದರು. ಜಾಗತೀಕರಣ ಉದಾರೀಕರಣದ ನೀತಿಗಳ ಭಾಗವಾಗಿ ರೈತರ ಭೂಮಿಯನ್ನು ಕಸಿದುಕೊಂಡು ಬಂಡವಾಳಗಾರರಿಗೆ, ಬಹುರಾಷ್ಟ್ರೀಯ ಕಂಪನಿಗಳಿಗೆ, ಕಾರ್ಪೋರೇಟ್ ಸಂಸ್ಥೆಗಳಿಗೆ ಅಗ್ಗದ ದರದಲ್ಲಿ ನೀಡಲಾಗುತ್ತಿದೆ ಎಂದ ಅವರು ಆಫ್ರಿಕಾ ಖಂಡದ ಹಲವು ದೇಶಗಳಲ್ಲಿ ಭಾರಿ ಪ್ರಮಾಣದಲ್ಲಿ ಭೂಮಿಯನ್ನು ಕಾರ್ಪೋರೇಟ್ ಕಂಪನಿಗಳು ವಶಕ್ಕೆ ತೆಗೆದುಕೊಳ್ಳುತ್ತಿವೆ. ಇದರಲ್ಲಿ ಭಾರತದ ಕಂಪನಿಗಳೂ ಸಹ ತೊಡಗಿವೆ. ಮುಂದೆ ಭಾರತದ ರೈತರ ಭೂಮಿಗೂ ಇದೇ ಗತಿ ಬರುವ ಅಪಾಯವಿದ್ದು ಈ ಬಗ್ಗೆ ಎಚ್ಚರ ವಹಿಸಬೇಕು ಎಂದರು.

**ಪಾದಯಾತ್ರೆಯ ಭಾಗಿಗಳಿಗೆ ಅಭಿನಂದನೆ**

ನಂತರ ಮೈಸೂರಿನಿಂದ 125 ಕಿ.ಮಿ. ಪಾದಯಾತ್ರೆಯಲ್ಲಿ ಸಾಗಿ ಬಂದ ಸಂಗಾತಿಗಳನ್ನು ವೇದಿಕೆಯಲ್ಲಿ ಸನ್ಮಾನಿಸಲಾಯಿತು.

**ಹೊಟ್ಟೆಪಾಡಿಗಾಗಿ ಉಳುಮೆ ಮಾಡುವವರಿಗೂ ಭೂಗಳ್ಳರಿಗೆ ವ್ಯತ್ಯಾಸವಿಲ್ಲವೇ ?**
**– ಜಿ.ವಿ. ಶ್ರೀರಾಮರೆಡ್ಡಿ.**

ಇದೊಂದು ಐತಿಹಾಸಿಕ ಹೋರಾಟ ಎಂದ ಜಿ.ವಿ. ಶ್ರೀರಾಮರೆಡ್ಡಿಯವರು ಸಾಗುವಳಿ ಭೂಮಿಯಿಂದ ರೈತರನ್ನು ಒಕ್ಕಲೆಬ್ಬಿಸುವುದನ್ನು ಸರ್ಕಾರ ತತ್ಕ್ಷಣ ಕೈಬಿಡಬೇಕು ಎಂದು ಆಗ್ರಹಿಸಿದರು. ನ್ಯಾಯಾಲಯಕ್ಕೆ ಸರಿಯಾದ



ಮಾರುತಿ ಮಾನ್ಪಡೆ



ಯು. ಬಸವರಾಜು

ಮಾಹಿತಿ ನೀಡಿ ಬಡ ಸಾಗುವಳಿದಾರರ ಬದುಕನ್ನು ರಕ್ಷಿಸದ ಸರಕಾರವನ್ನು ತರಾಟೆಗೆ ತೆಗೆದುಕೊಂಡ ಶ್ರೀರಾಮರೆಡ್ಡಿಯವರು, ಎ.ಟಿ. ರಾಮಸ್ವಾಮಿ ಮತ್ತು ಸುಬ್ರಮಣ್ಯಂ ಸಮಿತಿ ವರದಿಗಳ ಜಾರಿಗಾಗಿ ಬೆಂಗಳೂರಿನ ಪುರಭವನದ ಮುಂದೆ ಸ್ವಾಂತಂತ್ರ್ಯ ಹೋರಾಟಗಾರ ದೊರೆಸ್ವಾಮಿ ಮುಂತಾದವರ ನೇತೃತ್ವದಲ್ಲಿ ನಡೆಯುತ್ತಿರುವ ಸತ್ಯಾಗ್ರಹದ ಬೇಡಿಕೆಯಿಂದ ಗೊಂದಲವುಂಟಾಗಿದೆ. ಹೊಟ್ಟೆಪಾಡಿಗಾಗಿ ಉಳುಮೆ ಮಾಡುವವರಿಗೂ ಮತ್ತು ಭೂಗಳ್ಳರಿಗೂ ವ್ಯತ್ಯಾಸವಿಲ್ಲವೇ ಎಂದು ಪ್ರಶ್ನಿಸಿದರು. ಬೆಂಗಳೂರು ನಗರದಲ್ಲಿ ಭೂಗಳ್ಳರು ಕಬಳಿಸಿರುವ ಸು. 36 ಸಾವಿರ ಎಕರೆ ಭೂಮಿಯನ್ನು ಸರಕಾರ ವಶಕ್ಕೆ ಪಡೆದುಕೊಳ್ಳಬೇಕು ಎಂದು ಆಗ್ರಹಿಸಿದ ಅವರು ರಾಜ್ಯದಲ್ಲಿ ಅರ್ಜಿ ನಂ. 50, 52, 53 ರಲ್ಲಿ ಸಲ್ಲಿಸಲಾಗಿರುವ ಒಟ್ಟಾ–

➥

ರೆ 7 ಲಕ್ಷ 54 ಸಾವಿರ ಬಗರ್ ಹುಕುಂ ಸಕ್ರಮ ಕೋರುವ ಅರ್ಜಿಗಳು ಬಾಕಿ ಉಳಿದುಕೊಂಡಿವೆ. ಸರಕಾರಗಳು ಇದನ್ನು ಇತ್ಯರ್ಥ ಮಾಡಿಲ್ಲ ಎಂದು ಖಂಡಿಸಿದರು.

2007 ರಲ್ಲಿ ರಾಜ್ಯದ ಜೆಡಿ(ಎಸ್)–ಬಿಜೆಪಿ ಸಮ್ಮಿಶ್ರ ಸರಕಾರ ಭೂ ಕಬಳಿಕೆ ತಡೆ ಮಸೂದೆಯನ್ನು ತಂದಾಗ ಅದರ ಅಪಾಯದ ಬಗೆಗೆ ಶಾಸನ ಸಭೆಯಲ್ಲಿ ನಾನೊಬ್ಬನೇ ಏಕಾಂಗಿಯಾಗಿ ಅದನ್ನು ವಿರೋಧಿಸಿದೆ. ಬೇರೆ ಯಾವ ಶಾಸಕರು ಅಂದು ಬೆಂಬಲ ಕೊಡಲಿಲ್ಲ ಎಂದು ಅವರು ವಿವರಿಸಿದರು.

ದೇವೇಗೌಡರು ಒಂದು ಕಡೆ ಬಗರ್ ಹುಕುಂ ರೈತರ ಪರವಾಗಿ ಮಾತನಾಡುತ್ತಾರೆ. ಜೆಡಿ(ಎಸ್) ನೇತೃತ್ವದ ಸರಕಾರ ಏಕೆ ರೈತ ವಿರೋಧಿಯಾದ ಕಾಯ್ದೆ ತಂದಿತು ಎಂದರೆ 'ಅಂದಿನ ಸಂದರ್ಭ ಹಾಗಿತ್ತು.' ಎನ್ನುತ್ತಾರೆ ಎಂದು ಜೆಡಿ(ಎಸ್) ಪಕ್ಷದ ಇಬ್ಬಂದಿ ನಿಲುವನ್ನು ಟೀಕಿಸಿದರು.

ಸಿದ್ದರಾಮಯ್ಯನವರು 'ಅಹಿಂದ'ದ ಹೆಸರನ್ನು ಹೇಳುತ್ತಾರೆ. ಆದರೆ ಬಗರ್ ಹುಕುಂ ಸಾಗುವಳಿ ಮಾಡುತ್ತಿರುವ ಬಹುತೇಕ ಜನರು ಹಿಂದುಳಿದ ದಲಿತ ಮತ್ತು ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರಾಗಿದ್ದಾರೆ. ಈ ಜನರ ಹಿತವನ್ನು ಕಾಯದ ಮುಖ್ಯಮಂತ್ರಿಗಳು ಅಹಿಂದ ಪರ ಹೇಗಾಗುತ್ತಾರೆ ಎಂದು ಅವರು ಸಿದ್ದರಾಮಯ್ಯ ಸರಕಾರ ನೀತಿಯನ್ನು ಪ್ರಶ್ನಿಸಿದರು.

ಭೂ ಸುಧಾರಣಾ ಕಾಯ್ದೆಗೆ ತಿದ್ದುಪಡಿ ತಂದು ಬಂಡವಾಳಗಾರರಿಗೆ ಅನುಕೂಲ ಮಾಡಿಕೊಡುವ ಸಂಚು ನಡೆದಿದೆ. ಕಾಯ್ದೆಯಲ್ಲಿ 'ರೈತ' ಎಂಬುದರ ಅರ್ಥವನ್ನೇ ಬದಲಿಸಲಾಗಿದೆ. ಗೊಬ್ಬರ ಕಾರ್ಖಾನೆಗಳು, ಆಹಾರ ಸಂಸ್ಕರಣ ಘಟಕ, ಕೀಟನಾಶಕ ಮಾರಾಟಗಾರರು ಮುಂತಾದವುಗಳನ್ನೂ ಕೃಷಿಯ ವ್ಯಾಪ್ತಿಗೆ ತಂದು ತಂದು ರೈತರಿಗೆ ದ್ರೋಹ ಮಾಡಲಾಗಿದೆ. ನೈಸ್ ಕಂಪನಿಯು ರಸ್ತೆ ಹೆಸರಿನಲ್ಲಿ ಹಗಲು ದರೋಡೆ ನಡೆಸಿದೆ. 3,000 ಎಕರೆ ಹೆಚ್ಚುವರಿ ಭೂಮಿಯನ್ನು ಲಪಟಾಯಿಸಿದೆ. 36 ಕರೆಗಳನ್ನು ನೈಸ್ ಕಂಪನಿ ಹೊಡೆದುಕೊಂಡಿದೆ. ಸಿದ್ಧರಾಮಯ್ಯನವರಿಗೆ ಬಡ ಸಾಗುವಳಿದಾರರ ಬಗೆಗೆ ನಿಜವಾದ ಕಾಳಜಿ ಇದ್ದಲ್ಲಿ ವಿಧಾನ ಸೌಧದಲ್ಲಿ ನಡೆಯುತ್ತಿರುವ ಜಿಲ್ಲಾಧಿಕಾರಿಗಳ ಸಭೆಯನ್ನು ರದ್ದು ಮಾಡಿ ಇಲ್ಲಿಗೆ ಬಂದು ಬಡ ಸಾಗುವಳಿದಾರರ ಅಹವಾಲು ಆಲಿಸಲಿ ಎಂದು ಅವರು ಒತ್ತಾಯಿಸಿದರು.

**ಭೂ ಸುಧಾರಣೆಯಿಂದ ಅಭಿವೃದ್ಧಿ**
**– ನಿತ್ಯಾನಂದ ಸ್ವಾಮಿ**

ಭೂಮಿ ನಮ್ಮ ತಾಯಿ. ಭೂಮಿಯಿಂದಲೇ ಉತ್ಪಾದನೆ. ಭೂಮಿಯಿಂದಲೇ ಸಮೃದ್ಧಿ ಎಂದು ಮಾತು ಆರಂಭಿಸಿದ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಅಧ್ಯಕ್ಷರಾದ ನಿತ್ಯಾನಂದ ಸ್ವಾಮಿಯವರು, ಭೂ ಇಲ್ಲದ ಭೂಹೀನ ಕೂಲಿಕಾರರು, ಬಡವರಿಗೆ ಭೂಮಿ ನೀಡುವ ಭೂಸುಧಾರಣೆಯಿಂದ ಸಮಾಜ, ದೇಶ ಅಭಿವೃದ್ಧಿ ಸಾಧಿಸುತ್ತದೆ. ಇದರಿಂದ ಆಹಾರ ಉತ್ಪಾದನೆ ಹೆಚ್ಚುತ್ತದೆ. ಸರಕಾರಗಳು ಬಗರ್ ಹುಕುಂ ಸಾಗುವಳಿದಾರರ ಸಾಗುವಳಿಯನ್ನು ಸಕ್ರಮಗೊಳಿಸುವ ನಿಟ್ಟಿನಲ್ಲಿ ಸೂಕ್ತ ಕಾನೂನು ತಿದ್ದುಪಡಿ ತರಬೇಕು. ಭೂಸುಧಾರಣೆ ಜಾರಿ ಮಾಡಬೇಕು ಎಂದು ಒತ್ತಾಯಿಸಿದರು.

ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಅಧ್ಯಕ್ಷೆ ವಿ. ಗೀತಾ ಮಾತನಾಡಿ ಕೋಲಾರ ಜಿಲ್ಲೆಯಲ್ಲಿ ಕೆರೆ ಅಂಗಳದಲ್ಲಿ 200 ದಲಿತ ಕುಟುಂಬಗಳಿಗೆ ಹಕ್ಕುಪತ್ರ ನೀಡಿದ ಸರಕಾರ ಈಗ ಅದು ಕೆರೆ ಅಂಗಳ ಎನ್ನುತ್ತಿದೆ. ಭೂಮಿ ನೀಡುವ ಮುಂಚೆ ಈ ಬಗೆಗೆ ಸರಕಾರಕ್ಕೆ ಗೊತ್ತಿರಲಿಲ್ಲವೇ ಎಂದು ಪ್ರಶ್ನಿಸಿದರು. ದಲಿತರಿಗೆ, ಬಡವರಿಗೆ ಭೂಮಿ ಕೊಡದ ಸರಕಾರ ಬಂಡವಾಳಗಾರರ ಪರ ನಿಂತಿದೆ ಎಂದರು.


ರಾತ್ರಿ ಚಳಿ ಗಾಳಿ ಲೆಕ್ಕಿಸದೆ

ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘದ ರಾಜ್ಯ ಅಧ್ಯಕ್ಷೆ ಮಾಳಮ್ಮ ಮಾತನಾಡಿ ದೇವದಾಸಿ ಮಹಿಳೆಯರ ಬದುಕು ಬದಲಾಯಿಸಲು ಅವರಿಗೆ ಭೂಮಿ ನೀಡಬೇಕು. ಆಳುವ ರಾಜಕೀಯ ನಾಯಕರು ಕಸ ತೆಗೆಯುವ ಪ್ರದರ್ಶನ ಮಾಡುತ್ತಿದ್ದಾರೆ. ಬಡತನ ಇಲ್ಲವಾದರೆ ಸಮಾಜ ಸ್ವಚ್ಛವಾಗುತ್ತದೆ. ದೇವದಾಸಿ ಪದ್ಧತಿ ಇಲ್ಲದಂತಾದರೆ ಸಮಾಜ ಸ್ವಚ್ಛವಾಗುತ್ತದೆ ಎಂದರು.

ಪ್ರಾಂತ ರೈತ ಸಂಘದ ರಾಜ್ಯ ಅ ಧ್ಯಕ್ಷರಾದ ಮಾರುತಿ ಮಾನ್ಪಡೆಯವರು ಮಾತನಾಡಿ ರಾಜ್ಯದ ಆಳುವವರು ಬಗರ್ ಹುಕುಂ ಸಾಗುವಳಿ ಭೂಮಿಯಿಂದ ರೈತರನ್ನು ಒಕ್ಕಲೆಬ್ಬಿಸುವುದಾಗಿ ನ್ಯಾಯಾಲಯಕ್ಕೆ ಪ್ರಮಾಣ ಪತ್ರ ಕೊಟ್ಟಿದ್ದಾರೆ. ಸರಕಾರಕ್ಕೆ ಎರಡು ನಾಲಿಗೆ. ಸರಕಾರ ನಡೆಸುವವರು ಒಕ್ಕಲೆಬ್ಬಿಸಬೇಡಿ ಎಂದು ಮೇಲೆ ಹೇಳಿದರೂ ಕೆಳ ಹಂತಗಳಲ್ಲಿ ಅಧಿಕಾರಿಗಳು ಅದನ್ನು ಕೇಳಿಲ್ಲ. ಸರಕಾರ ಪ್ರಮಾಣ ಪತ್ರದಲ್ಲಿ ನ್ಯಾಯಾಲಯಕ್ಕೆ ಏನು ಮಾತು ಕೊಟ್ಟಿದೆಯೋ ಅದನ್ನು ಜಾರಿ ಮಾಡುತ್ತಿದ್ದಾರೆ. ಬಡ ಬಗರ್ ಹುಕುಂ ಸಾಗುವಳಿದಾರರು ಭೂಗಳ್ಳರಲ್ಲ. ಕಾನೂನು ಬದಲಾವಣೆ ಮಾಡಬೇಕು ಎಂದು ಆಗ್ರಹಿಸಿದರು.

ಗೋಮಾಳದ ವಿಷಯದಲ್ಲಿ ಗ್ರಾಮದಲ್ಲಿ 100

ಪುಟ 10 ಕ್ಕೆ

## ಸಚಿವರುಗಳು–ಅಧಿಕಾರಿಗಳ ಸಮ್ಮುಖ ಮುಖ್ಯ ಮಂತ್ರಿಗಳೊಂದಿಗೆ ಮಾತುಕತೆ

## ಬಡ ಬಗರ್‌ಹುಕುಂ ಹಾಗೂ ಅರಣ್ಯ ಸಾಗುವಳಿದಾರರ ಒಕ್ಕಲೆಬ್ಬಿಸದಿರಲು ಸರಕಾರದ ಒಪ್ಪಿಗೆ –

PÁ£ÀÆ¤£À¸ÀªÀÄ¸ÉåPÀÄjvÀÄ¸ÀaªÀ¸ÀA¥ÀÄlzÀG¥À¸À«Äw-gÉÊvÀªÀÄÄRAqÀgÉÆA¢UÉZÀZÉðUÉ¤zsÁðgÀ

ಬೆಂಗಳೂರಿನಲ್ಲಿ ನೆರೆದ ಸಹಸ್ರಾರು ಬಗರ್ ಹುಕುಂ ರೈತರ ಅನಿರ್ದಿಷ್ಟಾವಧಿ ಅಹೋರಾತ್ರಿ ಹೋರಾಟದ ಪರಿಣಾಮವಾಗಿ ಅಕ್ಟೋಬರ್ 13, 2014 ರಂದು ರಾತ್ರಿ 10.00 ಗಂಟೆಗೆ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಅರಣ್ಯ, ಕಂದಾಯ, ಸಮಾಜ ಕಲ್ಯಾಣ, ಕಾನೂನು, ಹಾಗೂ ನಗರಾಡಳಿತ ಮತ್ತು ಗೃಹ ಸಚಿವರು ಮತ್ತು ಸಂಬಂಧಿಸಿದ ವಿವಿಧ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳು ಮತ್ತು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷರಾದ ಮಾರುತಿ ಮಾನ್ಪಡೆ, ಪ್ರಧಾನ ಕಾರ್ಯದರ್ಶಿ ಯು. ಬಸವರಾಜ ಮತ್ತು ಮಾಜಿ ಶಾಸಕರು, ರಾಜ್ಯ ಉಪಾಧ್ಯಕ್ಷರಾದ ಜಿ.ವಿ. ಶ್ರೀರಾಮ ರೆಡ್ಡಿ ಮತ್ತು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಅಧ್ಯಕ್ಷರಾದ ನಿತ್ಯಾನಂದ ಸ್ವಾಮಿಯವರ ನೇತೃತ್ವದಲ್ಲಿ ವಿವಿಧ ಸಂಘಟನೆಗಳ ಒಟ್ಟು 12 ಮುಖಂಡರು ಇರುವ ಜಂಟಿ ಸಭೆಯೊಂದು ನಡೆಯಿತು.

**ಸರಕಾರದ ಭರವಸೆ**

ಸಭೆಯಲ್ಲಿ ಈಗ ಹಾಲಿ ಬಗರ್ ಹುಕುಂ ಸಾಗುವಳಿ ಸಕ್ರಮಕ್ಕಾಗಿ ಅರ್ಜಿ ಸಲ್ಲಿಸಿ ಬಾಕಿ ಇರುವ ಅರ್ಜಿದಾರರಿಗೆ ನೋಟೀಸ್ ನೀಡಿ ಒಕ್ಕಲೆಬ್ಬಿಸುವುದನ್ನು ತಡೆಯಲು ರಾಜ್ಯ ಸರ್ಕಾರ ಒಪ್ಪಿತು. ಅದೇ ರೀತಿ, ವಿವಿಧ ಕಾನೂನಿನ ಕಾರಣದಿಂದ ತಿರಸ್ಕರಿಸಲ್ಪಟ್ಟಿರುವ ಬಡ ಅರ್ಜಿದಾರರ ಭೂ ಸಾಗುವಳಿ ಪ್ರಶ್ನೆಯನ್ನು ಸಹಾನುಭೂತಿಯಿಂದ ಹಾಗೂ ಕಾನೂನಿನ ಸಮಸ್ಯೆಗಳನ್ನು ಚರ್ಚಿಸಿ ನಿರ್ಧರಿಸಲು ಶ್ರೀನಿವಾಸ್ ಪ್ರಸಾದ್ ನೇತೃತ್ವದ ಸಚಿವ ಸಂಪುಟದ ಉಪಸಮಿತಿಯು ರೈತ ಮುಖಂಡರೊಂದಿಗೆ ಚರ್ಚಿಸಿ, ಪರಿಶೀಲಿಸಲು ಹಾಗೂ ಸೂಕ್ತವಾಗಿ ನಿರ್ಧರಿಸಿ ಸರ್ಕಾರಕ್ಕೆ ಸೂಚಿಸಲು ಒಪ್ಪಲಾಯಿತು. ನೈಸ್ ಕಂಪೆನಿ ಭೂ ಅಕ್ರಮಕ್ಕೆ ಸಂಬಂಧಿಸಿದಂತೆ ಸದನ ಸಮಿತಿಯ ಜೊತೆ ರೈತ ಮುಖಂಡರು ತಮ್ಮ ಅಹವಾಲುಗಳನ್ನು ಸಲ್ಲಿಸಲು ನಿರ್ಧರಿಸಿತು. ನಿವೇಶನ ರಹಿತ ಬಡವರಿಗೆ, ಮನೆ ನಿವೇಶನಕ್ಕಾಗಿ ಭೂಸ್ವಾಧೀನ ಕಾಯ್ದೆಯಂತೆ, ಭೂ ಸ್ವಾಧೀನವನ್ನು ಕೈಗೊಳ್ಳಲು ಮುಖ್ಯಮಂತ್ರಿಗಳು ಒಪ್ಪಿದರು. ಇದಲ್ಲದೇ ದೇವದಾಸಿ ಮಹಿಳೆಯರ ಮಾಸಿಕ ಸಹಾಯಧನವನ್ನು 1,000 ರೂ.ಗಳಿಗೆ ಹೆಚ್ಚಿಸಲು ಹಾಗೂ ದೇವದಾಸಿಯರ ನಡುವೆ ಕಾರ್ಯ ನಿರ್ವಹಿಸುವ ಯೋಜನೆಯ ಸ್ವಯಂ ಸೇವಕರಿಗೆ ನೀಡುವ ವೇತನವನ್ನು ಹೆಚ್ಚಿಸಲು ಬೇಕಾದ ಕ್ರಮಗಳನ್ನು ಕೈಗೊಳ್ಳುವುದಾಗಿ ಸಮಾಜ ಕಲ್ಯಾಣ ಸಚಿವರು ಒಪ್ಪಿದರು.

ಈ ಹಿನ್ನೆಲೆಯಲ್ಲಿ, 2ನೇ ದಿವಸಕ್ಕೆ ಕಾಲಿಟ್ಟ ಬೃಹತ್ ಅಹೋ ರಾತ್ರಿ ಧರಣಿ ಸತ್ಯಾಗ್ರಹ ಮುನ್ನಡೆದಿರುವಾಗಲೇ, ಕರ್ನಾಟಕ ಪ್ರಾಂತ ರೈತ ಸಂಘ ರಾಜ್ಯ ಪದಾಧಿಕಾರಿಗಳ ಸಭೆ ಪ್ರತ್ಯೇಕವಾಗಿ ನಡೆಯಿತು. ಅದೇ ರೀತಿ, ಕರ್ನಾಟಕ ಪ್ರಾಂತ ಕೃಷಿಕೂಲಿಕರರ ಸಂಘ, ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನ ಸಂಘ, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಭಾರತ ಪ್ರಜಾಸತ್ತಾತ್ಮಕ ಯುವಜನ ಸಂಘಟನೆ, ದಲಿತ ಹಕ್ಕುಗಳ ಸಮಿತಿ– ಕರ್ನಾಟಕ, ಕರ್ನಾಟಕ ರಾಜ್ಯ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ, ಮತ್ತು ಕರ್ನಾಟಕ ಕಾಫಿ ಬೆಳೆಗಾರರ ಸಂಘಗಳು ಸೇರಿದ ಜಂಟಿ ಸಭೆ ನಡೆದು ಸರ್ಕಾರದ ಜೊತೆಗಿನ ಮಾತುಕತೆಯನ್ನು ಹಾಗೂ ಮಾತುಕತೆಯಲ್ಲಿ ಆಗಿರುವ ಪ್ರಗತಿಯನ್ನು ಪರಿಶೀಲಿಸಿದವು. ನಂತರ ಬೃಹತ್ ಧರಣಿ ಸತ್ಯಾಗ್ರಹದಲ್ಲಿ ಪಾಲ್ಗೊಂಡ ಜನರ ಮುಂದೆ ನಿರ್ಣಯ ಮಂಡಿಸಲಾಯಿತು.

ಬೃಹತ್ ಧರಣಿ ಸತ್ಯಾಗ್ರಹವು ಕರ್ನಾಟಕ ಪ್ರಾಂತ ರೈತ ಸಂಘದ ಹಾಗೂ ವಿವಿಧ ಸಂಘಗಳ ಜಂಟಿ ಸಭೆಯ ಸೂಚನೆಯನ್ನು ಸರ್ವಾನುಮತದಿಂದ ಅಂಗೀಕರಿಸಿತು.

"ಈಗ ಅರಣ್ಯವೆನ್ನಲಾಗುವ ಬಗರ್‌ಹುಕುಂ ಜಮೀನಿನ 10 ಎಕರೆವರೆಗಿನ ಬಡ ಸಾಗುದಾರರ ಮತ್ತು ಪ್ಲಾಂಟರುಗಳ ಹಕ್ಕಿಗಾಗಿ ಹಾಕಲಾದ ಮತ್ತು ವಿವಿಧ ಕಾನೂನುಗಳ ಕಾರಣದಿಂದ ತಿರಸ್ಕರಿಸಲ್ಪಟ್ಟ 32 ಲಕ್ಷ ಎಕರೆ ಪ್ರದೇಶದ 13 ಲಕ್ಷಕ್ಕೂ ಅಧಿಕ ಅರ್ಜಿಗಳ ರೈತರನ್ನು, ಏನೇ ಅಡ್ಡಿ ಬಂದರೂ ಸಂರಕ್ಷಿಸಲು ಬೃಹತ್ ಧರಣಿ ನಿರ್ಧರಿಸುವಾಗಲೇ, ಸರ್ಕಾರ ಒಪ್ಪಿದಂತೆ ಮಾತುಕತೆಯನ್ನು ಸಚಿವ ಸಂಪುಟದ ಉಪಸಮಿತಿ ಜೊತೆ ಮುಂದುವರೆಸಲು ನಾಯಕತ್ವಕ್ಕೆ ಸಮ್ಮತಿ ನೀಡಿತು. ಅದೇ ರೀತಿ, ಈ ಬಡ ಸಾಗುದಾರರನ್ನು ಒಕ್ಕಲೆಬ್ಬಿಸುವುದನ್ನು ತಡೆಯಲು, ತಾಲೂಕಾ ಹಾಗೂ ಗ್ರಾಮಗಳಲ್ಲಿ ತೀವ್ರವಾಗಿ ಪ್ರತಿರೋಧ ಒಡ್ಡಲು ನಿರ್ಧರಿಸಿದೆ. ಅಗತ್ಯವಿದ್ದರೆ ರೈತರು ಜೈಲಿಗೆ ಹೋಗಲು ಪೋಲೀಸ್ ಕೇಸು ಹಾಗೂ ಬರುವ ಎಲ್ಲಾ ರೀತಿಯ ದಾಳಿಯನ್ನು ಎದುರಿಸುವ ದೃಢತೆ ತೋರಬೇಕೆಂದು ನಿರ್ಣಯಿಸಿ ರಾಜ್ಯದ ಎಲ್ಲಾ ಬಡ ಬಗರ್ ಹುಕುಂ ಸಾಗುದಾರರಿಗೆ ಕರೆ ನೀಡಿತು. ರಾಜ್ಯದಾದ್ಯಂತ 20 ಸಾವಿರಕ್ಕೂ ಅಧಿಕ ಸಂಖ್ಯೆಯಲ್ಲಿ ಸಾಗಿ ಬಂದು ಎರಡು ದಿನಗಳಕಾಲ ಅಹೋ ರಾತ್ರಿ ಧರಣಿ ಸತ್ಯಾಗ್ರಹದಲ್ಲಿ ಪಾಲ್ಗೊಂಡ ಎಲ್ಲ 30 ಜಿಲ್ಲೆಗಳ ಬಡ ಸಾಗುದಾರರನ್ನು ಸಭೆಯು ಅಭಿನಂದಿಸಿತು.

ಸರಕಾರದೊಂದಿಗಿನ ಮಾತುಕತೆಯಲ್ಲಿ, ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಉಪಾಧ್ಯಕ್ಷರಾದ ಭೀಮಶೀ ಕಲಾದಗಿ, ಜಿ.ಸಿ. ಬಯ್ಯಾರೆಡ್ಡಿ, ಎನ್. ವೆಂಕಟಾಚಲಯ್ಯ, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಚಂದ್ರಪ್ಪ ಹೊಸಕೇರಾ, ಜನವಾದಿ ಮಹಿಳಾ ಸಂಘಟನೆಯ ಅಧ್ಯಕ್ಷೆ ವಿ.ಗೀತಾ, ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘದ ಅಧ್ಯಕ್ಷೆ ಬಿ. ಮಾಳಮ್ಮ ಮತ್ತು ಪ್ರಧಾನ ಕಾರ್ಯದರ್ಶಿ ರೇಣುಕಮ್ಮ ಹಾಗೂ ಭಾರತ ಪ್ರಜಾಸತ್ತಾತ್ಮಕ ಫೆಡರೇಷನ್ನಿನ ಕಾರ್ಯದರ್ಶಿ ಬಿ. ರಾಜಶೇಖರ ಮೂರ್ತಿ, ಕರ್ನಾಟಕ ರಾಜ್ಯ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ಎಸ್. ವೈ. ಗುರುಶಾಂತ್ ಮತ್ತು ಕರ್ನಾಟಕ ಬೆಳೆಗಾರರ ಸಂಘದ ತೀರ್ಥ ಪಾಲ್ಗೊಂಡಿದ್ದರು.

ವಿದೇಶಿ ಹೂಡಿಕೆದಾರರ ಪ್ರಧಾನ ಉದ್ದೇಶ ಗರಿಷ್ಟ ಲಾಭಗಳಿಕೆಯೇ ಹೊರತು ಭಾರತದ ಉತ್ಪಾದಕ ಸಾಮರ್ಥ್ಯಗಳನ್ನು ಬಲಪಡಿಸುವುದಲ್ಲ. ಹೀಗೆ ಭಾರತ ಅವರ ಗರಿಷ್ಟ ಲಾಭ ಗಳಿಕೆಗಾಗಿ ತನ್ನ ಆರ್ಥಿಕದ ಇನ್ನಷ್ಟು ಉದಾರೀಕರಣಕ್ಕೆ, ಅದಕ್ಕಾಗಿ ನಮ್ಮ ಮಾರುಕಟ್ಟೆಗಳು, ಸಂಪನ್ಮೂಲಗಳು ಮತ್ತು ಅಗ್ಗದ ಶ್ರಮಶಕ್ತಿಯನ್ನು ಇನ್ನಷ್ಟು ತೆರೆದು ಕೊಡಲು ಸಿದ್ಧವಾಗಿರುವಂತೆ ಕಾಣುತ್ತದೆ. ಇದು ಖಂಡಿತವಾಗಿಯೂ ಭಾರತೀಯ ಜನತೆಯ ಮೇಲೆ ಇನ್ನಷ್ಟು ಸಂಕಟಗಳನ್ನು ಹೇರುವ ದಾರಿ.

## ಮೋದಿ ಸರಕಾರದ ಮಾರಣಾಂತಿಕ...

ಪುಟ 7 ರಿಂದ

### 'ಮೇಡ್ ಇನ್ ಇಂಡಿಯಾ'ವೋ 'ಮೇಕ್ ಇನ್ ಇಂಡಿಯಾ'ವೋ?

ಅಲ್ಲದೆ, ಪ್ರಧಾನ ಮಂತ್ರಿಗಳು ತಮ್ಮ ಮೊದಲ ಸ್ವಾತಂತ್ರ್ಯ ದಿನದ ಕೆಂಪುಕೋಟೆ ಭಾಷಣದಲ್ಲಿ 'ಮೇಡ್ ಇನ್ ಇಂಡಿಯಾ'(ಭಾರತದಲ್ಲಿ ಮಾಡಿದ್ದು) ಎಂಬುದು ನಮ್ಮ ಧ್ಯೇಯವಾಕ್ಯ ಎಂದು ಘೋಷಿಸುತ್ತ ಭಾರತವನ್ನು ಒಂದು ಔದ್ಯಮಿಕ ಕ್ಷೇತ್ರವಾಗಿ ಮಾಡುವ ಬಗ್ಗೆ ಮಾತಾಡಿದರು. ಅಮೆರಿಕಾದಲ್ಲಿ ಅವರು ಮತ್ತೆ ಮತ್ತೆ ಹೇಳಿದ್ದು 'ಮೇಕ್ ಇನ್ ಇಂಡಿಯಾ' ಅಂದರೆ 'ಭಾರತದಲ್ಲಿ ಮಾಡಿ.' ಮೊದಲಿನದ್ದು ಭಾರತದ ದೇಶೀ ಕೈಗಾರಿಕಾ ನೆಲೆಯನ್ನು ಬಲಪಡಿಸುವ ಘೋಷಣೆಯೊಂದಿಗೆ ಪ್ರತಿಪಾದಿಸುವಂತದ್ದಾದರೆ, ಎರಡನೆಯದ್ದು ವಿದೇಶಿ ಹೂಡಿಕೆಗಳಿಗೆ, ನಿರ್ದಿಷ್ಟವಾಗಿ ಅಮೆರಿಕನ್ ಹೂಡಿಕೆಗಳಿಗೆ ಒಂದು ಬಹಿರಂಗ ಆಹ್ವಾನವಾಗಿದೆ.

ವಿದೇಶಿ ಹೂಡಿಕೆದಾರರ ಪ್ರಧಾನ ಉದ್ದೇಶ ಗರಿಷ್ಟ ಲಾಭಗಳಿಕೆಯೇ ಹೊರತು ಭಾರತದ ಉತ್ಪಾದಕ ಸಾಮರ್ಥ್ಯಗಳನ್ನು ಬಲಪಡಿಸುವುದಲ್ಲ. ಹೀಗೆ ಭಾರತ ಅವರ ಗರಿಷ್ಟ ಲಾಭ ಗಳಿಕೆಗಾಗಿ ತನ್ನ ಆರ್ಥಿಕದ ಇನ್ನಷ್ಟು ಉದಾರೀಕರಣಕ್ಕೆ, ಅದಕ್ಕಾಗಿ ನಮ್ಮ ಮಾರುಕಟ್ಟೆಗಳು, ಸಂಪನ್ಮೂಲಗಳು ಮತ್ತು ಅಗ್ಗದ ಶ್ರಮಶಕ್ತಿಯನ್ನು ಇನ್ನಷ್ಟು ತೆರೆದು ಕೊಡಲು ಸಿದ್ಧವಾಗಿರುವಂತೆ ಕಾಣುತ್ತದೆ. ಇದು ಖಂಡಿತವಾಗಿಯೂ ಭಾರತೀಯ ಜನತೆಯ ಮೇಲೆ ಇನ್ನಷ್ಟು ಸಂಕಟಗಳನ್ನು ಹೇರುವ ದಾರಿ.

ಇದರೊಂದಿಗೇ ಆರೆಸ್ಸೆಸ್ ಮತ್ತು ಅದರ ಹಲವು ಹೆಡೆಗಳು ಕೋಮು ಧ್ರುವೀಕರಣದ ತಮ್ಮ ಪ್ರಚಾರಗಳನ್ನು ತೀಕ್ಷ್ಣಗೊಳಿಸಿವೆ. ಇದು ಆರೆಸ್ಸೆಸ್/ಬಿಜೆಪಿ ಅನುಸರಿಸುತ್ತ ಬಂದಿರುವ ಹಳೆಯ ಕಾರ್ಯತಂತ್ರ–ನವ–ಉದಾರವಾದಿ ಆರ್ಥಿಕ ಧೋರಣೆಗಳನ್ನು ಅನುಸರಿಸಿ ಜನತೆಯ ಮೇಲೆ ಹೆಚ್ಚೆಚ್ಚು ಹೊರೆಗಳನ್ನು ಹಾಕುವುದು, ಕೋಮು ಧ್ರುವೀಕರಣವನ್ನು ತೀಕ್ಷ್ಣಗೊಳಿಸುವುದು, ಅದರಿಂದ ಚುನಾವಣಾ ಪ್ರಯೋಜನಗಳನ್ನು ಗಿಟ್ಟಿಸುವುದು. ಹೀಗೆ ಅದು ಬಹುಸಂಖ್ಯಾತ ಹಿಂದೂ ವೋಟ್ ಬ್ಯಾಂಕನ್ನು ಕೋಮು ಧ್ರುವೀಕರಣದ ಆಧಾರದಲ್ಲಿ ಕ್ರೋಡೀಕರಿಸುವ ಅತ್ಯಂತ ಕೆಟ್ಟ ವೋಟ್ ಬ್ಯಾಂಕ್ ರಾಜಕೀಯದ ಆಚರಣೆ ನಡೆಸುತ್ತಿದೆ.

ಇದನ್ನು ಆರೆಸ್ಸೆಸ್ ಮುಖ್ಯಸ್ಥರ ದೂರದರ್ಶನದಲ್ಲಿ ನೇರಪ್ರಸಾರಗೊಂಡ ವಿಜಯ ದಶಮಿ ಭಾಷಣ ದೃಢಪಡಿಸಿದೆ. ಅದು ಜಿಹಾದಿ ಚಟುವಟಿಕೆಗಳು ಗಂಭೀರವಾಗಿ ಭುಗಿಲೇಳುತ್ತವೆ ಎಂದು ಎಚ್ಚರಿಸುತ್ತದೆ, ವಿಶೇಷವಾಗಿ ಕೇರಳ ಮತ್ತು ತಮಿಳುನಾಡಿನಲ್ಲಿ, ಪಶ್ಚಿಮ ಬಂಗಾಲ ಮತ್ತು ಅಸ್ಸಾಂ ಮುಂತಾದೆಡೆಗಳಲ್ಲಿ "ಒಂದು ನಿರ್ದಿಷ್ಟ ಸಮುದಾಯದ ಕಾನೂನುಬಾಹಿರ ವಲಸೆ'ಯ ಬಗ್ಗೆ ಎಚ್ಚರಿಸುತ್ತದೆ. ಜನತೆ ತಮ್ಮ 'ರಾಷ್ಟ್ರೀಯ ಹಿಂದೂ ಅಸ್ಮಿತೆಯ ಹೆಮ್ಮೆ'ಯನ್ನು ಮತ್ತೆ ತರಬೇಕೆಂದು ಆಗ್ರಹಿಸುವಾಗಲೇ ಭಾರತೀಯ ಇತಿಹಾಸವನ್ನು ಒಂದು ಅತ್ಯಂತ ಅವೈಜ್ಞಾನಿಕ ಮತ್ತು ದುರುದ್ದೇಶಪೂರಿತ ರೀತಿಯಲ್ಲಿ ಮತ್ತೆ ಬರೆಯುವ ಮೂಲಕ ಕೋಮು ಧ್ರುವೀಕರಣವನ್ನು ತೀಕ್ಷ್ಣಗೊಳಿಸುವ ಇಂತಹ ಪ್ರಯತ್ನಗಳು ನಡೆಯುತ್ತಿವೆ.

### ದುಷ್ಟ ಅಜೆಂಡಾ

ಸಾವಿರಾರು ವರ್ಷಗಳ ಕಾಲ "ಒಂದೆಡೆ ಹಿಮಾಲಯ ಮತ್ತು ಅದರ ವಿಸ್ತರಣೆಗಳು, ಇನ್ನೊಂದೆಡೆ ಸಾಗರದ ನಡುವೆ ಇರುವ ವಿಶಾಲ ಪ್ರದೇಶದಲ್ಲಿ ರಾರಾಜಿಸುತ್ತಿದ್ದ ರಾಷ್ಟ್ರೀಯ ವಿಚಾರಗಳ ಅಖಂಡಿತ ಪ್ರವಾಹವೇ ಹಿಂದುತ್ವ ಎನಿಸಿಕೊಂಡಿದೆ" ಎಂದು ಅವರು ಹೇಳಿದರು. ಈಮೂಲಕ ಅವರು ನಮ್ಮ ಈ ಮಹಾನ್ ದೇಶದ ಸಮ್ಮಿಶ್ರ ನಾಗರಿಕತೆಯ ಮುನ್ನಡೆಗಳನ್ನು ಸಂಪೂರ್ಣವಾಗಿ ನಿರಾಕರಿಸುತ್ತಾರೆ.

'ಲವ್ ಜಿಹಾದ್'ನ ಪ್ರಶ್ನೆಯ ಮೇಲೆ ಪ್ರಚಾರಗಳು ಆರೆಸ್ಸೆಸ್/ಬಿಜೆಪಿ ಕೋಮು ಭಾವೋದ್ರೇಕಗಳನ್ನು ಬಡಿದೆಬ್ಬಿಸಿ ಆಮೂಲಕ ಕೋಮುಧ್ರುವೀಕರಣವನ್ನು ಉಂಟು ಮಾಡ ಲಿಕ್ಕಾಗಿಯೇ ದುರುದ್ದೇಶದಿಂದ ರೂಪಿಸಿದಂತವುಗಳು ಎಂದು ಈಗ ದೃಢಪಟ್ಟಿದೆ. ಮೇರಠ್‌ನಲ್ಲಿ ಸಾಮೂಹಿಕ ಅತ್ಯಾಚಾರ ಮತ್ತು ಬಲವಂತದ ಮತಾಂತರಕ್ಕೆ ಬಲಿಯಾದವಳು ಎಂದು ಒಬ್ಬ ಯುವತಿಯ ಬಗ್ಗೆ ಪ್ರಚಾರ ಮಾಡಲಾಗಿತ್ತು, ಅದೀಗ ಮೇರಠ್‌ನ ಒಬ್ಬ ಸ್ಥಳೀಯ ಬಿಜೆಪಿ ಮುಖಂಡನ ಕುಮ್ಮಕ್ಕಿನಿಂದ ನಡೆದ ಘಟನೆ ಎಂದು ತೋರಿಸಲಾಗಿದೆ. ಆ ಹೆಣ್ಣುಮಗಳು ಅಂತಹ ಹೇಳಿಕೆ ನೀಡಲು ಆಕೆಯ ಕುಟುಂಬದವರಿಗೆ ಹಣ ತೆರಲಾಗಿತ್ತು ಎಂದೀಗ ಸುದ್ದಿಯಾಗಿದೆ. ಪೋಲೀಸರೀಗ ಆ ಹುಡುಗಿಯ ಪಾಲಕರ ಮೇಲೆ ದಾಳಿ ಮತ್ತು ಕೊಲೆ ಬೆದರಿಕೆ ಎಂಬ ಆಪಾದನೆಯನ್ನು ಹಾಕಿದ್ದಾರೆ. (ಟೈಂಸ್ ಆಫ್ ಇಂಡಿಯಾ, ಅಕ್ಟೋಬರ್ 15, 2014)

ಅದೇ ರೀತಿ, ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ (ಅಕ್ಟೋಬರ್ 11, 2014) ಪ್ರಕಟವಾದ ವರದಿಯ ಪ್ರಕಾರ ವಿಹೆಚ್‌ಪಿ ಮುಖಂಡ ಸುದರ್ಶನ್ 'ಲವ್ ಜಿಹಾದ್' ಪ್ರವೃತ್ತಿಯನ್ನು ತೋರಿಸಲು ಅಂಕಿ–ಅಂಶಗಳನ್ನು ಕೊಡುತ್ತಾರೆ, ಕಳೆದ ಐದು ವರ್ಷಗಳಲ್ಲಿ ಕೇವಲ ಮೇರಠ್ ಪ್ರದೇಶದಲ್ಲಿಯೇ ಕನಿಷ್ಟ 100–150 ಇಂತಹ ಪ್ರಕರಣಗಳು ನಡೆದಿವೆ ಎನ್ನುತ್ತಾರೆ. ಒಂದಾದರೂ ಇಂತಹ ಪ್ರಕರಣದ ವಿವರಗಳನ್ನು ಕೊಡಿ ಎಂದಾಗ ಸುದರ್ಶನ್ ಗ್ರಾಮೀಣ ಮೇರಠ್‌ನ ಮಾವನ ಎಂಬಲ್ಲಿನ ಒಂದು ಪ್ರಕರಣವನ್ನು ಪ್ರಸ್ತಾಪಿಸುತ್ತಾರೆ. ಆದರೆ ತಕ್ಷಣವೇ ಮಾತು ತಿರುಗಿಸುತ್ತಾರೆ, ಮುಸ್ಲಿಂ ಹುಡುಗನೊಂದಿಗೆ ಓಡಿ ಹೋಗಿ ನಂತರ ದೂರುನೀಡಿದ ಹುಡುಗಿ ಮತ್ತೆ ಆತನೊಂದಿಗೇ ಓಡಿ ಹೋಗಿದ್ದಾಳೆ ಎಂದು ಒಪ್ಪಿಕೊಳ್ಳುತ್ತಾರೆ!

ಹೀಗೆ ಅವರ ದುಷ್ಟ ಅಜೆಂಡಾ ಸ್ಪಷ್ಟವಾಗಿದೆ: ಜಾತ್ಯಾತೀತ ಪ್ರಜಾಸತ್ತಾತ್ಮಕ ಬಾರತೀಯ ಗಣತಂತ್ರವನ್ನು ಆರೆಸ್ಸೆಸ್‌ನ ಕಣ್ಣೋಟದ ಒಂದು ಉನ್ಮತ್ತ ಅಸಹಿಷ್ಣು ಫ್ಯಾಸಿಸ್ಟ್ ಮಾದರಿಯ 'ಹಿಂದೂರಾಷ್ಟ'ವಾಗಿ ಪರಿವರ್ತಿಸುವುದು ಮತ್ತು ಅದರಿಂದ ಕೋಮು ಧ್ರುವೀಕರಣವನ್ನು ತೀಕ್ಷ್ಣಗೊಳಿಸಿ ಅದರ ರಾಜಕೀಯ ಮತ್ತು ಚುನಾವಣಾ ಪ್ರಯೋಜನಗಳನ್ನು ಪಡೆಯುವುದು, ಅದೇ ವೇಳೆಗೆ ಜನತೆಯ ಬೆನ್ನು ಮುರಿಯುವ ಆರ್ಥಿಕ ಹೊರೆಗಳನ್ನು ಹಾಕುವುದು. ■

## ಒಕ್ಕಲೆಬ್ಬಿಸುವುದನ್ನು ನಿಲ್ಲಿಸಿ....

ಪುಟ 9 ರಿಂದ

ದನಗಳಿದ್ದಲ್ಲಿ 30ಎಕರೆ ಗೋಮಾಳ ಉಳಿಸಬೇಕೆಂಬ ನ್ಯಾಯಾಲಯದ ನಿರ್ದೇಶನವಿದೆ. ಕರ್ನಾಟಕದಲ್ಲಿ ವಿಶೇಷವಾಗಿ ದಕ್ಷಿಣ ಕರ್ನಾಟಕದಲ್ಲಿ ಹೈನುಗಾರಿಕೆಯ ಸ್ವರೂಪ ಬದಲಾಗಿದೆ. ಈಗ ಹೆಚ್ಚಾಗಿ ವಿದೇಶಿ ತಳಿಗಳ ಹಸುಗಳನ್ನು ಸಾಕಲಾಗುತ್ತಿದೆ. ಅವಕ್ಕೆ ಗೋಮಾಳದ ಅಗತ್ಯವಿಲ್ಲ. ಈ ಅಂಶಗಳನ್ನು ಪರಿಗಣಿಸಿ ಕಾನೂನಿನಲ್ಲಿ ಬದಲಾವಣೆ ತರಬೇಕು ಎಂದು ಮಾನ್ಪಡೆಯವರು ಹೇಳಿದರು.

### ಶೇ. 36 ಜನರಿಗೆ ಭೂಮಿಯಿಲ್ಲ

**– ಜಿ.ಸಿ. ಬಯ್ಯಾರೆಡ್ಡಿ**

ಉಳುವವನೇ ಹೊಲದೊಡೆಯ ಎಂಬ ಘೋಷಣೆಗಳನ್ನು ಕೇಳಿದ್ದೇವೆ. ಆದರೆ ನೈಸ್ ಕಂಪನಿಯ ಕೈಯಲ್ಲಿ 18 ಸಾವಿರ ಎಕರೆ ಇದೆ. ಮತ್ತೊಂದೆಡೆ ಕರ್ನಾಟಕ ರಾಜ್ಯದಲ್ಲಿ ಶೇ. 36 ರಷ್ಟು ಕೃಷಿಕ ಕುಟುಂಬಗಳಿಗೆ ಸ್ವಂತದ ತುಂಡು ಭೂಮಿಯೂ ಇಲ್ಲ. ಬಗರ್ ಹುಕುಂ ಸಾಗುವಳಿ ಸಕ್ರಮ ಕೋರಿ, ಅರಣ್ಯ ಭೂಮಿ ಸಾಗುವಳಿ ಸಕ್ರಮ ಕೋರಿ ಅರ್ಜಿ ಹಾಕಲು ಅವಕಾಶ ಆಗದವರಿಗೆ ಅರ್ಜಿ ಹಾಕಲು ಅವಕಾಶ ಸಿಗುವಂತಾಗಬೇಕು. ಕಾನೂನು ತಿದ್ದುಪಡಿ ತಂದು ಭೂಮಿ ಹಕ್ಕು ನೀಡಬೇಕು. ಅರಣ್ಯ ಹಕ್ಕು ಕಾಯ್ದೆಯ ಸಮರ್ಪಕ ಜಾರಿ ಆಗಬೇಕು. ನಾನಾ ಕಾರಣಗಳಿಂದ ತಿರಸ್ಕರಿಸಲಾದ ಅರ್ಜಿಗಳನ್ನು ಮರುಪರಿಶೀಲಿಸಿ ಅರ್ಹರಿಗೆ ಬಡವರಿಗೆ, ಭೂಮಿ ನೀಡಬೇಕು. ಬಾಕಿ ಇರುವ ಅರ್ಜಿಗಳನ್ನು ಇತ್ಯರ್ಥ ಪಡಿಸಬೇಕು ಎಂದು ಅವರು ಆಗ್ರಹಿಸಿದರು.

ಕರ್ನಾಟಕ ರಾಜ್ಯ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ಮುಖಂಡರಾದ ಎಸ್. ವೈ. ಗುರುಶಾಂತ್ ಮಾತನಾಡಿ ಆದಿವಾಸಿಗಳಿಗೆ ಅರಣ್ಯ ಭೂಮಿಯಲ್ಲಿ ಸಾಗುವಳಿ ಮಾಡಿರುವಲ್ಲಿ ಭೂಮಿ ಹಕ್ಕು ನೀಡಬೇಕು. ಆದಿವಾಸಿಗಳು ಎಂದೂ ಪರಿಸರ ವಿರೋಧಿಗಳಲ್ಲ. ಕಾಡು ಪರಿಸರ ಕಾಪಾಡುವವರು ಎಂದರು.

ಡಿವೈಎಫ್‌ಐ ಸಂಘಟನೆಯ ರಾಜ್ಯ ಕಾರ್ಯದರ್ಶಿ ಬಿ. ರಾಜಶೇಖರ ಮೂರ್ತಿ ಮಾತನಾಡಿ ಕೃಷಿಯ ಮೇಲೆ ನಮ್ಮ ಸಮಾಜದ ಶೇ. 60 ಕ್ಕಿಂತ ಹೆಚ್ಚು ಜನ ಅವಲಂಬಿಸಿದ್ದಾರೆ. ದೊಡ್ಡ ಪ್ರಮಾಣದಲ್ಲಿ ಉದ್ಯೋಗಾವಕಾಶವನ್ನು ಸೃಷ್ಟಿಸಿರುವ ಕೃಷಿ ಕ್ಷೇತ್ರವನ್ನು ಬಂಡವಾಳಿಗರ ಹಿಡಿತಕ್ಕೆ ಕೊಟ್ಟ ನಾಶ ಮಾಡಬಾರದು ಎಂದರು.

ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ಎಸ್. ಲಕ್ಷ್ಮೀ ನಿರೂಪಣೆ ಮಾಡಿದರು. ಸಿಐಟಿಯು ರಾಜ್ಯ ಅಧ್ಯಕ್ಷರಾದ ಕಾಂ. ವಿಜೆಕೆ ನಾಯರ್, ಕೂಲಿಕಾರರ ಸಂಘದ ಪ್ರಧಾನ ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೇರಾ, ಕಾಫಿ ಬೆಳೆಗಾರರ ಸಂಘದ ಮುಖಂಡರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಯು. ಬಸವರಾಜ್ ರವರ ಸಮಾರೋಪ ಮಾತುಗಳೊಂದಿಗೆ ಅನಿರ್ಧಿಷ್ಟ ಧರಣದ ಉದ್ಘಾಟನಾ ಸಮಾರಂಭ ಮುಕ್ತಾಯವಾಯಿತು.

ಧರಣ ಸ್ಥಳಕ್ಕೆ ಸರಕಾರದ ಪರವಾಗಿ ಬಂದ ಕಂದಾಯ ಸಚಿವರಾದ ಶ್ರೀನಿವಾಸ್ ಪ್ರಸಾದ್ ಅವರು ತಾವು ಬೇಡಿಕೆಗಳ ಕುರಿತು ಮುಖ್ಯಮಂತ್ರಿಗಳಿಗೆ ವಿವರಿಸಿ ಮಾತುಕತೆಗೆ ವ್ಯವಸ್ಥೆ ಮಾಡುವುದಾಗಿ ಭರವಸೆ ನೀಡಿ ಧರಣ ಕೊನೆಗೊಳಿಸಲು ವಿನಂತಿಸಿದರು.

ಆದರೆ ಸರಕಾರದ ಕಡೆಯಿಂದ ಖಚಿತ ಭರವಸೆ, ನಿರ್ದಿಷ್ಟ ಪರಿಹಾರ ಯಾವುದೂ ಇಲ್ಲದೇ ಅನಿರ್ಧಿಷ್ಟ ಚಳುವಳಿಯನ್ನು ಕೊನೆಗೊಳಿಸಲು ರೈತರು, ಚಳುವಳಿಗಾರರು ತಯಾರಿರಲಿಲ್ಲ. ಅವರು ಚಳುವಳಿ ಮುಂದುವರಿಸಲು ನಿರ್ಧರಿಸಿದರು. ಬೆಂಗಳೂರಿನಲ್ಲಿ ನಿರಂತರವಾಗಿ ಸುರಿದಿರುವ ಮಳೆ. ನವೆಂಬರ್ ತಿಂಗಳು ಸಮೀಪಿಸುತ್ತಿರುವುದರಿಂದ ರಾತ್ರಿಯ ಹೊತ್ತು ಏರುತ್ತಿರುವ ಚಳಿ ಇದ್ದರೂ ಸಹಸ್ರಾರು ರೈತರು ಸ್ವಾತಂತ್ರ್ಯ ಉದ್ಯಾನ ವನದ ಬಯಲಲ್ಲಿ ಮಲಗಿದರು. ಹಿಮ ಬೀಳದಂತೆ ಮೇಲೊಂದು ಚಪ್ಪರವಷ್ಟೇ ಅವರ ರಕ್ಷಣೆಗೆ. ಅಕ್ಟೋಬರ್ 14 ರಂದು ಇತ್ತ ಚಳುವಳಿ ಅತ್ತ ಮುಖ್ಯಮಂತ್ರಿಗಳು ಸಚಿವರು–ಅಧಿಕಾರಿಗಳ ಸಮ್ಮುಖದಲ್ಲಿ ಚರ್ಚೆ ನಡೆದು ಚಳುವಳಿಯ ನಾಯಕತ್ವ ನೀಡುವ ಸಮಿತಿಗಳು ತೀರ್ಮಾನಿಸಿದ ಮೇಲೆ ಅನಿರ್ಧಿಷ್ಟ ಧರಣ ಮುಗಿಸಲು ಒಪ್ಪಿದರು. ನಂತರ ಸ್ಥಳೀಯವಾಗಿ ತಮ್ಮ ತಮ್ಮ ಊರುಗಳಲ್ಲಿ ಚಳುವಳಿ ತೀವ್ರಗೊಳಿಸುವ ತೀರ್ಮಾನದೊಂದಿಗೆ 'ಪ್ರಾಣವನ್ನಾದರೂ ಬಿಟ್ಟೇವು, ಆದರೆ ಭೂಮಿಯನ್ನು ಮಾತ್ರ ಬಿಡುವುದಿಲ್ಲ' ಎಂಬ ದೃಢ ಪ್ರತಿಜ್ಞೆಯೊಂದಿಗೆ ಕೆಂಬಾವುಟ ಹಿಡಿದು ಮರಳಿದರು. ●

---

## ಸಂಗಾತಿ ಆರ್. ಕೋದಂಡರಾಮ್......

ಪುಟ 5 ರಿಂದ

ನೆನಪಿಸಿಕೊಳ್ಳುವುದು ಇಂತಹ ಸಮರ್ಪಣಾ ಭಾವದಿಂದಲೇ. ಕಳೆದ ಆಗಸ್ಟ್ ತಿಂಗಳಲ್ಲಿ ನಡೆದ ಜನಶಕ್ತಿಯ ಉತ್ಸವದಲ್ಲಿ ಸ್ಫೂರ್ತಿ ನೀಡುವ, ಬದ್ಧತೆಯಿಂದ ಕರ್ತವ್ಯ ನಿರ್ವಹಿಸಿದ ಕಾರಣಕ್ಕೆ ಅವರನ್ನು ಸನ್ಮಾನಿಸಲು ಆಯ್ಕೆ ಮಾಡಲಾಗಿತ್ತು. ಅನಾರೋಗ್ಯದಿಂದಾಗಿ ಬರದೇ ಇದ್ದುದ–ರಿಂದ ಅವರನ್ನು ಮನೆಯಲ್ಲೇ ಸನ್ಮಾನಿಸಿ ಗೌರವಿಸಲಾಯಿತು.

ಕಾಂ:ಕೋದಂಡರಾಮ್ ರವರು ಅಕ್ಟೋ.15ರಂದು ಬೆಳಗಿನ ಜಾವ 3.15ಕ್ಕೆ ಆಸ್ಪತ್ರೆಯಲ್ಲಿ ನಿಧನರಾದ ಸುದ್ದಿ ತಿಳಿದ ಅನೇಕ ಸಂಗಾತಿಗಳು ಅವರಿದ್ದ ಮಗಳ ಮನೆಗೆ ಧಾವಿಸಿ ಅಂತಿಮ ನಮನ ಸಲ್ಲಿಸಿ ಶ್ರದ್ಧಾಂಜಲಿ ಅರ್ಪಿಸಿದರು. ಪಕ್ಷದ ರಾಜ್ಯ ಕಾರ್ಯದರ್ಶಿ ಕಾಂ. ಜಿ.ವಿ.ಶ್ರೀರಾಮರೆಡ್ಡಿ, ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯರಾದ ಕಾಂ.ವಿ.ಜೆ.ಕೆ.ನಾಯರ್, ಜನಶಕ್ತಿ ಸಂಪಾದಕರಾದ ಕಾಂ.ನಿತ್ಯಾನಂದಸ್ವಾಮಿ, ಕಾಂ. ಎಸ್.ವರಲಕ್ಷ್ಮಿ, ರಾಜ್ಯ ಸಮಿತಿಯ ಸದಸ್ಯರಾದ ಕಾಂ.ಎಸ್.ವೈ.ಗುರುಶಾಂತ್, ಬೆಂಗಳೂರು ಉತ್ತರ ಜಿಲ್ಲಾ ಸಮಿತಿಯ ಕಾರ್ಯದರ್ಶಿ ಕಾಂ.ಮೀನಾಕ್ಷಿ ಸುಂದರಂ, ಜಿಲ್ಲಾ ಸೆಕ್ರಟಾರಿಯೇಟ್ ಸದಸ್ಯರಾದ ಕಾಂ.ಗೌರಮ್ಮ, ಕಾಂ.ಹೆಚ್.ಎನ್.ಗೋಪಾಲಗೌಡ, ಕಾಂ.ರಮೇಶ್, ಪಕ್ಷದ ಬೆಂ. ದಕ್ಷಿಣ ಜಿಲ್ಲಾ ಕಾರ್ಯದರ್ಶಿ ಕಾಂ. ಕೆ.ಪ್ರಕಾಶ್, ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ.ಕೆ.ಎನ್.ಉಮೇಶ್, ಅಖಿಲ ಭಾರತ ವಕೀಲರ ಸಂಘದ ನಾಯಕರೂ, ಹಿರಿಯ ವಕೀಲರೂ ಆದ ಕಾಂ.ಕೆ.ಆರ್.ವೆಂಕಟೇಶ್‌ಗೌಡ, ಸಿಐಟಿಯು ವಿನ ರಾಜ್ಯ ಮುಖಂಡರಾದ ಕಾಂ. ಕೆ.ಮಹಂತೇಶ್, 'ಜನಶಕ್ತಿ'ಯ ಆರ್. ರಾಮಕೃಷ್ಣ, ಐ.ಟಿ.ಐ. ಕಾರ್ಮಿಕ ಸಂಘದ ಅಧ್ಯಕ್ಷರಾಗಿದ್ದ ಕಾಂ.ಗೋಪಿ, ಮತ್ತು ಐ.ಟಿ.ಐ.ನ ಸಂಗಾತಿಗಳು, ಕಾರ್ಮಿಕರು, ಕಾಂ.ಕೃಷ್ಣಮೂರ್ತಿಮುಂತಾದವರು ಶ್ರದ್ಧಾಂಜಲಿ ಅರ್ಪಿಸಿದರು.

ಅಂತ್ಯಕ್ರಿಯೆಯನ್ನು ಕಲ್ಪಳ್ಳಿ ವಿದ್ಯುತ್ ಚಿತಾಗಾರದಲ್ಲಿ ನೆರವೇರಿಸಿದ ನಂತರ ಅಲ್ಲಿ ಶ್ರದ್ಧಾಂಜಲಿ ಸಭೆಯೂ ನಡೆಯಿತು. ಕಾಂ.ಆರ್. ಕೋದಂಡರಾಮ್‌ರವರ ಕೊಡುಗೆಗಳ ಬಗ್ಗೆ, ಅವರ ಮಗಳು ಮತ್ತು ಅಳಿಯ ಹಾಗೂ ಅವರ ಕುಟುಂಬದ ಸದಸ್ಯರುಗಳು ಮಾಡಿದ ಆರೈಕೆ, ತೋರಿದ ಪ್ರೀತಿ, ವಾತ್ಸಲ್ಯಗಳನ್ನು ಸ್ಮರಿಸಲಾಯಿತು. ●

### ಸರಿಯಾದ ‘ಬೆವರಿನ ಪಾಲಿಗಾಗಿ’ ಹೋರಾಟದ ಕಣದಲ್ಲಿರುವ

# ಆಡುಗೋಡಿ ‘ಭಾಷ್’ ಕಾರ್ಮಿಕರು...

‘ಮೈಕೋ’ ಕಾರ್ಖಾನೆ ಎಂದೇ ಕರೆಯಲಾಗುವ ಬೆಂಗಳೂರು ಆಡುಗೋಡಿ ಪ್ರದೇಶದ ಬಾಷ್ ಕಾರ್ಖಾನೆಯ ಕಾರ್ಮಿಕರು ತಮ್ಮ ನ್ಯಾಯಯುತ ಬೇಡಿಕೆಗಳಿಗೆ ಹೋರಾಟದ ಕಣದಲ್ಲಿದ್ದಾರೆ.

‘ಬಾಷ್’ ಎಂಬುದು ಒಂದು ಜರ್ಮನ್ ಮೂಲದ ಬಹುರಾಷ್ಟ್ರೀಯ ಕಂಪನಿ. ಬೆಂಗಳೂರಿನ ಆಡುಗೋಡಿಯ ಬಾಷ್ ಘಟಕದಲ್ಲಿ ವಾಹನಗಳ ಎಂಜಿನ್‌ನ ಹಲವು ಬಿಡಿಭಾಗಗಳನ್ನು ಉತ್ಪಾದಿಸಲಾಗುತ್ತದೆ. ಈ ಉತ್ಪನ್ನಗಳಿಗೆ ಜಾಗತಿಕವಾದ ಮಾರುಕಟ್ಟೆ ಇದೆ. ಈ ಕಾರ್ಖಾನೆಯ ಕಾರ್ಮಿಕರ ಬೆವರಿನ ಪರಿಶ್ರಮದಿಂದ ಬಾಷ್ ಕಂಪನಿಯು 2013ನೇ ಇಸವಿಯಲ್ಲಿ ಸುಮಾರು 884 ಕೋಟಿ ನಿವ್ವಳ ಲಾಭವನ್ನು ಗಳಿಸಿದೆ. ಅದೇ ರೀತಿಯಾಗಿ 2012ರಲ್ಲಿ 958 ಕೋಟಿ, 2011ರಲ್ಲಿ – 1122.7 ಕೋಟಿ ನಿವ್ವಳ ಲಾಭ ಗಳಿಸಿದೆ. ಇದು ಕಾರ್ಮಿಕರ ಪರಿಶ್ರಮ ಎಷ್ಟೊಂದು ಅಗಾಧ ಎಂದು ತಿಳಿಸುತ್ತದೆ. ಮುಂದಿನ ವಿವರಗಳನ್ನು ಓದಿದರೆ ‘ಬಾಷ್’ ಆಡಳಿತ ವರ್ಗದ ಮೊಂಡು ಧೋರಣೆ ಕಾರ್ಮಿಕ ವಿರೋಧಿ ನೀತಿಯೂ ಗೊತ್ತಾಗುತ್ತದೆ.

**ವೇತನ ಒಪ್ಪಂದ ವಿಳಂಬ**

ಆಡುಗೋಡಿಯ ಬಾಷ್ ಕಂಪನಿಯಲ್ಲಿ ಏಕಮೇವ ಅಧಿಕೃತ ಕಾರ್ಮಿಕ ಸಂಘಟನೆ ‘ಮೈಕೋ ಎಂಪ್ಲಾಯಿಸ್ ಅಸೋಸಿಯೇಷನ್’ (ಎಂ.ಇ.ಎ.) ಸಂಘದೊಂದಿಗೆ ಆಗಿದ್ದ ಹಿಂದಿನ ಒಪ್ಪಂದ ಕೊನೆಗೊಂಡಿರುವುದರಿಂದ ಕಾರ್ಮಿಕ ಸಂಘವು ದೀರ್ಘಕಾಲಿಕ ವೇತನ ಒಪ್ಪಂದದ ಬೇಡಿಕೆ ಪಟ್ಟಿಯನ್ನು ಬಾಷ್ ಕಂಪನಿಗೆ ಅಕ್ಟೋಬರ್ 2012ರಲ್ಲಿ ನೀಡಿತ್ತು. ಈ ಸಂಬಂಧ ಸುಮಾರು 36 ಸುತ್ತಿನ ಮಾತುಕತೆಯಲ್ಲಿ 60 ಬೇಡಿಕೆಗಳು ಹಾಗೂ ಆಡಳಿತ ವರ್ಗದ ಪ್ರಸ್ತಾವನೆಗಳಾದ ‘ಉತ್ಪಾದನೆ ಹೆಚ್ಚಳ’ದ (ಪ್ರೊಡಕ್ಟಿವಿಟಿ) ಮಾತುಕತೆ ನಡೆಯಿತು. ಆದರೆ 20 ತಿಂಗಳು ಕಳೆದರೂ ಆಡಳಿತ ವರ್ಗದ ಹಠಮಾರಿ ಧೋರಣೆ ಕಾರಣದಿಂದ ವೇತನ ಒಪ್ಪಂದ ಇತ್ಯರ್ಥಗೊಳ್ಳಲಿಲ್ಲ.

ಈ ಹಿನ್ನೆಲೆಯಲ್ಲಿ ಸಂಘದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಚರ್ಚಿಸಿ ಸೆಪ್ಟೆಂಬರ್, 16 2014 ರ ಮೊದಲನೇ ಪಾಳಿಯ ಬೆಳಿಗ್ಗೆ 06:00 ಗಂಟೆಯಿಂದ ಅನಿರ್ದಿಷ್ಟಕಾಲ ಮುಷ್ಕರಕ್ಕೆ ಹೋಗಲು ಸರ್ವಾನುಮತದಿಂದ ತೀರ್ಮಾನಿಸಿ ಆಡಳಿತ ವರ್ಗದವರಿಗೆ ಒಪ್ಪಂದದ ಪ್ರಕಾರ ಮುಷ್ಕರದ ನೋಟಿಸ್‌ನ್ನು ನೀಡಲಾಗಿತ್ತು. ಇಷ್ಟಾದರೂ ಆಡಳಿತವರ್ಗದವರು ಬೇಡಿಕೆಗಳ ಪಟ್ಟಿಯ ವಿಷಯಗಳನ್ನು ಚರ್ಚಿಸಿ, ತೀರ್ಮಾನಿಸಲು ಮುಂದಾಗಲಿಲ್ಲ. ಆಡಳಿತ ಮಂಡಳಿಯ ಈ ಧೋರಣೆ ವಿರುದ್ಧ 2,575 ಜನ ಸಂಘದ ಸದಸ್ಯರು, ಹಾಗೂ 370 ಜನ ಹಂಗಾಮಿ ಕಾರ್ಮಿಕರು 16.09.2014ರ ಬೆಳಗ್ಗೆ 6 ಗಂಟೆಯಿಂದ ಮುಷ್ಕರ ಆರಂಭಿಸಿದರು.

**ಬೇಡಿಕೆಗಳು**

ಉತ್ಪಾದಕತೆ ಹೆಚ್ಚಳ ಕುರಿತಂತೆ ಇರುವ ವಿವಾದವನ್ನು ತಕ್ಷಣ ಬಗೆಹರಿಸಬೇಕು. ವೈದ್ಯಕೀಯ ಸೌಲಭ್ಯ ಕುರಿತಂತೆ ಆಡಳಿತ ವರ್ಗದವರು, ಏಕಪಕ್ಷೀಯವಾಗಿ ಮಾಡಿರುವ ಕಡಿತದ ನಿರ್ಧಾರವನ್ನು ಹಿಂಪಡೆಯಬೇಕು. ಹಂಗಾಮಿ ಕಾರ್ಮಿಕರನ್ನು ಖಾಯಂಗೊಳಿಸಲು ಕ್ರಮವಹಿಸಬೇಕು. ದಂಡರೂಪದ ವೇತನ ಕಡಿತವನ್ನು ಕೂಡಲೇ ನಿಲ್ಲಿಸಬೇಕು. ಕೂಡಲೇ 1300 ಕಾರ್ಮಿಕರಿಗೆ ಬಡ್ತಿ ನೀಡಬೇಕು. ಚಾರ್ಜ್‌ಶೀಟ್, ಅಮಾನತು ಹಾಗೂ ವಜಾ ಸೇರಿದಂತೆ ಎಲ್ಲಾ ರೀತಿಯ ಕಾರ್ಮಿಕ ವಿರೋಧಿ ನೀತಿಗಳನ್ನು ಕೈ ಬಿಡಬೇಕು. ರಾತ್ರಿ ಪಾಳಿಯಲ್ಲಿ ಕೆಲಸ ಮಾಡುವ ಕಾರ್ಮಿಕರನ್ನು ವಿನಾಕಾರಣ ಅಮಾನತು ಮಾಡಿರುವ ಕ್ರಮ ಕೈ ಬಿಡಬೇಕು. ಸ್ವಯಂ ನಿವೃತ್ತಿ ಯೋಜನೆ ಅಡಿಯಲ್ಲಿ ಕಾರ್ಮಿಕರನ್ನು




ಅಮಾನುಷವಾಗಿ ಬೀದಿಗೆ ತಳ್ಳಿದ ಆಡಳಿತ ವರ್ಗದ ಕ್ರಮ ವಾಪಸ್ಸಾಗಬೇಕು ಮುಂತಾಗಿ ಕಾರ್ಮಿಕರು ಕೆಲವು ಪ್ರಮುಖ ಬೇಡಿಕೆಗಳನ್ನು ಇಟ್ಟಿದ್ದರು.

**ವಿಫಲವಾದ ಸಂಧಾನ ಸಭೆಗಳು :**

ಹೆಚ್ಚುವರಿ ಕಾರ್ಮಿಕ ಆಯುಕ್ತರ ಸಮ್ಮುಖದಲ್ಲಿ ಹಲವಾರು ಸುತ್ತಿನ ಸಂಧಾನ ಸಭೆಗಳು ನಡೆದು ಅದರಲ್ಲಿ ಹೆಚ್ಚುವರಿ ಕಾರ್ಮಿಕರ ಆಯುಕ್ತರು ಆಡಳಿತ ವರ್ಗದವರಿಗೆ ಸಂಘದವರೊಡನೆ, ದ್ವಿಪಕ್ಷೀಯ ಮಾತುಕತೆ ಮೂಲಕ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಿ ಎಂದು ತಾಕೀತು ಮಾಡಿದರೂ ಯಾವುದೇ ರೀತಿಯಲ್ಲೂ ಆಡಳಿತ ವರ್ಗದವರು ಸಮಸ್ಯೆಗಳನ್ನು ಬಗೆಹರಿಸಲು ಮುಂದಾಗಿಲ್ಲ.

ಬಾಷ್ ಕಾರ್ಖಾನೆಯ ಇತಿಹಾಸದಲ್ಲಿ ಬಾಷ್ ಕಂಪನಿಯ ಔದ್ಯೋಗಿಕ ಸಂಬಂಧ ಸಂಪೂರ್ಣವಾಗಿ ವಿಫಲಗೊಂಡಿದೆ. ಇದಕ್ಕೆ ನೇರವಾಗಿ ಆಡಳಿತ ವರ್ಗವೇ ಹೊಣೆಯಾಗಿದೆ ಎಂದು ಕಾರ್ಮಿಕರ ಸಂಘಟನೆ ತೀವ್ರವಾಗಿ ಟೀಕಿಸಿದೆ.

**ಮುಖ್ಯಮಂತ್ರಿ ಭೇಟಿಗೆ ಯತ್ನಿಸಿದ ಕಾರ್ಮಿಕ ನಾಯಕರ ಬಂಧನ :**


27 ದಿನಗಳ ಕಾಲ ನಿರಂತರ ಹೋರಾಟ ನಡೆಸಿದ ಬಾಷ್ ಕಾರ್ಖಾನೆ ಕಾರ್ಮಿಕರು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಕಾನೂನಾತ್ಮಕ ಪರಿಹಾರ ಕೋರಲು ಹೋದ ಸಂದರ್ಭದಲ್ಲಿ ಅದಕ್ಕೆ ಅವಕಾಶ ಮಾಡಿಕೊಡದೇ ಕಾರ್ಮಿಕ ಸಂಘದ ಅಧ್ಯಕ್ಷ ಎಸ್. ಪ್ರಸನ್ನಕುಮಾರ್ ಮತ್ತು ಇತರೆ ಪದಾಧಿಕಾರಿಗಳು ಹಾಗೂ ನೂರಾರು ಸಂಖ್ಯೆಯ ಕಾರ್ಮಿಕರನ್ನು ಪೊಲೀಸರು ಬಂಧಿಸಿದ್ದಾರೆ.

ಈ ಕ್ರಮವನ್ನು ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್(ಸಿಐಟಿಯು) ರಾಜ್ಯ ಸಮಿತಿ ತೀವ್ರವಾಗಿ ಖಂಡಿಸಿದೆ. ಈ ಸಂಬಂಧ ಸರಕಾರದ ಹಾಗೂ ಆಡಳಿತ ಮಂಡಳಿಯ ಧೋರಣೆಗಳನ್ನು ಸಿಐಟಿಯು ಸಂಘಟನೆಯ ರಾಜ್ಯ ಸಮಿತಿಯ ಅಧ್ಯಕ್ಷರಾದ ವಿಜೆಕೆ ನಾಯರ್, ರಾಜ್ಯ ಕಾರ್ಯದರ್ಶಿಗಳಾದ ಎಸ್. ವರಲಕ್ಷ್ಮಿ, ಕೆ. ಮಹಾಂತೇಶ್ ಮುಂತಾದವರು ತರಾಟೆಗೆ ತೆಗೆದುಕೊಂಡಿದ್ದಾರೆ.

ಈ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರವು ಆಡಳಿತ ಮಂಡಳಿಗೆ ಕಟ್ಟುನಿಟ್ಟಿನ ಸೂಚನೆ ನೀಡುವ ಬದಲು ಅದರ ತಾಳಕ್ಕೆ ತಕ್ಕಂತೆ ವರ್ತಿಸಿ ಕಾರ್ಮಿಕರ ಮುಷ್ಕರವನ್ನು ನಿಷೇಧ ಮಾಡಿದೆ. ಆದರೆ ಕೈಗಾರಿಕಾ ವಿವಾದ ಕಾಯ್ದೆ–1947 ಅಡಿಯಲ್ಲಿ ನಿಷೇಧ ಹೇರಿದ್ದರೂ ಕೂಡ ಅದೇ ಕಾನೂನಿನ ಸೆಕ್ಷನ್ 10(ಬಿ) ಅಡಿಯಲ್ಲಿ ಕಾರ್ಮಿಕರಿಗೆ ಪರಿಹಾರವನ್ನು ಘೋಷಿಸುವ ಅಧಿಕಾರ ಸರ್ಕಾರಕ್ಕೆ ಇದೆ.

ಈ ಸಂಬಂಧ ಕಾನೂನಾತ್ಮಕ ಪರಿಹಾರವನ್ನು ನೀಡಬೇಕೆಂದು ಕೋರಿ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಮನವರಿಕೆ ಮಾಡಲು ಅಕ್ಟೋಬರ್ 13 ರಂದು ಬೆಳಿಗ್ಗೆ ಕಾರ್ಮಿಕ ಸಂಘದ ಪದಾಧಿಕಾರಿಗಳ ನಿಯೋಗ ಮುಖ್ಯಮಂತ್ರಿಗಳ ಗೃಹ ಕಚೇರಿ ‘ಕೃಷ್ಣಾ’ಗೆ ತೆರಳಿತ್ತು.

ಆದರೆ ಕಾರ್ಮಿಕ ಸಂಘದ ನಿಯೋಗವನ್ನು ಮುಖ್ಯಮಂತ್ರಿಗಳ ಬಳಿಗೆ ಕರೆದೊಯ್ಯದೆ ಶಾಂತಿಯುತ ಮಾತುಕತೆಗೆ ಅವಕಾಶ ನೀಡದ ಪೊಲೀಸರು ನಿಯೋಗದ ಮುಖಂಡತ್ವ ವಹಿಸಿದ್ದ ಸಂಘದ ಅಧ್ಯಕ್ಷರೂ ಹಾಗೂ ಸಿಐಟಿಯು ರಾಜ್ಯ



ಪ್ರಧಾನ ಕಾರ್ಯದರ್ಶಿಗಳು ಮತ್ತು ಅಖಿಲ ಭಾರತ ಕಾರ್ಯದರ್ಶಿಯೂ ಆಗಿರುವ ಎಸ್. ಪ್ರಸನ್ನಕುಮಾರ್ ಮತ್ತು ಇತರೆ ಪದಾಧಿಕಾರಿಗಳನ್ನು ಬಂಧಿಸಿದ್ದಾರೆ. ಮಾತ್ರವಲ್ಲ ಸಮವಸ್ತ್ರ ಧರಿಸಿದ್ದ ಕಾರ್ಮಿಕರ 47 ದ್ವಿಚಕ್ರವಾಹನಗಳನ್ನು ಹಾಗೂ 125 ಕಾರ್ಮಿಕರ ಗುರುತಿನ ಪತ್ರವನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ಕಾರ್ಮಿಕರ ಮುಂಖಂಡರು ಹಾಗೂ ಕಾರ್ಮಿಕರ ಮೇಲೆ ಮೊಕದ್ದಮೆಗಳನ್ನು ಹೂಡಲಾಗಿದೆ.

ಅಲ್ಲಿ ಸ್ಥಳದಲ್ಲಿದ್ದ ನೂರಾರು ಕಾರ್ಮಿಕರನ್ನು ಮತ್ತು ಗಾಡಿ ಮತ್ತಿತರೆ ವಾಹನಗಳಲ್ಲಿ ಹೋಗುತ್ತಿದ್ದ ನೂರಾರು ಜನರನ್ನು ಬಂಧಿಸಿ ತಮ್ಮ ಪೊಲೀಸ್ ವರ್ತನೆಯನ್ನು ತೋರಿಸಿದ್ದಾರೆ. ಸರಕಾರವೇ ಮುಷ್ಕರ ನಿಷೇಧಿಸಿದ್ದರಿಂದ ಆಡುಗೋಡಿ ಕಾರ್ಖಾನೆ ಮುಂಭಾಗದಲ್ಲಿ ಹಾಕಲಾಗಿದ್ದ ಮುಷ್ಕರದ ಟೆಂಟನ್ನು ಪೊಲೀಸರು ಕಿತ್ತು ಹಾಕಿ ಅಲ್ಲಿ ಕಾರ್ಮಿಕರ ಪ್ರತಿಭಟನೆಗೂ ಅಡ್ಡಿಪಡಿಸಿದ್ದಾರೆ. ಕಾರ್ಮಿಕ ನಾಯಕರನ್ನು ಬಂಧಿಸಿ ಸೆಕ್ಷನ್ 143 ಮತ್ತಿತರ ಕಲಂಗಳನ್ನು ಹಾಕಲಾಗಿದೆ. ಮನವಿ ಕೊಡಲು ಕೂಡಾ ಒಪ್ಪಿಗೆ ಪಡೆದೇ ಹೋಗಬೇಕೆನ್ನುವ ಸರ್ಕಾರದ ಕ್ರಮ ಖಂಡನೀಯವಾಗಿದೆ.

ಈ ಎಲ್ಲ ಹಿನ್ನೆಲೆಯಲ್ಲಿ ಬೇಡಿಕೆ ಈಡೇರುವವರೆಗೆ, ಮಾಲೀಕವರ್ಗ ದಬ್ಬಾಳಿಕೆ ನಿಲ್ಲಿಸುವವರೆಗೆ ಕೆಲಸಕ್ಕೆ ಹೋಗದಿರಲು ಕಾರ್ಖಾನೆಯ 3060 ಕಾರ್ಮಿಕರು ತೀರ್ಮಾನಿಸಿದ್ದಾರೆ.

ಬಂಧಿತರ ಮೇಲೆ ಹಾಕಿರುವ ಮೊಕದ್ದಮೆಗಳನ್ನು ಕೂಡಲೇ ವಾಪಸ್ ಪಡೆಯಬೇಕು ಮತ್ತು ಸರ್ಕಾರ ಕೈಗಾರಿಕಾ ವಿವಾದ ಕಾಯ್ದೆ 1947 ಸೆಕ್ಷನ್ 10(ಬಿ) ಅಡಿಯಲ್ಲಿ ಕಾರ್ಮಿಕರಿಗೆ ಪರಿಹಾರ ಘೋಷಿಸಬೇಕು ಮತ್ತು ಕಾರ್ಮಿಕ ಸಂಘದೊಂದಿಗೆ ಮುರಿದು ಬಿದ್ದಿರುವ ವೇತನ ಒಪ್ಪಂದ ಮಾತುಕತೆಯನ್ನು ಮುಂದುವರೆಸಲು ಆಡಳಿತ ಮಂಡಳಿಗೆ ತಾಕೀತು ಮಾಡಿ ಆದೇಶಿಸಬೇಕೆಂದು ಸಿಐಟಿಯು ರಾಜ್ಯ ಸಮಿತಿ ಆಗ್ರಹಿಸಿದೆ. ಮತ್ತು ಕಾರ್ಮಿಕ ನಾಯಕರ ಈ ಬಂಧನವನ್ನು ವಿರೋಧಿಸಿ ಮತ್ತು ಹೋರಾಟ ನಿರತ ಭಾಷ್ ಕಂಪನಿ ಕಾರ್ಮಿಕರ ಈ ಹೋರಾಟವನ್ನು ಬೆಂಬಲಿಸಿ ರಾಜ್ಯಾದ್ಯಂತ ಸೌಹಾರ್ದ ಪ್ರದರ್ಶನಗಳನ್ನು ನಡೆಸಬೇಕೆಂದು ಕಾರ್ಮಿಕ ವರ್ಗಕ್ಕೆ ಸಿಐಟಿಯು ಕರೆ ನೀಡಿದೆ. ಮೈಕೋ ಕಾರ್ಮಿಕರ ಹೋರಾಟವನ್ನು ರಾಜ್ಯದ ನಾನಾ ಕಾರ್ಮಿಕ ಹಾಗೂ ನೌಕರರ ಸಂಘಟನೆಗಳು ಬೆಂಬಲಿಸಿವೆ.

ಈ ಹೋರಾಟದ ನೇತೃತ್ವವನ್ನು ‘ಎಂಇಎ’ ಸಂಘದ ಅಧ್ಯಕ್ಷರಾದ ಪ್ರಸನ್ನಕುಮಾರ್. ಎಸ್, ಉಪಾಧ್ಯಕ್ಷರಾದ ರಾಘವೇಂದ್ರ ರಾವ್, ಆರ್. ಧನಂಜಯ, ಪ್ರಧಾನ ಕಾರ್ಯದರ್ಶಿ ಅಮರ್‌ಜೀತ್ ಕೆ ಭಾಟಿಯಾ, ಆರ್. ಪುಷ್ಪರಾಜ್, ಸಂಘಟನಾ ಕಾರ್ಯದರ್ಶಿ, ಸಹ ಕಾರ್ಯದರ್ಶಿ ರಾಜು.ಕೆ.ಕುಲ್ಕರ್ಣಿ, ಖಜಾಂಚಿ ಕುಗನ್.ಎಸ್ ವಹಿಸಿದ್ದಾರೆ.

**ಚರಿತ್ರಾರ್ಹ ಹೋರಾಟದ ನೆನಪುಗಳು**

ಮೈಕೋ ಕಾರ್ಮಿಕರಿಗೆ ಸರಕಾರದ ಮುಷ್ಕರ ನಿಷೇಧ ಹೊಸದಲ್ಲ. ಟೆಂಟ್ ಕಿತ್ತು ಹಾಕುವಂತಹ ಕ್ರಮಗಳಿಗೆ ಅವರು ಕುಗ್ಗುವವರಲ್ಲ. ಆಡಳಿತ ಮಂಡಳಿಯ ಮೊಂಡುತನಗಳಿಗೂ ಬಗ್ಗುವವರಲ್ಲ. ಮೈಕೋ ಕಾರ್ಮಿಕರಿಗೆ ಕರ್ನಾಟಕದ ಕಾರ್ಮಿಕ ಚಳುವಳಿಯಲ್ಲಿ ಒಂದು ಮೈಲಿಗಲ್ಲು ಎಂದು ಹೆಸರಾದ ಚರಿತ್ರಾರ್ಹ ಹೋರಾಟದ ಚರಿತ್ರೆ ಇದೆ. 80 ರ ದಶಕದಲ್ಲಿ ಕರ್ನಾಟಕ ಖ್ಯಾತ ಕಾರ್ಮಿಕ ಮುಖಂಡರಾದ ಕಾಂ. ಎಸ್. ಸೂರ್ಯನಾರಾಯಣ ರಾವ್ ಅವರ ನಾಯಕತ್ವದಲ್ಲಿ ನಡೆದ ಸುದೀರ್ಘ ಹೋರಾಟ ಕರ್ನಾಟಕದ ಕಾರ್ಮಿಕ ವರ್ಗದ ಮತ್ತು ದುಡಿಯುವ ಜನರ ಗಮನ ಸೆಳೆದು ಸ್ಫೂರ್ತಿ ತುಂಬಿತ್ತು. ಮತ್ತು ಯಶಸ್ವಿ ಬೆಂಗಳೂರು ಬಂದ್ ಮುಂತಾದ ಚಳುವಳಿಯಿಂದ ಮೈಕೋ ಹೋರಾಟ ಬೆಂಗಳೂರಿನ ಮನೆಮನೆಯ ಮಾತಾಗಿತ್ತು.

ಈಗ ಸುಮಾರು ಮೂರು ದಶಕಗಳು ದಾಟಿದ ನಂತರ ಮತ್ತೆ ಮೈಕೋ ಕಾರ್ಮಿಕರು ಅನ್ಯಾಯದ ವಿರುದ್ಧ ಬೀದಿಗೆ ಬಂದಿದ್ದಾರೆ.

ಪುಟ 12 ಕ್ಕೆ

## ವಿಚಾರ ಸಂಕಿರಣದ ಆಶಯ......

ಪುಟ 2 ರಿಂದ

ವಿಮರ್ಶೆ ಮಾಡಿಕೊಳ್ಳಬೇಕು.

ಸಮಾಜದಲ್ಲಿ ಬಹುಸಂಖ್ಯಾತರು ಸಜ್ಜನರು, ಮೌನವಾಗಿರುತ್ತಾರೆ. ಕೆಟ್ಟವರು ಕಡಿಮೆ ಸಂಖ್ಯೆಯಲ್ಲಿರುತ್ತಾರೆ, ಆದರೆ ಅವರು ಕೂಗುಮಾರಿಗಳಾಗಿರುತ್ತಾರೆ ಎಂದೂ ಸಜ್ಜನರೂ ಗಟ್ಟಿಯಾಗಿ ಮಾತನಾಡಬೇಕು ಎಂದೂ ಮಟ್ಟು ಪ್ರತಿಪಾದಿಸಿದರು.

ಮೈಸೂರು ವಿ.ವಿ. ರಾಜ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಡಾ. ಮುಜಾಫರ್ ಅಸ್ಸಾದಿಯವರು ಮಾತನಾಡಿ ಗಾಂಧಿಯವರ 'ಹಿಂದ್ ಸ್ವರಾಜ್' ಕೃತಿ ಮಾರ್ಕ್ಸ್ ಅವರ 'ಕ್ಯಾಪಿಟಲ್' ಸಮಕಾಲೀನ ಸಂದರ್ಭದಲ್ಲಿ ಅನುಸಂಧಾನ ಮಾಡಬಹುದು.

19 ನೇ ಶತಮಾನದ ಕೈಗಾರಿಕಾ ಕ್ರಾಂತಿ, ಬಂಡವಾಳಶಾಹಿಯ ಬೆಳವಣಿಗೆಯನ್ನು ವಿಶ್ಲೇಷಿಸಿದ ಮಾರ್ಕ್ಸ್ ಒಬ್ಬ ಅದ್ಭುತ ಚಿಂತಕ. ಮಾರ್ಕ್ಸ್‌ವಾದ, ಗಾಂಧಿವಾದ ಬೇರೆ ಬೇರೆ ರೂಪಗಳಲ್ಲಿ ಈಗಲೂ ಜೀವಂತವಾಗಿವೆ. ನಮ್ಮಲ್ಲಿ ಬಹುರೂಪಿ ಗಾಂಧಿ, ಬಹುರೂಪಿ ಮಾರ್ಕ್ಸ್ ಇದ್ದಾರೆ. ನಮಗೆ ಗೊತ್ತಾಗುವುದಿಲ್ಲ. ಇವನ್ನು ವ್ಯಕ್ತಿಗಳಾಗಿ ನೋಡಬಾರದು. ಜಗತ್ತನ್ನು ಬದಲಿಸುವ ಶಕ್ತಿಗಳಾಗಿ.. ತತ್ವಗಳಾಗಿ...ನೋಡಬೇಕು ಎಂದರು. ಗಾಂಧಿ ಮಾರ್ಕ್ಸ್ ಬಗೆಗೆ ಹೆಚ್ಚು ಹೇಳಿಲ್ಲ. ಅವರಿಗೆ ಮಾರ್ಕ್ಸ್‌ವಾದದ ಬಗೆಗೆ ಒಂದು ಬಗೆಯ ಅಸಹನೆ ಇತ್ತು ಅನ್ನುತ್ತಾರೆ. ಅಂಬೇಡ್ಕರ್ ಹೆಚ್ಚು ಬರೆದಿದ್ದಾರೆ. ಮತ್ತು ವ್ಯವಸ್ಥಿತವಾಗಿ ಬರೆದಿದ್ದಾರೆ. ಗಾಂಧಿ ನಾನೊಬ್ಬ ಸೋಷಿಯಲಿಸ್ಟ್, ಕಾಂಗ್ರೆಸ್ ಸೋಷಿಯಲಿಸ್ಟ್ ಎಂದು ಹೇಳಿಕೊಳ್ಳುತ್ತಿದ್ದರು.

ರೈತರು ಗೇಣಿ ಪಾವತಿಸಬೇಕು. ಇಲ್ಲವಾದಲ್ಲಿ 'ಸ್ವರಾಜ್' ಬರುವುದಿಲ್ಲ. ಭೂಮಿ ಸರ್ಕಾರದ್ದು ಎಂದು ಪ್ರತಿಪಾದಿಸಿದರು. ಲೆನಿನ್ ಅವರ ಸಂಸದೀಯ ಪ್ರಜಾಪ್ರಭುತ್ವದ ಮೂಲಕ ಬದಲಾವಣೆ ತರುವ ನೀತಿಯ ಬಗೆಗೆ ಬಹುಶಃ ಗಾಂಧಿ ಓದಿಲ್ಲ. ಆ ಕಾಲದಲ್ಲಿ ಇಂತಹ ಸಾಹಿತ್ಯ ಸಿಗುವುದು ಅಷ್ಟು ಸುಲಭವಾಗಿರಲಿಲ್ಲ. ಓದದೇ ಇರಲು ಅದೂ ಸಹ ಒಂದು ಕಾರಣವಾಗಿದ್ದಿರಬಹುದು. ಆದ್ದರಿಂದ ಗಾಂಧಿ "ಮಾರ್ಕ್ಸ್‌ವಾದ ಹಿಂಸೆಯ ಮೂಲಕ ಬದಲಾವಣೆ ತರುತ್ತದೆ. ನಾನು ಅಹಿಂಸೆ, ಅಧ್ಯಾತ್ಮವಾದ ಆಧಾರಿತ ಸಮಾಜವಾದ ಬಯಸುತ್ತೇನೆ." ಎನ್ನುತ್ತಿದ್ದರು ಎಂದು ಪ್ರೊ. ಮುಜಾಫರ್ ಅಸ್ಸಾದಿ ಹೇಳಿದರು.

ಗಾಂಧೀಜಿ ವರ್ಗ ಹೋರಾಟವನ್ನು ಒಪ್ಪಲಿಲ್ಲ. ಅವರು ದೊಡ್ಡ ರೈತರ ಹಿತಾಸಕ್ತಿ ಎತ್ತಿಹಿಡಿದಿದ್ದಾರೆ. ಕಾರ್ಖಾನೆಯ ಮಾಲೀಕರು ಕಾರ್ಮಿಕರ ತಂದೆಯಂತೆ ಎಂಬ 'ಟ್ರಸ್ಟಿಶಿಪ್' ತತ್ವವನ್ನು ಪ್ರತಿಪಾದಿಸಿದ್ದಾರೆ.' ಎಂದೂ ಮುಜಾಫರ್ ಅಸ್ಸಾದಿ ಹೇಳಿದರು.

ದಲಿತ ಸಂಘರ್ಷ ಸಮಿತಿ(ಅಂಬೇಡ್ಕರ್‌ವಾದ)ದ ರಾಜ್ಯ ಸಂಚಾಲಕರಾದ ಮಾವಳ್ಳಿ ಶಂಕರ್ ಅವರು ಮಾತನಾಡಿ "ಅಂಬೇಡ್ಕರ್ ಅವರು ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿರಲಿಲ್ಲ ಎಂದು ಹಲವು ಚರಿತ್ರಕಾರರು ಚಿತ್ರಿಸಿದ್ದಾರೆ. ಚರಿತ್ರಕಾರರಿಗೆ ಅಂಬೇಡ್ಕರ್ ಖಳನಾಯಕರಾಗಿ ಕಂಡು ಬಂದಿದ್ದಾರೆ. ಯಾಕೆ? ಎಂದು ಪಶ್ನಿಸಿದರು. ಮುಂದುವರಿದು ಮಾತನಾಡಿದ ಮಾವಳ್ಳಿ ಶಂಕರ್ ಅವರು ಅಂಬೇಡ್ಕರ್ ಅವರನ್ನು ಅವಾಹಿಸಿಕೊಳ್ಳುವಾಗ ಹಲವರು ಬಹಳ ಕಷ್ಟಕ್ಕೆ ಸಿಲುಕುತ್ತಾರೆ ಎಂದು ಅಭಿಪ್ರಾಯ ಪಟ್ಟರು.

ದೇಶಕ್ಕೆ ಸ್ವಾತಂತ್ರ್ಯವನ್ನು ಕೊಡುವುದಾದರೆ ಯಾರಿಗೆ ಕೊಡುತ್ತೀರಿ.. ಬಂಡವಾಳಗಾರರು, ಭೂಮಾಲಿಕರು, ಮೇಲ್ಜಾತಿಯವರಿಗೆ ಕೊಡುವುದಾದರೆ ಸ್ವಾತಂತ್ರ್ಯಕ್ಕೆ ಅರ್ಥವೇನು ಎಂದು ಅಂಬೇಡ್ಕರ್ ಅವರು ಪ್ರಶ್ನಿಸಿದ್ದಾರೆ.

ತುಳಿಯುವ ಕಾಲಿಗೆ ಬಲಕೊಡುವುದು ಬೇಡ ಎಂಬ ನಿಲುವು ತಳೆದಿದ್ದಾರೆ. ಮಾರ್ಕ್ಸ್ ಹೇಳುವ ಶ್ರಮಜೀವಿ ವರ್ಗವೇ ದಲಿತ ವರ್ಗ. ಅಂಬೇಡ್ಕರ್ ಅವರ ಹಿಂದೆಯೂ ಹೋರಾಟಗಳಾಗಿವೆ. ಆದರೆ ಅಂಬೇಡ್ಕರ್ ಅವರು ಈ ಪ್ರಶ್ನೆಯನ್ನು ಕೇಂದ್ರ ಸ್ಥಾನಕ್ಕೆ ತಂದರು. ಮುಂಬೈ ಗಿರಣಿ ಮುಷ್ಕರದಲ್ಲಿ ಮಾರ್ಕ್ಸ್‌ವಾದಿಗಳೊಂದಿಗೆ ಸೇರಿ ಹೋರಾಟ ನಡೆಸಿದರು. ನೂಲುವ ಸ್ಥಳದಲ್ಲಿ ತಳ ಸಮುದಾಯದವರೊಂದಿಗೆ ಸೇರಿ ಚಳುವಳಿ ನಡೆಸಿದರು.

'ಜಾತಿ ಭಾರತದಲ್ಲಿ ಶ್ರಮ ವಿಭಜನೆ ಮಾಡಿದೆ, ಮಾತ್ರವಲ್ಲ. ಶ್ರಮಿಕರನ್ನೂ ವಿಭಜಿಸುತ್ತಿದೆ.' ಎಂದ ಅಂಬೇಡ್ಕರ್ ಅವರು ಬೃಹತ್ ಕೈಗಾರಿಕೆಗಳಿಗೆ, ಆಧುನಿಕ ಕೈಗಾರಿಕೆಗಳಿಗೆ ಒತ್ತು ಕೊಟ್ಟರು. ಗುಡಿಕೈಗಾರಿಕೆಗಳು ಜಾತಿಗೊಂದಿಗೆ ಬೆಸೆದುಕೊಂಡಿವೆ ಎಂದು ಪ್ರತಿಪಾದಿಸಿದರು.

'ಅನಿಹಿಲೇಷನ್ ಆಫ್ ಕ್ಯಾಸ್ಟ್' ಕೃತಿಯಲ್ಲಿ ಅಂಬೇಡ್ಕರರ ಸ್ಪಷ್ಟ ವಿಚಾರಗಳನ್ನು ಕಾಣಬಹುದು. ಅಂಬೇಡ್ಕರ್ ಅವರು ಕೊನೆ ಹಂತದಲ್ಲಿ ಬುದ್ಧ ಮತ್ತು ಮಾರ್ಕ್ಸ್ ನಡುವಿನ ಶಕ್ತಿಯನ್ನು ಕಂಡುಕೊಳ್ಳುತ್ತಾರೆ. ದುಃಖ ಮತ್ತು ಶೋಷಣೆಗಳ ನಡುವಿನ ಸಂಬಂಧ ಅರ್ಥ ಮಾಡಿಕೊಳ್ಳುತ್ತಾರೆ ಎಂದು ಮಾವಳ್ಳಿ ಶಂಕರ್ ಅವರು ಹೇಳಿದರು.

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಜಿ.ಎನ್. ನಾಗರಾಜ್ ಅವರು

'ಯಾವ ಸಿದ್ಧಾಂತವೂ ಬೇಡ ಎಂಬ ವಾದ ಅನೇಕ ರಂಗಗಳಲ್ಲಿ ತಲೆ ಎತ್ತಿದೆ. ಯಾವುದಾದರೂ ಸಿದ್ಧಾಂತವನ್ನು ಅಧ್ಯಯನ ಮಾಡಿದರೆ, ಒಪ್ಪಿದರೆ ಅದೇ ಅಪರಾಧ.. ಎನ್ನುವ ವಾತಾವರಣ ನಿರ್ಮಿಸಲಾಗುತ್ತಿದೆ. ಆಧುನಿಕೋತ್ತರವಾದವು ನಾವು ನಮ್ಮ ಬದುಕನ್ನು ನೋಡಿಕೊಂಡರೆ ಸಾಕು ಎಂದು ಪ್ರತಿಪಾದಿಸುತ್ತಿದೆ. ಪ್ರಾದೇಶಿಕವಾದ ವಿಷಯಗಳು ಸಾಕು ಎಂಬ ಸ್ಥಿತಿ ಇದೆ. ಇದರ ವಿರುದ್ಧ ಹೋರಾಡಬೇಕಿದೆ.' ಎಂದು ಪ್ರತಿಪಾದಿಸಿದ ಜಿ.ಎನ್. ನಾಗರಾಜ್ ಅಂಬೇಡ್ಕರ್ ಅವರು ಅಮೆರಿಕದಲ್ಲಿ ಮತ್ತು ಇಂಗ್ಲೆಂಡ್‌ನಲ್ಲಿ ಹಾಗೂ ಲೋಹಿಯಾರವರು ಜರ್ಮನಿಯಲ್ಲಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಾಗಿ ಓದುವಾಗ ಅಲ್ಲಿನ ವಾತಾವಾರಣದಲ್ಲಿ ಮತ್ತು ವಿಶ್ವವಿದ್ಯಾಲಯದ ಪರಿಸರದಲ್ಲಿ ಹಾಗೂ ಪ್ರಾಧ್ಯಾಪಕರ ನಡುವೆ ಪ್ರಬಲವಾಗಿದ್ದ ತೀವ್ರ ಕಮ್ಯೂನಿಸ್ಟ್ ವಿರೋಧಿ ನಿಲುವುಗಳು ಮತ್ತು ಅವುಗಳು ಬೀರಿರಬಹುದಾದ ಪರಿಣಾಮಗಳ ಕುರಿತು ವಿಶ್ಲೇಷಿಸಿದರು.

ಅಮೆರಿಕ ವಿಶ್ವವಿದ್ಯಾಲಯದಲ್ಲಿ ಅಂಬೇಡ್ಕರ್ ಅವರಿಗೆ ಬೋಧಿಸಿದ ಜಾನ್ ಡೀವಿ ಮಾರ್ಕ್ಸ್‌ವಾದಕ್ಕೆ ವಿರುದ್ಧವಾಗಿ ಕಮ್ಯೂನಿಸ್ಟ್ ವಿರೋಧಿಯಾದ 'ಫ್ರಾಗ್ಮಟಿಸಂ' ಎಂಬ ವಾದವನ್ನು ಹುಟ್ಟು ಹಾಕಿದವರು. ಇಂಗ್ಲೆಂಡ್‌ನ ವಿಶ್ವವಿದ್ಯಾಲಯದಲ್ಲಿ ಬೋಧಿಸಿದವರು, ಕಮ್ಯೂನಿಸ್ಟ್ ವಿರೋಧಿಯಾದ 'ಯುಟಿಲಿಟೇರಿಯನಿಸಂ' ಸಿದ್ಧಾಂತವನ್ನು ಪ್ರತಿಪಾದಿಸುತ್ತಿದ್ದವರು ಎಂದು ಜಿ.ಎನ್. ವಿವರಿಸಿದರು.

ಲೋಹಿಯಾರವರಿಗೆ ಮಾರ್ಕ್ಸ್‌ವಾದವೇ ಪ್ರಮುಖ ಎದುರಾಳಿಯಾಗಿ ಕಂಡು ಮಾರ್ಕ್ಸ್‌ವಾದವನ್ನು ಅಧ್ಯಯನ ಮಾಡಿ, ಅದಕ್ಕೆ ಪ್ರತಿಕ್ರಿಯೆಯಾಗಿ ಸಿದ್ಧಾಂತವೊಂದನ್ನು ರೂಪಿಸಿಕೊಂಡರು ಎಂದ ಜಿ.ಎನ್. ನಾಗರಾಜ್ ಅವರು ಅಂಬೇಡ್ಕರ್ ಅವರ ಬಗೆಗೆ ದೇವನೂರು ಮಹಾದೇವ ಹೇಳುವುದನ್ನು ಗಮನಿಸಬೇಕು, 'ಅಂಬೇಡ್ಕರ್ ಅವರು ಕೊನೆಯ ಹಂತದಲ್ಲಿ ಮಾರ್ಕ್ಸ್‌ವಾದ – ಬುದ್ದಿಸಂ ಎರಡನ್ನೂ ಇಟ್ಟುಕೊಂಡು ತೂಗಿ ನೋಡುತ್ತಿದ್ದರು. ಅಂತಿಮವಾಗಿ ಒಪ್ಪಿಕೊಂಡದ್ದು 'ಬುದ್ದಿಸಂ' ಅನ್ನಾದರೂ ಕೂಡ 'ವಿನ್ನರ್ ಬುದ್ದಿಸಂ. ರನ್ನರ್ ಅಪ್ ಮಾರ್ಕ್ಸ್‌ವಾದ.' (ಮೊದಲ ಸ್ಥಾನ ಬುದ್ಧನಿಗಾದರೆ, ಎರಡನೇ ಸ್ಥಾನ ಮಾರ್ಕ್ಸ್‌ವಾದಕ್ಕೆ ಎಂದರ್ಥ.) ಎಂದು ದೇವನೂರು ಹೇಳಿದ್ದಾರೆ ಎಂದು ಜಿ.ಎನ್. ನಾಗರಾಜ್ ಅವರು ಸಭಿಕರ ಗಮನಕ್ಕೆ ತಂದರು.

ದೇಶದ ಆರ್ಥಿಕತೆಯಲ್ಲಿ ಸಾಮಾಜಿಕ ವಲಯ ಪ್ರಧಾನವಾಗಿರಬೇಕು, ವಿಮೆ, ಬ್ಯಾಂಕ್, ಮೂಲಭೂತ ಕೈಗಾರಿಕೆಗಳು ಮತ್ತು ಭೂಮಿ ರಾಷ್ಟ್ರೀಕರಣವಾಗಬೇಕು ಎಂಬ ಅಂಬೇಡ್ಕರ್ ಅವರ ವಿಚಾರಗಳನ್ನು ಗಮನಿಸಬೇಕು. ಈ ನಿಲುವುಗಳ ಹಿಂದಿನ ಆಶಯದಂತೆ ಇಂದು ಜನವಿರೋಧಿಯಾದ ಜಾಗತೀಕರಣ–ಉದಾರೀಕರಣ ನೀತಿಗಳ ವಿರುದ್ಧ ಹಾಗೂ ಭೂಮಿಯ ಪ್ರಶ್ನೆಯ ಮೇಲೆ ಐಕ್ಯ ಹೋರಾಟ ರೂಪಿಸುವುದು ಸಾಧ್ಯವಾಗಬೇಕು ಎಂದೂ ನಾಗರಾಜ್ ಪ್ರತಿಪಾದಿಸಿದರು.

### ಮಾರ್ಕ್ಸ್‌ವಾದಿ ತತ್ವಕ್ಕೆ ಅಂಬೇಡ್ಕರರ ಸಹಮತ

ಅಂಬೇಡ್ಕರ್ ಅವರು ತಮ್ಮ 'ಮಾರ್ಕ್ಸನೋ ಬುದ್ಧನೋ' ಎಂಬ ಕಿರು ಹೊತ್ತಿಗೆಯಲ್ಲಿ ಕಮ್ಯೂನಿಸ್ಟ್ ತತ್ವವನ್ನು ಹತ್ತು ಅಂಶಗಳಲ್ಲಿ ಸಂಗ್ರಹಿಸಿದ್ದಾರೆ. ಕಮ್ಯೂನಿಸ್ಟರಿಗೆ ಈ ಹತ್ತು ಅಂಶಗಳ ವಿಷಯದಲ್ಲಿ ಸಂಪೂರ್ಣ ಸಹಮತ ಇದೆ ಎಂದು ಜಿ.ಎನ್. ಹೇಳಿದರು.

### ಅಂಬೇಡ್ಕರ್ 'ಬೆಳಕಿನ ಕಿಡಿ' ಎಂದ ನಾಲ್ಕು ಅಂಶಗಳು

1. ಜಗತ್ತಿನ ಮೂಲವನ್ನು ಹುಡುಕುತ್ತಾ ಕಾಲಕಳೆಯುವ ಬದಲು ಜಗತ್ತನ್ನು ಬದಲಿಸುವುದೇ ಮುಖ್ಯ.
2. ವರ್ಗ ಸಂಘರ್ಷದಿಂದ ಸಮಾಜ ಬದಲಾಗುತ್ತಾ ಬಂದಿದೆ.
3. ಸೋತವರು ಶೋಷಿತ ವರ್ಗವಾಗುತ್ತಾರೆ.
4. ಖಾಸಗಿ ಆಸ್ತಿಯನ್ನು ನಿಷೇಧಿಸಬೇಕು.

ಅಂಬೇಡ್ಕರ್ ಅವರು ಮಾರ್ಕ್ಸ್‌ವಾದದಲ್ಲಿನ ಈ ನಾಲ್ಕು ಪ್ರಮುಖ ಅಂಶಗಳಲ್ಲಿ 'ಬೆಳಕಿನ ಕಿಡಿ' ಇದೆ ಎಂದು ಹೇಳಿದ್ದಾರೆಂದು ಜಿ.ಎನ್. ಅವರು ಹೇಳಿದರು.

ಲೋಹಿಯಾರವರ 'ಸಮಾಜವಾದಿ ಪಕ್ಷ'ದ ಜನತಾ ಕಾರ್ಯಕ್ರಮದಲ್ಲಿನ 13 ಅಂಶಗಳಲ್ಲಿ 10 ಅಂಶಗಳ ಬಗೆಗೆ ಕಮ್ಯೂನಿಸ್ಟರಿಗೆ ಸಂಪೂರ್ಣ ಸಹಮತ ಇದೆ. ಉಳಿದ ವಿಷಯಗಳ ಬಗೆಗೆ ಸಹ ಚರ್ಚಿಸಬಹುದಾಗಿದೆ ಎಂದರು.

'ಭಾರತದ ಸಮಾಜಕ್ಕೆ ಮಾರ್ಕ್ಸ್‌ವಾದ ಅನ್ವಯಿಸುವುದಿಲ್ಲ ಎಂಬ ವಾದಗಳಿವೆ. ಭಾರತದ ಕಮ್ಯೂನಿಸ್ಟ್ ಚಳುವಳಿಯಲ್ಲಿ ರಷ್ಯಾದ ದಾರಿಯೋ, ಚೀನಾದ ದಾರಿಯೋ ಎಂಬೆಲ್ಲಾ ಹುಡುಕಾಟಗಳು ನಡೆದು ಆಮೇಲೆ ಭಾರತಕ್ಕೆ ಭಾರತದ್ದೇ ಆದ ಕ್ರಾಂತಿಯ ಪಥ ರೂಪಿಸಿಕೊಳ್ಳಬೇಕೆಂದು ಕಂಡುಕೊಂಡು ಅದಕ್ಕಾಗಿ ಶ್ರಮಿಸಲಾಗುತ್ತಿದೆ ಎಂದು ನಾಗರಾಜ್ ಅವರು ಪ್ರತಿಪಾದಿಸಿದರು.

ಮಾರ್ಕ್ಸ್‌ವಾದವನ್ನು ನಿರಂತರವಾಗಿ ಬೆಳೆಸಲಾಗುತ್ತಿದೆ. ನೂರಾರು ಜನರ ಪರಿಶ್ರಮದಿಂದ ಇದನ್ನು ಬೆಳೆಸಲಾಗಿದೆ. ಲೋಹಿಯಾವಾದ, ಗಾಂಧೀವಾದ, ಅಂಬೇಡ್ಕರ್ ಅವರ ಸಿದ್ಧಾಂತವನ್ನು ಕಳೆದ 50–60 ವರ್ಷಗಳಲ್ಲಿ ಸಮಗ್ರವಾಗಿ ಅಧ್ಯಯನ ಮಾಡಲಾಗಿದೆಯಾ? ಆಧುನಿಕ ಸಂದರ್ಭದ ಅಗತ್ಯಕ್ಕೆ ತಕ್ಕಂತೆ ಅನ್ವಯಿಸಲಾಗಿದೆಯಾ? ಬೆಳೆಸಲಾಗುತ್ತಿದೆಯಾ? ಎಂದು ವಿಮರ್ಶಿಸಿಕೊಳ್ಳಬೇಕು ಎಂದ ಜಿ.ಎನ್. ನಾಗರಾಜ್ ಅಂಬೇಡ್ಕರ್ ಯಾರಿಗೆ ಸ್ವಾತಂತ್ರ್ಯ ಸಿಗಬೇಕು ಎಂದಿದ್ದರು ಎಂಬುದನ್ನು ಗಮನಿಸಬೇಕು ಎಂದು ಕೋರಿದರು.

ಪ್ರಗತಿಪರ ಚಿಂತಕರಾದ ಡಾ. ಜಿ. ರಾಮಕೃಷ್ಣ ಅವರು ವಿಚಾರ ಸಂಕಿರಣದ ಅಧ್ಯಕ್ಷತೆ ವಹಿಸಿದ್ದರು. ಕೊನೆಯಲ್ಲಿ ಅಧ್ಯಕ್ಷೀಯ ನುಡಿಗಳನ್ನಾಡಿದ ಅವರು 1947 ಮಾರ್ಚ್ 17 ರಂದು ಅಂಬೇಡ್ಕರರು ಸ್ಥಾಪಿಸಿದ ಷೆಡ್ಯೂಲ್ ಕ್ಯಾಸ್ಟ್ ಪಾರ್ಟಿಯು ಸ್ವತಂತ್ರ ಭಾರತದಲ್ಲಿ ಶಿಕ್ಷಣ, ಕೃಷಿ ಸಾರ್ವಜನಿಕ ರಂಗದಲ್ಲಿರಬೇಕು. ಮುಖ್ಯ ಕೈಗಾರಿಕೆಗಳು, ವಿಮಾ ಸಂಸ್ಥೆಗಳು ಸರ್ಕಾರದ ಕೈಲಿರಬೇಕು ಎಂದು ಪ್ರತಿಪಾದಿಸಿತ್ತು ಎಂದರು.

ಮಹಾರಾಷ್ಟ್ರದಲ್ಲಿ ಅಂಬೇಡ್ಕರರೊಂದಿಗೆ ಹೋರಾಟಗಳಲ್ಲಿ ಸರ್ ದೇಸಾಯಿ, ಬಿ.ಟಿ. ರಣದಿವೆ ಮುಂತಾದ ಕಮ್ಯೂನಿಸ್ಟ್ ಮುಖಂಡರು ಭಾಗವಹಿಸುತ್ತಿದ್ದರು ಎಂದ ಜಿ.ಆರ್. ಬಲಪಂಥೀಯ ಶಕ್ತಿಗಳು ಮೇಲುಗೈ ಸಾಧಿಸಿರುವ ಇಂದಿನ ಸಂದರ್ಭದಲ್ಲಿ ಪ್ರತಿಷ್ಠೆಯನ್ನು ಬಿಟ್ಟು ಸಾಮಾನ್ಯವಾದ ಕಾರ್ಯಕ್ರಮ ರೂಪಿಸಿ ಒಗ್ಗಟ್ಟಿನ ಹೋರಾಟ ನಡೆಸಬೇಕು. ಇಲ್ಲವಾದಲ್ಲಿ ಅದು ಎಲ್ಲರಿಗೂ ಅಪಾಯ ಎಂದು ಎಚ್ಚರಿಸಿದರು.

ಸೈದ್ಧಾಂತಿಕ ಚರ್ಚೆಗಳು ಒಂದೆಡೆ ನಡೆಯುತ್ತಿರಲಿ. ಆದರೆ ಅದಕ್ಕಿಂತ ಮುಖ್ಯವಾಗಿ ಕಾರ್ಯಾಚರಣೆಯಲ್ಲಿ ಐಕ್ಯತೆ ಮೂಡಿಬರಬೇಕು. ಅದು ತುಂಬಾ ಮುಖ್ಯ ಎಂದರು. ವಿಚಾರ ಸಂಕಿರಣದ ಮೊದಲಿಗೆ ಕೆ. ಮಹಾಂತೇಶ್ 'ಎಲ್ಲರೂ ಒಂದಾಗೋಣ' ಹಾಡು ಹಾಡಿದ್ದು ವಿಚಾರ ಸಂಕಿರಣದ ಒಟ್ಟು ಸಂದೇಶಕ್ಕೆ ಪೂರಕ ಎನ್ನುವಂತಿತ್ತು. ಆರಂಭದಲ್ಲಿ ಸಿಪಿಐ(ಎಂ) ಬೆಂಗಳೂರು ದಕ್ಷಿಣ ಜಿಲ್ಲಾ ಕಾರ್ಯದರ್ಶಿ ಕೆ. ಪ್ರಕಾಶ್ ಪ್ರಸ್ತಾವಿಕ ಮಾತುಗಳನ್ನಾಡಿದರು. ■

## ಆಡುಗೋಡಿ 'ಭಾಷ್' ಕಾರ್ಮಿಕರ....

ಪುಟ 11 ರಿಂದ

### ಬೃಹತ್ ಪ್ರತಿಭಟನಾ ಮೆರವಣಿಗೆ

ಸೆಪ್ಟೆಂಬರ್ 16 ರಿಂದ ಕಾರ್ಖಾನೆಯ ಮುಂದೆ ಚಳುವಳಿ ಕುಳಿತಿದ್ದ ಕಾರ್ಮಿಕರು ಸೆಪ್ಟೆಂಬರ್ 29, 2014 ರಂದು ಬೆಂಗಳೂರಿನ ಹೃದಯ ಭಾಗಕ್ಕೆ ಬಂದಿದ್ದರು. ಅಂದು ಟೌನ್ ಹಾಲ್ ಮುಂದೆ ನೆರೆದ ಸಾವಿರಾರು ಜನ ಮೈಕೋ ಕಾರ್ಮಿಕರನ್ನು ನೋಡಿದ ಬೆಂಗಳೂರಿನ ಹಿರಿಯ ನಾಗರೀಕರಿಗೆ, ಹಳಬರಿಗೆ 80 ರ ದಶಕದ ಹೋರಾಟ ನೆನಪಾಗಿರಬಹುದು. ಅಂದು ನಡೆದ ಸಮರಧೀರ ಚಳುವಳಿ ಮೈಕೋದಂತಹ ಒಂದು ಬಹುರಾಷ್ಟ್ರೀಯ ಕಂಪನಿಯಲ್ಲಿ ಕಾರ್ಮಿಕರ ಸಂಘಕ್ಕೆ ಮಾನ್ಯತೆಯನ್ನು, ವೇತನ ಹೆಚ್ಚಳದಂತಹ ದೊಡ್ಡ ಪರಿಹಾರವನ್ನು ಸಾಧಿಸಿಕೊಟ್ಟಿತ್ತು.

ಚಾರಿತ್ರಿಕ ಹೋರಾಟದ ಸ್ಪೂರ್ತಿನ್ನು ಮೆಲುಕು ಹಾಕುತ್ತಾ ಸೆಪ್ಟೆಂಬರ್ 29 ರಂದು ಬೆಳಿಗ್ಗೆ ತಮ್ಮ ಬೇಡಿಕೆಗಳಿಗಾಗಿ ಮೈಕೋ ಕಾರ್ಮಿಕರು ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿದರು. ಕಾರ್ಮಿಕರನ್ನು ಅಂದು ಪೋಲಿಸರು ಬನ್ನಪ್ಪ ಪಾರ್ಕಿನ ಬಳಿಯೇ ತಡೆದರು. ಮೈಕೋ ಕಾರ್ಮಿಕರ ಸಂಘಟನೆಯ ಅಧ್ಯಕ್ಷರಾದ ಎಸ್. ಪ್ರಸನ್ನ ಕುಮಾರ್ ಅವರು ಈ ಸಂದರ್ಭದಲ್ಲಿ ಮಾತನಾಡಿ ಸರಕಾರ ಈ ವಿಷಯದಲ್ಲಿ ಮಧ್ಯ ಪ್ರವೇಶಿಸಿ ಸಮಸ್ಯೆಯನ್ನು ಶೀಘ್ರ ಬಗೆಹರಿಸಬೇಕು ಎಂದು ಆಗ್ರಹಿಸಿದರು.

### ಮುಂದುವರಿದ ಹೋರಾಟ

ಹೋರಾಟ ಆರಂಭಗೊಂಡು ತಿಂಗಳು ದಾಟಿದೆ. ಸರ್ಕಾರದ ಮುಷ್ಕರ ನಿಷೇಧ, ಆಡಳಿತ ಮಂಡಳಿಯ ಹಠಮಾರಿ ಧೋರಣೆ, ಕಾರ್ಮಿಕ ವಿರೋಧಿ ಧೋರಣೆಗೆ ಮಣಿಯದಿರಲು ನಿರ್ಧರಿಸಿರುವ ಕಾರ್ಮಿಕರು ಹೋರಾಟವನ್ನು ಮುಂದುವರಿಸಿದ್ದಾರೆ. ಬೆವರು ಸುರಿಸಿ ಕೈ ಕಾಲುಗಳ ಕೀಲು–ಬೆನ್ನು ಮೂಳೆ ಸವೆಸಿಕೊಂಡು ದುಡಿಯುವ ಕಾರ್ಮಿಕರು ತಮ್ಮ ಅಗಾಧ ಪರಿಶ್ರಮದಿಂದ ಸೃಷ್ಟಿಯಾದ ಸಂಪತ್ತಿನಲ್ಲಿ ತಮ್ಮ ನ್ಯಾಯಬದ್ಧವಾದ ಪಾಲಿನ ಒಂದು ಭಾಗವನ್ನು ಮಾತ್ರ ಕೇಳುತ್ತಿದ್ದಾರೆ ಹೊರತು ಬೇರೇನನ್ನೂ ಅವರು ಕೇಳುತ್ತಿಲ್ಲ. ಆದ್ದರಿಂದ ಕಾರ್ಮಿಕರ ಹೋರಾಟಕ್ಕೆ ಎಲ್ಲ ನೈತಿಕ ಶಕ್ತಿ ಇದೆ. ಸಂಘಟನೆಯ ಶಕ್ತಿಯೂ ಇದೆ. ಹೋರಾಟ 33 ನೇ ದಿನಕ್ಕೆ ಕಾಲಿಟ್ಟಿದೆ. ನ್ಯಾಯಕ್ಕಾಗಿ ನಡೆಯುವ ಹೋರಾಟ ಮುಂದುವರಿಯುತ್ತದೆ.

ಮೈಕೋ ಕಾರ್ಮಿಕರ ಹೋರಾಟಕ್ಕೆ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ರಾಜ್ಯ ಸಮಿತಿಯು ಬೆಂಬಲ ಘೋಷಿಸಿದೆ. ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರೂ, ಹಿರಿಯ ಕಾರ್ಮಿಕ ಮುಖಂಡರೂ ಆದ ಎಸ್. ಪ್ರಸನ್ನ ಕುಮಾರ್ ಅವರು ಹಾಗೂ ಕಾರ್ಮಿಕರನ್ನು ಮುಖ್ಯಮಂತ್ರಿಗಳ ಮಧ್ಯಪ್ರವೇಶಕ್ಕೆ ಒತ್ತಾಯಿಸಲು ಮುಖ್ಯಮಂತ್ರಿಗಳ ಮನೆಗೆ ತೆರಳುತ್ತಿದ್ದ ಸಂದರ್ಭದಲ್ಲಿ ಬಂಧಿಸಿ ಮೊಕದ್ದಮೆ ಹೂಡಿರುವ ಕ್ರಮವನ್ನು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ತೀವ್ರವಾಗಿ ಖಂಡಿಸಿದೆ. **–ಆರ್ಕೆ** ■

# ಪೇಟೆಂಟ್ ಮತ್ತು ಪರಮಾಣು ಸುರಕ್ಷಿತತೆ: ಭಾರತದ ಕಾನೂನುಗಳನ್ನು ಕುರಿತಂತೆ ಅಮೆರಿಕಾದ ವ್ಯಾಪಾರಿಗಳೊಂದಿಗೆ ಚೌಕಾಸಿ!

ಪ್ರಧಾನ ಮಂತ್ರಿಗಳ 'ಅತ್ಯಂತ ಯಶಸ್ವಿ ರಾಕ್‌ಸ್ಟಾರ್' ಅಮೆರಿಕ ಭೇಟಿಯ ಬೆನ್ನಲ್ಲೇ ಭಾರತದ ಪೇಟೆಂಟ್ ವ್ಯವಸ್ಥೆಯ 'ಪರಾಮರ್ಶೆ'ಯನ್ನು ಅಮೆರಿಕಾ ಆರಂಭಿಸಿದೆ ಎಂದು ಅಕ್ಟೋಬರ್ 15ರಂದು ಪಿಟಿಐ ವರದಿ ಮಾಡಿದೆ. ಭಾರತದ ಕಾನೂನನ್ನು ಬೇರೊಂದು ದೇಶ ಏಕೆ 'ಪರಾಮರ್ಶಿಸಬೇಕು' ಎಂಬ ಪ್ರಶ್ನೆ ಸಹಜವಾಗಿಯೇ ಏಳುತ್ತದೆ. ಅಮೆರಿಕಾದ ಮಟ್ಟಿಗೆ ಇದಕ್ಕೆ ಅವಕಾಶವನ್ನು ನಮ್ಮ ಪ್ರಧಾನಿಗಳ ಈ 'ರಾಕಸ್ಟಾರ್ ಯಶಸ್ಸಿನ' ಭೇಟಿಯ ಜಂಟಿ ಹೇಳಿಕೆಯೇ ನೀಡಿದೆ ಎಂದು ನಮ್ಮ ಮಾಧ್ಯಮಗಳು ನಮ್ಮ ಜನತೆಗೆ ತಿಳಿಸಿಲ್ಲ.

ವಿಜ್ಞಾನ-ತಂತ್ರಜ್ಞಾನದ ವಿಷಯಗಳ ಧೋರಣೆಗಳ ತಜ್ಞರಾದ ಪ್ರಬೀರ್ ಪುರಕಾಯಸ್ಥರವರ ಪ್ರಕಾರ ಭಾರತದ ಸಂಸತ್ತು ಅಂಗೀಕರಿಸಿರುವ ಎರಡು ಕಾನೂನುಗಳ 'ಪರಾಮರ್ಶೆ'ಗೆ ಅಮೆರಿಕಾ-ಭಾರತ ಜಂಟಿ ಹೇಳಿಕೆ ಬಾಗಿಲು ತೆರೆದು ಕೊಟ್ಟಿದೆ. ಒಂದು, ಭಾರತದ ಪೇಟೆಂಟ್ ಕಾನೂನು ಮತ್ತು ಎರಡು, ಪರಮಾಣು ಸುರಕ್ಷಿತತೆ ಕುರಿತಾದದ್ದು. ಇವೆರಡೂ ಭಾರತದ ಹಿತದೃಷ್ಟಿಯಿಂದ ಭಾರತದ ಸಂಸತ್ತು ಅಂಗೀಕರಿಸಿರುವ ಕಾನೂನುಗಳು, ಇವು ತಮ್ಮ ಸೂಪರ್ ಲಾಭಗಳಿಗೆ ಕಡಿವಾಣ ಹಾಕಿವೆ ಎಂಬುದು ಅಮೆರಿಕಾದ ಬಹುರಾಷ್ಟ್ರೀಯ ಔಷಧಿ ಕಂಪೆನಿಗಳ ಮತ್ತು ಪರಮಾಣು ಸ್ಥಾವರ ಪೂರೈಕೆದಾರ ಕಂಪನಿಗಳ ಅಳಲು.

ಪೇಟೆಂಟ್ ವ್ಯವಸ್ಥೆಯನ್ನು ಅಮೆರಿಕಾದ ಕಂಪೆನಿಗಳ ಪರವಾಗಿ ಬದಲಿಸಲು ಒತ್ತಡಗಳು ಈ ಭೇಟಿಯ ಮೊದಲೇ ಆರಂಭವಾಗಿದ್ದವು, 'ಒಳ್ಳೆಯ ದಿನಗಳ' ಭರವಸೆ ಕೊಟ್ಟಿರುವ ಸರಕಾರ ತನ್ನ ಭರವಸೆಗೆ ತದ್ವಿರುದ್ಧವಾಗಿ ಇಂತಹ ಒತ್ತಡಗಳಿಗೆ ತಲೆಬಾಗುವ ಲಕ್ಷಣಗಳೂ ಕಾಣ ಬಂದಿರುವುದನ್ನು, ಮತ್ತು ಇದರಿಂದ ಆತಂಕ ಗೊಂಡ ಕೆಲವು ಪ್ರತಿಷ್ಠಿತ ವ್ಯಕ್ತಿಗಳು, ಅಧ್ಯಯನಕಾರರು, ನಿವೃತ್ತ ರಾಜತಾಂತ್ರಿಕರು, ವಿಜ್ಞಾನಿಗಳು, ಕಾನೂನು ತಜ್ಞರಲ್ಲದೆ ಸಾರ್ವಜನಿಕ ಆರೋಗ್ಯ ರಂಗದಲ್ಲಿ ಕೆಲಸ ಮಾಡುತ್ತಿರುವ ಸಂಸ್ಥೆಗಳು ಭಾರತದ ಪ್ರಧಾನ ಮಂತ್ರಿಗಳಿಗೆ ಇಂತಹ ಒತ್ತಡಗಳಿಗೆ ತಲೆಬಾಗಬಾರದೆಂದು ಬಹಿರಂಗ ಪತ್ರ ಬರೆದುದನ್ನೂ ಈ ಅಂಕಣದಲ್ಲಿ ಮೂರು ವಾರಗಳ ಹಿಂದೆ ಗಮನಿಸಿದ್ದೇವೆ.

ಬೌದ್ಧಿಕ ಹಕ್ಕುಗಳನ್ನು ಅಂದರೆ ಪೇಟೆಂಟ್ ವ್ಯವಸ್ಥೆಯನ್ನು 'ನವೀನತೆ'ಗೆ ಸೀಮಿತಗೊಳಿಸಬೇಕೇ ಹೊರತು, ಜನಗಳ ಅಗತ್ಯಗಳಿಗೆ ಅಲ್ಲ ಎಂಬುದು ನವ-ಉದಾರವಾದಿಗಳ ವಾದ. ಬಿಜೆಪಿಯ ವಿಚಾರವೂ ಇದೇ ಇದ್ದಂತಿದೆ. ಏಕೆಂದರೆ, 1994 ರಲ್ಲಿ ಗ್ಯಾಟ್ ಒಪ್ಪಂದಕ್ಕೆ(ಡಬ್ಲ್ಯುಟಿಒ) ಜನತೆಯ ವಿರೋಧದ ನಡುವೆಯೂ ಸಹಿ ಮಾಡಿದುದರ ಪರಿಣಾಮವಾಗಿ ಭಾರತ 2005ರೊಳಗೆ ಅದುವರೆಗೆ ಇಲ್ಲದಿದ್ದ 'ಉತ್ಪಾದನೆ ಪೇಟೆಂಟ'ನ್ನು ತರಬೇಕಾಗಿತ್ತು. ಈ ಹಿನ್ನೆಲೆಯಲ್ಲಿ ಹಿಂದಿನ (1998-2004ರ) ಎನ್‌ಡಿಎ ಸರಕಾರದಲ್ಲಿ ಈಗ ಹಣಕಾಸು-ಕಂ-ರಕ್ಷಣಾ ಮಂತ್ರಿಯಾಗಿರುವವರು ಆಗ ಕಾನೂನು ಮಂತ್ರಿಯಾಗಿದ್ದಾಗ ದೊಡ್ಡ ಔಷಧಿ ಕಂಪನಿಗಳು ಮತ್ತು ಸಾಫ್ಟ್‌ವೇರ್ ಕಂಪನಿಗಳ ಒಡೆಯರ ಪರವಾಗಿದ್ದ ತಿದ್ದುಪಡಿಗಳನ್ನು ಭಾರತೀಯ ಪೇಟೆಂಟ್ ಕಾನೂನಿಗೆ ಸೂಚಿಸಿದ್ದರು.

ಇಂತಹ ಧೋರಣೆಗಳಿಂದಾಗಿ 'ಭಾರತ ಪ್ರಕಾಶಿಸುತ್ತಿದೆ' ಎಂದು ನಂಬಿಸಿದ್ದ ಆ ಸರಕಾರವನ್ನು 2004ರಲ್ಲಿ ಭಾರತದ ಜನತೆ ತಿರಸ್ಕರಿಸಿದ ನಂತರ ಅಧಿಕಾರಕ್ಕೆ ಬಂದ ಯುಪಿಎ-1 ಸರಕಾರ ಸುಮಾರಾಗಿ ಅವೇ ತಿದ್ದುಪಡಿಗಳನ್ನು ಸಂಸತ್ತಿನಲ್ಲಿ ಮಂಡಿಸಿತು. ಆದರೆ ಎಡಪಕ್ಷಗಳ ಬೆಂಬಲದ ಮೇಲೆ ಅದು ನಿಂತಿದ್ದುದರಿಂದ ಮನಮೋಹನ್‌ಸಿಂಗ್ ಸರಕಾರ ಗ್ಯಾಟ್/ಡಬ್ಲ್ಯುಟಿಒದಲ್ಲಿ ಇರದ ಸಾಫ್ಟ್‌ವೇರ್‌ನ್ನು ತಿದ್ದುಪಡಿಯಿಂದ ಕೈಬಿಟ್ಟಿತು. ಅಲ್ಲದೆ ಗ್ಯಾಟ್ ಒಪ್ಪಂದದಲ್ಲಿ ಇನ್ನೂ ಇದ್ದ ಕೆಲವು ಅಂಶಗಳನ್ನು ಬಳಸಿಕೊಂಡು ಪೇಟೆಂಟ್ ತಿದ್ದುಪಡಿಗಳಲ್ಲಿ ಕೆಲವು ಶರತ್ತುಗಳನ್ನು ಹಾಕುವ, ಜನಗಳ ಹಿತರಕ್ಷಿಸುವ ಮೂರು ಅಂಶಗಳನ್ನು ಸೇರಿಸಿತು. ಎಡಪಕ್ಷಗಳು ಸೇರಿಸಿದ ಈ ಅಂಶಗಳು ಈಗಲೂ ಬಹುರಾಷ್ಟ್ರೀಯ ಕಂಪನಿಗಳ ಲಾಭದ ಹಸಿವಿಗೆ ತಡೆ ಹಾಕಿರುವುದೇ ಈಗ ಮೋದಿ ಸರಕಾರದ ಮೇಲೆ ಬರುತ್ತಿರುವ ಒತ್ತಡಗಳಿಗೆ ಕಾರಣ.

ವಾಸ್ತವವಾಗಿ ನಮ್ಮ ಪೇಟೆಂಟ್ ಕಾನೂನಿನ ಬಗ್ಗೆ ಏನಾದರೂ ತಕರಾರು ಇದ್ದರೆ ಅಮೆರಿಕಾ ಸರಕಾರ ಡಬ್ಲ್ಯುಟಿಒಗೆ ದೂರು ಕೊಡಬಹುದು. ಆದರೆ ತಮ್ಮ ದೂರು ಡಬ್ಲ್ಯುಟಿಒ ನಿಯಮಗಳ ಪ್ರಕಾರವೂ ಬುಡವಿಲ್ಲದ್ದು ಎಂದು ತಿಳಿದಿರುವ ಅವರು ಬೆದರಿಕೆ, ಒತ್ತಡಗಳ ದಾರಿ ಹಿಡಿದಿದ್ದಾರೆ. ಇಂತಹ ಅವಕಾಶಗಳಿದ್ದರೂ, ದುರದೃಷ್ಟವಶಾತ್ 'ದೇಶಭಕ್ತಿ'ಯ ಮಾತಾಡುವ ಸರಕಾರ ಅಮೆರಿಕಾದ ಆಳರಸರನ್ನು ಒಲಿಸಿಕೊಳ್ಳಲು ತನ್ನ ಬಡ ದೇಶಬಾಂಧವರ ಆರೋಗ್ಯದ ಪ್ರಶ್ನೆಗಳನ್ನು ಬದಿಗೊತ್ತಲು ಮುಂದಾಗಿರುವಂತೆ ಕಾಣುತ್ತದೆ.

ಪ್ರಧಾನ ಮಂತ್ರಿಗಳ ಭೇಟಿಯ ಕಾಲದಲ್ಲಿ ಕೊಟ್ಟಿರುವ ಇನ್ನೊಂದು ರಿಯಾಯ್ತಿ ಪರಮಾಣು ಸುರಕ್ಷಿತತೆಯ ಕಾನೂನಿಗೆ ಸಂಬಂಧಪಟ್ಟದ್ದು. ಭೋಪಾಲ್ ಅನಿಲ ಅಪಘಾತದಲ್ಲಿ ಯೂನಿಯನ್ ಕಾರ್ಬೈಡ್ ಎಂಬ ಅಮೆರಿಕನ್ ಬಹುರಾಷ್ಟ್ರೀಯ ಕಂಪನಿಯೊಂದಿಗಿನ ಘೋರ ಅನುಭವದ ಹಿನ್ನೆಲೆಯಲ್ಲಿ ಪರಮಾಣು ಸ್ಥಾವರಗಳಲ್ಲಿ ಅಪಘಾತದ ಸಂದರ್ಭದಲ್ಲಿ ನೀಡಬೇಕಾದ ಪರಿಹಾರಗಳನ್ನು ಕುರಿತಂತೆ ಕಾನೂನನ್ನು ಯುಪಿಎ-1 ಸರಕಾರದ ಆಳ್ವಿಕೆಯಲ್ಲಿ ಸಂಸತ್ತು ಅಂಗೀಕರಿಸಿತು. ಇದು ಕೂಡ ಎಡಪಕ್ಷಗಳ ಒತ್ತಡದಿಂದಾಗಿ ಬಂದ ಕಾನೂನು ಎಂದು ಬೇರೆ ಹೇಳಬೇಕಾಗಿಲ್ಲ.

ಆದರೆ ತಾವು ನಿರ್ಮಿಸಿ ಕೊಡುವ ಪರಮಾಣು ಸ್ಥಾವರಗಳು ಅತ್ಯಂತ ಸುರಕ್ಷಿತ ಎನ್ನುವ ಈ ಕಂಪನಿಗಳು, ಅದರಲ್ಲೂ ಅಮೆರಿಕಾದ ಕಂಪನಿಗಳು ಇಂತಹ ಪರಿಹಾರಕ್ಕೆ ಬಾಧ್ಯರಾಗಲು ಸಿದ್ಧರಿಲ್ಲ. ಇದೊಂದು ಹೊಸ ಹಾದಿ ತುಳಿದ, ಅದರಲ್ಲೂ ಅಭಿವೃದ್ಧಿಶೀಲ ದೇಶಗಳಿಗೆ ಮಾದರಿಯಾದ ಕಾನೂನು ಎಂಬ ಅಂತರ್ರಾಷ್ಟ್ರೀಯ ಪ್ರಶಂಸೆಗೆ ಒಳಗಾಗಿದ್ದರೂ, ಭಾರತವನ್ನು ಒಂದು ಬಲಿಷ್ಟ ಶಕ್ತಿಯನ್ನಾಗಿ ಮಾಡುವ ಮಾತಾಡುವ ಸರಕಾರ ಈ ಕಂಪನಿಗಳು ಈ ಕಾನೂನಿಗೆ ಬದ್ಧರಾಗುವಂತೆ ಮಾಡಲು ಹಿಂದೇಟು ಹಾಕುತ್ತಿದೆ.

ಇವೆರಡೂ ಕಾನೂನುಗಳು ಭಾರತದ ಸಂಸತ್ತು ಬಹಳ ಚರ್ಚೆಗಳ ನಂತರ ಅಂಗೀಕರಿಸಿದವುಗಳು, ಈ ಬಗ್ಗೆ ಮತ್ತೆ ಚರ್ಚೆ ಬೇಕಾಗಿಲ್ಲ ಎಂದು ಹಿಂದಿನ ಸರಕಾರ ಅಳುಕಿನಿಂದಲಾದರೂ ಹೇಳುತ್ತಿತ್ತು. ಆದರೆ ಈಗಿನ 'ಬಲಿಷ್ಟ ವ್ಯಕ್ತಿತ್ವ'ದ ಪ್ರಧಾನ ಮಂತ್ರಿಗಳು ಸಹಿ ಮಾಡಿರುವ ಅಮೆರಿಕಾ-ಭಾರತ ಜಂಟಿ ಹೇಳಿಕೆ, ಭಾರತದ ಪೇಟೆಂಟ್ ಮತ್ತು ಪರಮಾಣು ಸುರಕ್ಷಿತತೆಯ ಧೋರಣೆಗಳನ್ನು ಅಮೆರಿಕಾದ ವ್ಯಾಪಾರಿ ಸಂಸ್ಥೆಗಳೊಂದಿಗೆ ಸೇರಿಕೊಂಡು ನಿರ್ಧರಿಸಲು ಅವಕಾಶ ಕಲ್ಪಿಸಿಕೊಟ್ಟಿದೆ. ಅದು ಪೇಟೆಂಟ್ ಪರಾಮರ್ಶೆಗೆ 'ಬೌದ್ಧಿಕ ಆಸ್ತಿ ಕಾರ್ಯಕಾರಿ ಗುಂಪು' ಮತ್ತು ಪರಮಾಣು ಸ್ಥಾವರಗಳ ವ್ಯಾಪಾರದಲ್ಲಿ ಸುರಕ್ಷಿತತೆಯ ಪ್ರಶ್ನೆಗಳನ್ನು ಚರ್ಚಿಸಲು 'ಸಂಪರ್ಕ ಗುಂಪು' ರಚಿಸುವ ಬಗ್ಗೆ ಮಾತಾಡಿದೆ.

ಇದು, ಒಂದೆಡೆಯಲ್ಲಿ ಭಾರತದ ಜನತೆಗೆ ಜೀವರಕ್ಷಕ ಔಷಧಿಗಳು ಲಭ್ಯವಾಗದಂತೆ ಮಾಡಿ, ಮತ್ತೊಂದೆಡೆ ಭಾರತದಲ್ಲಿ ಪರಮಾಣು ಸುರಕ್ಷಿತತೆಯ ಪ್ರಶ್ನೆಯನ್ನು ಅಮೆರಿಕಾದ ಕಂಪನಿಗಳಿಗೆ ವಹಿಸಿ ಕೊಟ್ಟು ಭಾರತದ ಜನತೆಗೆ ಮಾಡಿರುವ ವಿಶ್ವಾಸಘಾತ ಎಂದು ಪ್ರಬೀರ್ ಪುರಕಾಯಸ್ಥ ವಿಶ್ಲೇಷಿಸಿದ್ದಾರೆ.

## ಎತ್ತಿದ ಪ್ರಶ್ನೆಗಳಿಗಿಂತ ಮುಖ್ಯವಾದ ಎತ್ತದ ಪ್ರಶ್ನೆಗಳು

ಅಲ್ಲದೆ ಮೋದಿ ಸರಕಾರ ಅಮೆರಿಕನ್ನರಿಗೆ ಭಾರತಕ್ಕೆ ಆಗಮಿಸಿದಲ್ಲೇ ವೀಸಾ ಕೊಡುವ ರಿಯಾಯ್ತಿಯನ್ನೂ ಕೊಡಮಾಡಿದೆ. ಇದು ಅಮೆರಿಕಾದ ನಾಗರಿಕರಿಗೆ ಕೊಟ್ಟಿರುವ ವಿಶೇಷ ಸವಲತ್ತು ಮಾತ್ರವೇ ಅಲ್ಲ, ಅದಕ್ಕಿಂತ ಹೆಚ್ಚಾಗಿ ಅಮೆರಿಕಾದ ಕಂಪನಿಗಳಿಗೆ ನೀಡಿರುವ ವಿಶೇಷ ಸವಲತ್ತು. ನಮ್ಮ ಪ್ರಧಾನ ಮಂತ್ರಿಗಳು ಭಾರತದ ಜನತೆಯ ಪರವಾಗಿ ನೀಡಿರುವ ಈ ರಿಯಾಯ್ತಿಗೆ ಆ ಜನತೆಯೇ ಭಾರೀ ಬೆಲೆ ತೆರಬೇಕಾಗಿ ಬರಬಹುದು ಎಂದು ತಜ್ಞರು ಇದುವರೆಗಿನ ಅನುಭವಗಳ ಆಧಾರದಲ್ಲಿ ಅಭಿಪ್ರಾಯ ಪಡುತ್ತಿದ್ದಾರೆ.

ಅಲ್ಲದೆ ಮೋದಿಯವರ ಈ ಭೇಟಿ ಮೋದಿಯವರು ಎತ್ತಿದ ಪ್ರಶ್ನೆಗಳಷ್ಟೇ, ಅವರು ಅಮೆರಿಕಾ ಸರಕಾರದೊಂದಿಗೆ ಎತ್ತದ ಪ್ರಶ್ನೆಗಳ ದೃಷ್ಟಿಯಿಂದಲೂ ಮಹತ್ವದ್ದು ಎನ್ನುತ್ತಾರೆ ಪ್ರಬೀರ್ ಅವರು. ಅಮೆರಿಕಾದ ಎನ್‌ಎಸ್‌ಎ, ಅಂದರೆ ರಾಷ್ಟ್ರೀಯ ಭದ್ರತಾ ಏಜೆನ್ಸಿ ಬೇರೆ ದೇಶಗಳ ಮೇಲೆ ಗೂಢಚರ್ಯೆ ನಡೆಸಿತ್ತು ಎಂಬ ಸುದ್ದಿ ಜಗತ್ತಲ್ಲೆಲ್ಲ ಕೋಲಾಹಲ ಎಬ್ಬಿಸಿತ್ತು. ಸ್ವತಃ ಅಮೆರಿಕಾದ ನಿಕಟ ಮಿತ್ರದೇಶಗಳಿಂದಲೇ ಇದಕ್ಕೆ ಭಾರೀ ಪ್ರತಿಭಟನೆ ವ್ಯಕ್ತವಾಗಿತ್ತು. ಭಾರತವೂ ಈ ಗೂಢಚರ್ಯೆಗೊಳಗಾದ ಪ್ರಮುಖ ದೇಶಗಳ ಪಟ್ಟಿಯಲ್ಲಿತ್ತು. ಆದರೆ ಭಾರತ ಪ್ರತಿಭಟಿಸಿರಲಿಲ್ಲ. ವಾಸ್ತವವಾಗಿ ಯುಪಿಎ-2 ಸರಕಾರವೇ ಅಮೆರಿಕಾದ ಎನ್‌ಎಸ್‌ಎ ಗೆ ಭಾರತದಲ್ಲಿ ಗೂಢಚರ್ಯೆ ನಡೆಸಲು ಅನುಮತಿ ಮಾತ್ರವಲ್ಲ, ಸೌಕರ್ಯವನ್ನೂ ಒದಗಿಸಿತ್ತು ಎಂದು ಆಮೇಲೆ ಬಯಲಾಯಿತು. ಹೀಗೆ ಗೂಢಚರ್ಯೆಗೆ ಒಳಗಾದ ಸಂಸ್ಥೆಗಳಲ್ಲಿ ಬಿಜೆಪಿಯೂ ಸೇರಿತ್ತು. ಆಗೇನೋ ಬಿಜೆಪಿ ಈ ಬಗ್ಗೆ ಗದ್ದಲ ಎಬ್ಬಿಸಿತ್ತು. ಆದರೆ ಮೋದಿಯವರು ತನ್ನ ಅಮೆರಿಕಾ ಭೇಟಿಯಲ್ಲಿ ಈ ವಿಷಯವನ್ನೇ ಎತ್ತಿಲ್ಲ, ಅಲ್ಲದೆ ಯುಪಿಎ-2 ಒದಗಿಸಿದ ಸೌಕರ್ಯವನ್ನು ರಕ್ಷಣಾ ಸಹಯೋಗದ ಹೆಸರಲ್ಲಿ ಮುಂದುವರೆಸುವ ಸಂಕೇತವನ್ನೂ ನೀಡಿದ್ದಾರೆ ಎಂದು ಪ್ರಬೀರ್ ಪುರಕಾಯಸ್ಥ ವಿಶ್ಲೇಷಿಸಿದ್ದಾರೆ.



ಅಮೆರಿಕನ್ ಹೂಡಿಕೆದಾರರು ಭಾರತದಲ್ಲಿ 41 ಬಿಲಿಯ ಡಾಲರ್ ಹೂಡಿಕೆ ಮಾಡುತ್ತಾರಂತೆ

**ವ್ಯಂಗ್ಯಚಿತ್ರ ಕೃಪೆ: ಸತೀಶ್ ಆಚಾರ್ಯ**

## 'ಒಳ್ಳೆಯ ದಿನ'ಗಳ ಡೈರಿ

**ವೇದರಾಜ ಎನ್.ಕೆ.**



## ಬಯಲಾದ 'ಲವ್ ಜಿಹಾದ್' ಅಪಪ್ರಚಾರ

**'ಅಭಿವೃದ್ಧಿ' ಅಜೆಂಡಾದ ಆಚೆ**

ಉತ್ತರ ಪ್ರದೇಶದ ಮೇರಠ್ ಜಿಲ್ಲೆಯ ಒಂದು ಹಳ್ಳಿಯಲ್ಲಿ ಒಬ್ಬ ಯುವತಿಯನ್ನು ಅಪಹರಿಸಿ ಸಾಮೂಹಿಕ ಅತ್ಯಾಚಾರಕ್ಕೆ ಗುರಿಪಡಿಸಿ ನಂತರ ಇಸ್ಲಾಮ್‌ಗೆ ಮತಾಂತರಗೊಳಿಸಲಾಯಿತು, ಯುವತಿ ಹೀಗೆಂದು ಪೋಲೀಸ್‌ಗೆ ಹೇಳಿದ್ದಾಳೆ ಎಂದು ಆಕೆಯ ತಂದೆ-ತಾಯಿ ಬಯಲಿಗೆ ತಂದಿದ್ದಾರೆ ಎಂದು ದೊಡ್ಡ ಸುದ್ದಿಯಾಗಿತ್ತು. ಉತ್ತರ ಪ್ರದೇಶದ ಚುನಾವಣೆಗಳಲ್ಲಿ ಕೋಮುಧ್ರುವೀಕರಣಕ್ಕೆ 'ಲವ್‌ಜಿಹಾದ್' ಎಂಬುದನ್ನು ದೊಡ್ಡದಾಗಿ ಬಳಸಿಕೊಳ್ಳಲು ನಿರ್ಧರಿಸಿದ್ದ ಸಂಘಪರಿವಾರ ಇದು ಒಂದು 'ಲವ್ ಜಿಹಾದ್' ಪ್ರಕರಣ ಎಂದು ಭಾರೀ ಕೋಲಾಹಲವನ್ನೂ ನಡೆಸಿತು.

ಆದರೆ ಈಗ ಆ ಯುವತಿ ತನ್ನ ಹಿಂದಿನ ಹೇಳಿಕೆಗಳೆಲ್ಲ ಸುಳ್ಳು. ಎಂದು ಪೋಲೀಸರಿಗೆ ತಿಳಿಸಿ, ತಾನು ಆ ಮುಸ್ಲಿಂ ಹುಡುಗನೊಂದಿಗೆ ಸ್ವಯಮಿಚ್ಛೆಯಿಂದಲೇ ಹೋಗಿದ್ದೆ, ಅದು ಅಪಹರಣವಾಗಿರಲಿಲ್ಲ, ಎಂದಿದ್ದಾಳೆ. ನಿಜ ಸಂಗತಿ ತಿಳಿದ ತನ್ನ ಸಂಬಂಧಿಕರು ತನ್ನನ್ನು ಬೆದರಿಸುತ್ತಿದ್ದಾರೆ ತನಗೀಗ ಅವರಿಂದ ರಕ್ಷಣೆ ಬೇಕು ಎಂದು ಆಕೆ ಪೋಲೀಸರ ಮೊರೆ ಹೋಗಿದ್ದಾಳೆ.

ಈ ಹಿಂದೆ ಆಗಸ್ಟ್‌ನಲ್ಲಿ ಈ ಯುವತಿಯನ್ನು ಗಾಝಿಯಾಬಾದ್‌ನಲ್ಲಿ ಆಸ್ಪತ್ರೆಗೆ ಸೇರಿಸಿದ್ದಾಗ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ನಿಯೋಗವೊಂದು ಆಕೆಯನ್ನು ಮತ್ತು ಆಕೆಯ ಕುಟುಂಬದವರನ್ನು ಭೇಟಿಯಾಗಿತ್ತು. ಆಗ ಆಕೆ ಚಿಂತಾಜನಕ ಸ್ಥಿತಿಯಲ್ಲಿದ್ದು, ಆರೋಗ್ಯ ತುಂಬಾ ಕೆಟ್ಟಿತ್ತು. ಆಕೆಯ ಪರಿಸ್ಥಿತಿಯ ಬಗ್ಗೆ ಸಹಾನುಭೂತಿ ವ್ಯಕ್ತಪಡಿಸಿದ್ದರೂ, ಆಕೆ ಹೇಳುವ ಕತೆಯಲ್ಲಿ ಗಂಭೀರ ಅಸಂಗತೆಗಳಿವೆ. ಪೋಲೀಸರು ಈ ಬಗ್ಗೆ ತನಿಖೆ ನಡೆಸಬೇಕೆಂದು ಕೇಳಿತ್ತು, ಅದೇ ವೇಳೆಗೆ ಬಿಜೆಪಿ ಮತ್ತು ಸಂಘಪರಿವಾರದ ಇತರರು ಇದನ್ನು ಕೋಮು ಭಾವನೆಗಳನ್ನು ಉದ್ರೇಕಿಸಲು ಬಳಸುತ್ತಿದ್ದಾರೆ ಎಂದು ಖಂಡಿಸಿತ್ತು.

ಈಗ ಆ ಯುವತಿ ನಿಜವಾಗಿ ನಡೆದದ್ದೇನು ಎಂದು ಹೇಳಿರುವಾಗ ಆಕೆಗೆ ಪೂರ್ಣ ರಕ್ಷಣೆ ಕೊಡಬೇಕು. ಆಕೆಯ ಕುಟುಂಬದ ಸದಸ್ಯರು ಆಕೆಯ ವಿರುದ್ಧ ಏನೂ ಹಿಂಸಾಚಾರ ನಡೆಸದಂತೆ, ಅದಕ್ಕೆ ಪ್ರಯತ್ನಿಸಿದರೆ, ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ಈ ಹಿಂದೆ ಆಕೆಯ ಹೇಳಿಕೆಯ ಆಧಾರದಲ್ಲಿ ಬಂಧಿಸಿದ್ದವರನ್ನೆಲ್ಲ ಬಿಡುಗಡೆ ಮಾಡಿ ಅವರ ಮೇಲಿನ ಕೇಸನ್ನು ಹಿಂತೆಗೆದುಕೊಳ್ಳಬೇಕು ಮತ್ತು ಇದನ್ನು ಬಳಸಿಕೊಂಡು ಮೇರಠ್ ಮತ್ತು ಸುತ್ತಮುತ್ತಲಿನಲ್ಲಿ ಕೋಮು ಗಲಭೆಗಳನ್ನು ಎಬ್ಬಿಸಿ ಅಪಪ್ರಚಾರದಲ್ಲಿ ತೊಡಗಿದ್ದವರ ಮೇಲೆ

ಪುಟ 15 ಕ್ಕೆ




ಗಲಭೆ ಆಪಾದಿತರಿಗೆ ಉತ್ತರ ಪ್ರದೇಶ ಬಿಜೆಪಿ ಸನ್ಮಾನ

**ಸ್ವಚ್ಛ ಭಾರತ**

ಕಮಲವು ಸ್ವಚ್ಛ ಗಾಂಧಿವಾದಿ ಜಲದಲ್ಲಿ ಅರಳುವುದಿಲ್ಲ !

ಕೃಪೆ: ಉನ್ನಿ, ಇಂಡಿಯನ್ ಎಕ್ಸ್‌ಪ್ರೆಸ್

ಜಗದಗಲ

ಶರತ್‌ಚಂದ್ರ

# ಬೊಲಿವಿಯದಲ್ಲಿ ಇವೊ ಹ್ಯಾಟ್ರಿಕ್ !



ಬೊಲಿವಿಯದಲ್ಲಿ ಅಧ್ಯಕ್ಷ ಇವೊ ಮೊರಾಲೆಸ್ ಹ್ಯಾಟ್ರಿಕ್ ಹೊಡೆದಿದ್ದಾರೆ. ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಅವರು ಶೇ.60 ಮತ ಗಳಿಸಿ ಮೊದಲ ಸುತ್ತಿನಲ್ಲೇ ಆಯ್ಕೆಯಾಗಿದ್ದಾರೆ. ಅವರ ಸಮೀಪದ ಪ್ರತಿಸ್ಪರ್ಧಿ ಉದ್ಯಮಿ ಸ್ಯಾಮುವೆಲ್ ದೊರಿಯಾ ಮೆದಿನಾ ಕೇವಲ ಶೇ. 24 ಮತ ಗಳಿಸಿದ್ದರು. ಇವೊ ಮೊರಾಲೆಸ್ ಅವರ ನಾಯಕತ್ವದ 'ಸಮಾಜವಾದದತ್ತ ಚಳುವಳಿ' ಪಕ್ಷ ಪಾರ್ಲಿಮೆಂಟಿನ ಕೆಳ ಮತ್ತು ಮೇಲಿನ ಎರಡೂ ಸದನಗಳಲ್ಲೂ ಬಹುಮತ ಪಡೆದಿದೆ. ಅವರ ಹ್ಯಾಟ್ರಿಕ್ ಮತ್ತು ಭಾರೀ ಬಹುಮತ ಅಮೆರಿಕ ಮತ್ತು ಯುರೋಪಿಯನ್ ಕೂಟ ಸರಕಾರಗಳು, ಐಎಂಎಫ್–ವಿಶ್ವಬ್ಯಾಂಕ್–ಡಬ್ಲ್ಯುಟಿಒ ತ್ರಿಮೂರ್ತಿಗಳು ಮತ್ತು ಬಂಡವಾಳಶಾಹಿ ಅರ್ಥಶಾಸ್ತ್ರಜ್ಞರು/ರಾಜಕೀಯ ವೀಕ್ಷಕರನ್ನು ಆಶ್ಚರ್ಯಚಕಿತಗೊಳಿಸಿದೆ. ಮಾತ್ರವಲ್ಲ, ಮೈ ಪರಚಿಕೊಳ್ಳುವಂತೆ ಮಾಡಿದೆ.

**'ತ್ರಿಮೂರ್ತಿ'ಗಳ 'ತ್ರಿಕರಣ' ಉಲ್ಲಂಘಿಸಿ ಆರ್ಥಿಕ ಬೆಳವಣಿಗೆ**

ಇದಕ್ಕೆ ಅಧ್ಯಕ್ಷ ಇವೊ ಮೊರಾಲೆಸ್ ಗೆಲುವು ಮಾತ್ರ ಕಾರಣ ಅಲ್ಲ. ಅವರ ಗೆಲುವು ನಿರೀಕ್ಷಿತವೇ ಇತ್ತು. ಆಶ್ಚರ್ಯವೇನಾದರೂ




ಇದ್ದರೆ ಗೆಲುವಿನ ಪ್ರಮಾಣ ಮತ್ತು ಮೊದಲ ಸುತ್ತಿನಲ್ಲೇ ಗೆಲುವು ಬಗ್ಗೆ ಅಷ್ಟೇ. ಆದ–




ರೆ ಇವರಿಗೆಲ್ಲಾ ಮೈ ಪರಚಿಕೊಳ್ಳುವಂತೆ ಆಗಿದ್ದು, ಎಡ ಸರಕಾರಗಳ ಬಗ್ಗೆ ಇವರೆಲ್ಲ ಹರಡುತ್ತಿದ್ದ ಎಲ್ಲಾ ಅಪಪ್ರಚಾರಗಳ ತಲೆ ಮೇಲೆ ಹೊಡೆಯುವಂತೆ ಬೊಲಿವಿಯದ ಸರಕಾರದ ಯಶಸ್ಸಿನ ದಾಖಲೆಗಳು. ಇದರಲ್ಲಿ ಮುಖ್ಯವಾದ್ದು ಎಡ ಸರಕಾರಗಳು ಹೆಚ್ಚೆಂದರೆ ಇದ್ದ ಸಂಪತ್ತನ್ನು ಹಂಚಿ ಅಸಮಾನತೆ ಕಡಿಮೆ ಮಾಡಬಹುದು. ಆದರೆ ಸಂಪತ್ತು ಸೃಷ್ಟಿಸಿ ಅಂದರೆ ಆರ್ಥಿಕ ಬೆಳವಣಿಗೆ ಸಾಧಿಸಲು ಸಾಧ್ಯವಿಲ್ಲ. ಮಾತ್ರವಲ್ಲ, ಬೆಳವಣಿಗೆ ಸಾಧಿಸಿದಾಗಲೂ ಹಣದುಬ್ಬರ ಹಣಕಾಸು ಖೊತಾಗಳಿಂದ ಆರ್ಥಿಕ ಬಳಲುತ್ತದೆ ಎಂಬ ಅಪಪ್ರಚಾರ. ಇದು ಹಸಿ ಸುಳ್ಳು ಎಂದು ಇವೊ ಸಾಧಿಸಿ ತೋರಿಸಿದ್ದಾರೆ.

ಅವರ ಅಧಿಕಾರದ ಅವಧಿಯಲ್ಲಿ ಸರಾಸರಿ ಶೇ, 5 ಬೆಳವಣಿಗೆ ದರ ಸಾಧಿಸಿದ್ದು ಮಾತ್ರವಲ್ಲ, ಅದನ್ನು ಯಾವುದೇ ಹಣದುಬ್ಬರ ಹಣಕಾಸು ಖೊತಾ ಇಲ್ಲದೆ ಸಾಧಿಸಿದ್ದಾರೆ. ಕಳೆದ 8 ವರ್ಷಗಳಲ್ಲಿ ಸಾಧಿಸಿದ ಆರ್ಥಿಕ ಬೆಳವಣಿಗೆ ಅದರ ಹಿಂದಿನ 35 ವರ್ಷಗಳಲ್ಲಿ ಸಾಧಿಸಿದ ಬೆಳವಣಿಗೆಗಿಂತ ಹೆಚ್ಚಾಗಿತ್ತು. ಲ್ಯಾಟಿನ್ ಅಮೆರಿಕದಲ್ಲೆ ಬೊಲಿವಿಯ ಅತ್ಯಂತ ವೇಗದ ಬೆಳವಣಿಗೆ ಸಾಧಿಸಿದ ದೇಶವಾಗಿದೆ. ಅದೂ ಐಎಂಎಫ್–ವಿಶ್ವಬ್ಯಾಂಕ್–ಡಬ್ಲ್ಯುಟಿಒ 'ತ್ರಿಮೂರ್ತಿ'ಗಳ 'ತ್ರಿಕರಣ' (ಖಾಸಗೀಕರಣ–ಉದಾರೀಕರಣ–ಜಾಗತೀಕರಣ) ನೀತಿಗಳನ್ನು ಪೂರ್ಣವಾಗಿ ಉಲ್ಲಂಘಿಸಿ. ಅವರು ತೈಲ, ಗ್ಯಾಸ್ ಮುಂತಾದ ಪ್ರಾಕೃತಿಕ ಸಂಪತ್ತನ್ನು ರಾಷ್ಟ್ರೀಕರಿಸಿದರು. ತೈಲ–ಗ್ಯಾಸ್ ಲಾಭಗಳ ಮೇಲೆ ತೆರಿಗೆಯನ್ನು ಶೇ.18ರಿಂದ ಶೇ.82ಕ್ಕೇರಿಸಿದರು.

**ಸಾಮಾಜಿಕ ಕಲ್ಯಾಣ ಸಾಧನೆಗಳು**

ಎಡ ಸರಕಾರ ಆರ್ಥಿಕವನ್ನು ಹಾಳುಗೆಡವುತ್ತದೆ ಎಂಬ ಅಪಪ್ರಚಾರದ ಜತೆ, ಇನ್ನೆರಡು ಅಪಪ್ರಚಾರಗಳನ್ನೂ ಇವೊ ಸರಕಾರ ಹುಡಿ ಹಾರಿಸಿದೆ. ದುಡಿಯುವ ಜನರ ಪಕ್ಷಗಳು ಆರ್ಥಿಕವನ್ನು ಸರಿಯಾಗಿ ನಿರ್ವಹಿಸಲು ಸಾಧ್ಯವಿಲ್ಲ; ಮೂಲಭೂತ ಬದಲಾವಣೆ ರಾಜಕೀಯದಿಂದ ಬರಲು ಸಾಧ್ಯವಿಲ್ಲ – ಇವೇ ಆ ಇನ್ನೆರಡು ಅಪಪ್ರಚಾರಗಳು. ಇವೆಲ್ಲವನ್ನೂ ಅಮೆರಿಕನ್ ಸರಕಾರ, ಅಂತರಾಷ್ಟ್ರೀಯ ಉದ್ಯಮಿಗಳು, ಐಎಂಎಫ್ ಗಳ ತೀವ್ರ ಪ್ರತಿ–ರೋಧ, ಕಿರುಕುಳ, ಆರ್ಥಿಕ–ರಾಜಕೀಯ ಒತ್ತಡವನ್ನು ಎದುರಿಸಿ ಎಂಬುದೂ ಅಷ್ಟೇ ಗಮನಾರ್ಹ.

ಆರ್ಥಿಕವನ್ನು ಸರಿಯಾಗಿ ನಿರ್ವಹಿಸಿದ್ದು ಮಾತ್ರವಲ್ಲ, ಜನತೆಗೆ ಬೇಕಾದ ಸಾಮಾಜಿಕ ಕಲ್ಯಾಣ ಯೋಜನೆಗಳನ್ನು ಸರಿಯಾಗಿ ಜಾರಿ ಮಾಡಲಾಗಿದೆ. ಅಥವಾ ಸಾಮಾಜಿಕ ಕಲ್ಯಾಣ ಯೋಜನೆಗಳ ಜಾರಿಯನ್ನು ಉತ್ತಮ ಆರ್ಥಿಕ ನಿರ್ವಹಣೆ ಜತೆಗೆ ಮಾಡಲಾಗಿದೆ. ಬಡತನವನ್ನು ಶೆ. 25ರಷ್ಟು ಕಡಿಮೆ ಮಾಡಲಾಗಿದೆ. ಕಡು ಬಡತನವನ್ನು ಶೇ. 43ರಷ್ಟು ಕಡಿಮೆ ಮಾಡಲಾಗಿದೆ. ಕೂಲಿಯನ್ನು ಹೆಚ್ಚು ಕಡಿಮೆ (ಶೇ, 88 ರಷ್ಟು ಏರಿಕೆ) ಇಮ್ಮಡಿ ಮಾಡಲಾಗಿದೆ. ಸ್ಕೂಲು ಮತ್ತು ಆರೋಗ್ಯ ಸೇವೆಗೆ ಸಾರ್ವಜನಿಕ ಹೂಡಿಕೆಯನ್ನು ಇಮ್ಮಡಿಗೊಳಿಸಲಾಗಿದೆ. ಪೆನ್ಶನ್ ಪಡೆಯುವ ನಿವೃತ್ತಿ ವಯಸ್ಸನ್ನು 65ರಿಂದ 60ಕ್ಕೆ ಕಡಿಮೆ ಮಾಡಲಾಗಿದೆ.

**ಕೊಕೊ ಶಾಕ್ !**

ಇವೊ ಸರಕಾರ ಅಮೆರಿಕದ ಸರಕಾರ–ಕ್ಕೆ ಇನ್ನೊಂದು ಶಾಕ್ ಸಹ ಕೊಟ್ಟಿದೆ. ಅದು ಕೊಕೊ ಕೃಷಿ ಕಾನೂನುಬದ್ಧಗೊಳಿಸಿದ್ದು. ಇವೊ ಸ್ವತಃ ಕೊಕೊ ಬೆಳೆಯುವ ರೈತರಾಗಿದ್ದರು. ಬೊಲಿವಿಯದಲ್ಲಿ ಕೊಕೊ ಎಲೆಗಳನ್ನು ಸಾಂಪ್ರದಾಯಿಕವಾಗಿ (ನಮ್ಮಲ್ಲಿ ಅಡಿಕೆಯಂತೆ) ಅಗಿಯುತ್ತಾರೆ. ಕೊಕೇನ್ ಎಂಬ ಮಾದಕ ದ್ರವ್ಯಕ್ಕೆ ಕೊಕೊ ಎಲೆ ಕಚ್ಚಾ ಪದಾರ್ಥ ನಿಜ. ಆದರೆ ಅದಕ್ಕೆ ಸಂಕೀರ್ಣವಾದ ರಾಸಾಯನಿಕ ಪ್ರಕ್ರಿಯೆ ಇದೆ. ಕೊಕೊ ಎಂದರೆ ಕೊಕೇನ್ ಅಲ್ಲ. ಕೊಕೇನ್ ತಡೆಯಲು ಕೊಕೊ ಕೃಷಿ ನಿಷೇಧ ಅಗತ್ಯವಿಲ್ಲ. ಅಲ್ಲದೆ ಕೊಕೊ ಕೃಷಿ ನಿಷೇಧಿಸುವುದು ಒಂದು ಜೀವನಶೈಲಿಯನ್ನು ನಿಷೇಧಿಸಿದಂತೆ ಎಂದು ಅವರ ವಾದ. ಅಂತೆ–ಯೇ ಅವರು ಕೊಕೊ ಕೃಷಿಯನ್ನು ಕಾನೂನು ಬದ್ಧಗೊಳಿಸಿದರು. ಇದರಿಂದ ಕೊಕೇನ್ ಪೂ–ರೈಕೆ ಹೆಚ್ಚುತ್ತದೆ ಎಂದು ಅಮೆರಿಕನ್ ಸರಕಾರ ಹಾಹಾಕಾರ ಎಬ್ಬಿಸಿತ್ತು. ಆದರೆ ಕಳೆದ ಎರಡು ವರ್ಷಗಳಲ್ಲಿ ಕೊಕೊ ಕೃಷಿ ಕಡಿಮೆಯಾಗುತ್ತಿದೆ ಎಂದು ವರದಿಯಾಗಿದೆ. ಅಂದರೆ ಕೊಕೇನ್ ಗೆ ಸಿಗುವ ಕಚ್ಚಾ ಪದಾರ್ಥ ಸಹ ಕಡಿಮೆಯಾಗಿದೆ ಎಂದರ್ಥ. ಇದು ಅಮೆರಿಕದ ನೀತಿ ತಪ್ಪು ಎಂದು ಸಿದ್ಧ ಪಡಿಸಿದೆ ಕೂಡಾ. ಕೊಕೇನ್ ನಿಯಂತ್ರಣಕ್ಕೆ ಕೊಕೊ ಕೃಷಿ ನಿಷೇಧ ಅಗತ್ಯ ಮತ್ತು ಅದನ್ನು ಜಾರಿ ಮಾಡಲು ಮಿಲಿಟರಿ ಕ್ರಮ ಅಗತ್ಯ ಎಂಬ ಅಮೆರಿಕನ್ ಸಿದ್ಧಾಂತ, ಲ್ಯಾಟಿನ್ ಅಮೆರಿಕನ್ ದೇಶಗಳಲ್ಲಿ ಮಿಲಿಟರಿ ಮಧ್ಯಪ್ರವೇಶ ಮಾಡಲು ಒಂದು ನೆಪ ಮಾತ್ರ. ಅದರ ಉದ್ದೇಶ ಕೊಕೇನ್ ಮಾದಕ ದ್ರವ್ಯದ ನಿಯಂತ್ರಣ ಅಲ್ಲ ಎಂಬುದು ಸಿದ್ಧವಾಗಿದೆ. ಇದು ಅಮೆರಿಕನ್ ಸರಕಾರಕ್ಕೆ ಶಾಕ್ ಕೊಟ್ಟಿದೆ. ಕೊಕೊ ಕೃಷಿ ಮೇಲೆ ನಿಷೇಧವನ್ನು ಅಂತರಾಷ್ಟ್ರೀಯವಾಗಿಯೂ ತೆಗೆದು ಹಾಕಬೇಕೆಂಬ ಇವೊ ಒತ್ತಾಯಕ್ಕೆ ಇದರಿಂದ ಬಲ ಬಂದಿದೆ. ●

## ಬಯಲಾದ 'ಲವ್ ಜಿಹಾದ್' ಅಪಪ್ರಚಾರ

ಪುಟ 13 ರಿಂದ

ಕೇಸುಗಳನ್ನು ಹಾಕಬೇಕು ಎಂದು ಆಗ್ರಹಿಸಿದೆ.

ಅಕ್ಟೋಬರ್ 15ರ 'ದಿ ಹಿಂದೂ' ಪತ್ರಿಕೆಯ ವರದಿಯ ಪ್ರಕಾರ ಯುವತಿಯ ತಂದೆ ನರೇಂದ್ರ ತ್ಯಾಗಿ "ಅವಳೀಗ ಬೆಳೆದು ನಿಂತ ಹುಡುಗಿ. ಅವಳಿಗೆ ಬಲವಂತ ಮಾಡಲು ನಾವ್ಯಾರು? ಅದು ಲವ್‌ಜಿಹಾದ್ ಪ್ರಕರಣವಾದರೂ ಅವಳು ಕಲೀಮ್‌ನನ್ನು ಪ್ರೀತಿಸುವುದಾದರೆ ಅವನನ್ನೇ ಮದುವೆಯಾಗಲಿ, ಪರವಾಗಿಲ್ಲ" ಎಂದಿದ್ದಾರೆ. ಮುಂದುವರೆದು ಅವರು "ನಾವು ಅವರ ತಂದೆ-ತಾಯಿ. ಆಕೆಯ ವೈಯಕ್ತಿಕ ಬದುಕನ್ನು ಪ್ರಚಾರ ಮಾಡಬಯಸುವುದಿಲ್ಲ. ಅದನ್ನು ಮಾಡಿದ್ದು ರಾಜಕೀಯ ಪಕ್ಷಗಳು, ಅವರು ನಮ್ಮ ಬಳಿ ಬಂದು ಇದರಿಂದ ಪ್ರಯೋಜನ ಗಿಟ್ಟಿಸಲು ಒಂದು ವಿವಾದವನ್ನು ಸೃಷ್ಟಿಸಿದರು." ಎಂದೂ ಅವರು ಹೇಳಿರುವುದಾಗಿ 'ದಿ ಹಿಂದೂ' ಪತ್ರಿಕೆ ವರದಿ ಮಾಡಿದೆ.

ಈ ನಡುವೆ 'ಮೇರಠ್ ಬಹನ್ ಬೇಟಿ ಬಚಾವೋ ಆಂದೋಲನ್' ಎಂಬ ಹಿಂದುತ್ವ ಸಂಘಟನೆಯ ಮಂದಿ ಅವರ ಮನೆಗೆ ಬಂದು ಅವರು ಹೀಗೆ ತಮ್ಮ ನಿಲುವು ಬದಲಿಸಬಾರದು ಎಂದು ಹೇಳಿರುವುದಾಗಿಯೂ ವರದಿಯಾಗಿದೆ.

## ಮಹಾರಾಷ್ಟ್ರ, ಹರ್ಯಾಣದಲ್ಲೂ ಅದೇ ಹಣಬಲದ ಪ್ರದರ್ಶನ

ಮಹಾರಾಷ್ಟ್ರ ಮತ್ತು ಹರ್ಯಾಣದಲ್ಲಿ ಬಹುನಿರೀಕ್ಷಿತ ವಿಧಾನಸಭಾ ಚುನಾವಣೆಗಳು ಮುಗಿದಿವೆ. ಈ ಸಂಚಿಕೆ ಓದುಗರ ಕೈಸೇರುವ ವೇಳೆಗೆ ಫಲಿತಾಂಶಗಳೂ ಬಂದಿರುತ್ತವೆ. ಚುನಾವಣಾ ಪೂರ್ವ ಮತ್ತು ಮತಗಟ್ಟೆ ಅಭಿಪ್ರಾಯ ಸಂಗ್ರಹಗಳು ಈ ಎರಡೂ ರಾಜ್ಯಗಳಲ್ಲಿ ಬಿಜೆಪಿಗೆ ಬಹುಮತ ಸಿಗುವ ಸಾಧ್ಯತೆ ಕಡಿಮೆಯಿದ್ದರೂ, ಸರಕಾರ ಅವುಗಳದ್ದೇ ಆಗುತ್ತದೆ ಎಂದು ಭವಿಷ್ಯ ನುಡಿದಿವೆ. ಅದೇನೇ ಇರಲಿ, ಚುನಾವಣೆಗಳಲ್ಲಿ ಹಣಬಲದ ಪ್ರದರ್ಶನದಲ್ಲಿ ಮಾತ್ರ ಅದು ಎಲ್ಲಕ್ಕಿಂತ ಮುಂದೆ ಇದೆ ಎಂಬುದುದರಲ್ಲಿ ಸಂದೇಹವಿಲ್ಲ. ಲೋಕಸಭಾ ಚುನಾವಣೆ ಹಾಕಿಕೊಟ್ಟ 'ಮಾದರಿ' ಅದೇ ರೀತಿ ಮುಂದುವರೆದಿದೆ.

ಬಿಜೆಪಿ ಮೊದಲಿಗೆ ಮಾಡಿರುವ ಕೆಲಸ ಮುಖ್ಯ ರಸ್ತೆಗಳಲ್ಲಿರುವ ಬೃಹತ್ ಜಾಹೀರಾತು ಫಲಕಗಳನ್ನು, ದಿನಪತ್ರಿಕೆಗಳನ್ನು ಮತ್ತು ಟಿವಿಯಲ್ಲಿ ಜಾಹೀರಾತು ಸ್ಲಾಟ್‌ಗಳನ್ನು ಬಹುಪಾಲು ಬಾಚಿಕೊಂಡು ಅವು ಕಾಂಗ್ರೆಸ್ ಮತ್ತು ಎನ್‌ಸಿಪಿಗೆ ಸಿಗದಂತೆ ಮಾಡಿದ್ದು. ಲೋಕಸಭಾ ಚುನಾವಣೆಗಳು ಮುಗಿದ ಕೂಡಲೇ ಈ ಮೂರೂ ಮಾಧ್ಯಮಗಳಲ್ಲಿ ಅದು ಸಗಟಾಗಿಯೇ ಮುಂಗಡ ಬುಕ್ಕಿಂಗ್ ಮಾಡಿತು ಎಂದು ರಾಜಕೀಯ ಪಕ್ಷಗಳ ಜಾಹೀರಾತು ಪ್ರಚಾರಗಳನ್ನು ಸಂಯೋಜಿಸುವ ಒಂದು ಕಂಪನಿಯವರು ಹೇಳಿರುವುದಾಗಿ ಇಕನಾಮಿಕ್ ಟೈಮ್ಸ್ ಬ್ಯೂರೋ ವರದಿ ಮಾಡಿದೆ. ಇದರಿಂದ ಈ ಮೂರು ಮಾಧ್ಯಮಗಳಲ್ಲಿ ಬಿಜೆಪಿಯ ಹೆಸರೇ ಹೆಚ್ಚಾಗಿ ಕಾಣುವಂತಾಗಿ ಉಳಿದವರ ಸ್ಪರ್ಧೆಯೇ ಇಲ್ಲದಂತೆ ಮಾಡಲು ಅದಕ್ಕೆ ಸಾಧ್ಯವಾಯಿತು.

ಕೊನೆಯ ಎರಡು ದಿನಗಳಲ್ಲಂತೂ ಅದರ ಪ್ರಚಾರ ಭರಾಟೆ ವಿಪರೀತವಾಗಿತ್ತು, ಟಿವಿ ನೋಡುವ ಪ್ರತಿಯೊಬ್ಬ ವೀಕ್ಷಕ ಬೇರೆ ಯಾರ ಬಗ್ಗೆಯೂ ಯೋಚಿಸಲು ಅವಕಾಶ ನೀಡದೆ ತನ್ನ ಜಾಹೀರಾತುಗಳನ್ನೇ ನೋಡುವಂತೆ ಮಾಡಿದ್ದಲ್ಲದೆ, ಪ್ರಮುಖ ಪತ್ರಿಕೆಗಳಲ್ಲಿ ಮುಖಪುಟಗಳ ಜಾಹೀರಾತುಗಳನ್ನು ಪ್ರಕಟಿಸಿದೆ. ಇದರಲ್ಲೂ ಬಹಳಷ್ಟು ಸ್ಪರ್ಧೆಗಳಿದ್ದುದರಿಂದಾಗಿ ಹೆಚ್ಚಿನ ಪತ್ರಿಕೆಗಳು ಒಂದಕ್ಕಿಂತ ಹೆಚ್ಚು 'ಮುಖಪುಟ'ಗಳನ್ನು ಪ್ರಕಟಿಸಿದವು. ಅಂದರೆ ಅತಿ ಹೆಚ್ಚು ಹಣ ಕೊಟ್ಟವರಿಗೆ ಮೊದಲ ಪ್ರೀಮಿಯಂ ಮುಖ ಪುಟ, ನಂತರ ಅವರವರು ತೆರುವ ಮೊತ್ತಕ್ಕೆ ಅನುಗುಣವಾಗಿ ಎರಡನೇ, ಮೂರನೇ ನಾಲ್ಕನೇ 'ಮುಖಪುಟ'! ಹೆಚ್ಚಿನ ಪತ್ರಿಕೆಗಳಲ್ಲಿ ಮೊದಲ 'ಮುಖಪುಟ' ಬಿಜೆಪಿಯದಾಗಿತ್ತು ಎಂದು ಬೇರೆ ಹೇಳಬೇಕಾಗಿಲ್ಲ. ನಿಜಕ್ಕೂ ಮಾಧ್ಯಮಗಳಿಗೆ ಎಂತಹ ಒಳ್ಳೆಯ ದಿನಗಳು!

ಅಭ್ಯರ್ಥಿಗಳ ಆಯ್ಕೆಗಳಲ್ಲೂ ಸಹಜವಾಗಿಯೇ ಅದೇ 'ಯಶಸ್ವಿ' ಫಾರ್ಮುಲಾ ಮುಂದುವರೆದಿದೆ. ಆದರೆ ಬಹುಕಾಲದ ಮೈತ್ರಿಗಳೆಲ್ಲ ಮುರಿದು ಬಹುಕೋನೀಯ ಸ್ಪರ್ಧೆ ನಡೆಯುತ್ತಿರುವ ಮಹಾರಾಷ್ಟ್ರದಲ್ಲಿ ಅತಿ ಶ್ರೀಮಂತ ಅಭ್ಯರ್ಥಿಗಳ ಪ್ರಮಾಣದಲ್ಲಿ ಮಾತ್ರ ಮೊದಲನೇ ಸ್ಥಾನವನ್ನು ಅದು ಎನ್‌ಸಿಪಿಗೆ ಬಿಟ್ಟು ಕೊಟ್ಟಿದೆ. ಎನ್‌ಸಿಪಿಯ 277 ಅಭ್ಯರ್ಥಿಗಳಲ್ಲಿ 229(83ಶೇ.) ಮಂದಿ ಕೋಟ್ಯಾಧಿಪತಿಗಳು, ಬಿಜೆಪಿಯ 210 ಮಂದಿ(81ಶೇ.), ಕಾಂಗ್ರೆಸಿನ 222 ಮಂದಿ(77ಶೇ.) ಮತ್ತು ಶಿವಸೇನೆಯ 197 ಮಂದಿ(71ಶೇ.) ಕೋಟ್ಯಾಧಿಪತಿಗಳು.

ಹರ್ಯಾಣದಲ್ಲಿಯೂ ಇದೇ ಕತೆ. ಅಲ್ಲಿ 90 ಸ್ಥಾನಗಳಲ್ಲಿ ಸ್ಪರ್ಧೆಯಲ್ಲಿರುವ ಕೋಟ್ಯಾಧಿಪತಿ ಅಭ್ಯರ್ಥಿಗಳ ಸಂಖ್ಯೆ ಕಳೆದ ವಿಧಾನಸಭೆಯ ಚುನಾವಣೆಯ ನಂತರ 380(32ಶೇ.)ರಿಂದ 563(52ಶೇ.)ಕ್ಕೆ ಏರಿದೆ. ಕಾಂಗ್ರೆಸಿನ ಅಭ್ಯರ್ಥಿಗಳಲ್ಲಿ 90ಶೇ., ಕಳೆದ ಚುನಾವಣೆಗಳ ಬಹುಪಾಲು ಕಾಂಗ್ರೆಸ್ ಮತ್ತು ಐಎನ್‌ಎಲ್‌ಡಿ ನಾಯಕರು ಈ ಬಾರಿ ಬಿಜೆಪಿ ಅಭ್ಯರ್ಥಿಗಳಾಗಿರುವುದು ಈ ಬಾರಿಯ ವಿಶೇಷ. ಇವರಲ್ಲಿ ಕೋಟ್ಯಾಧಿಪತಿಗಳ ಪ್ರಮಾಣ 86ಶೇ. ಐಎನ್‌ಎಲ್‌ಡಿಯ ಕೋಟ್ಯಾಧಿಪತಿ ಅಭ್ಯರ್ಥಿಗಳ ಪ್ರಮಾಣ 82ಶೇ. ಕಳೆದ ಬಾರಿಯ 67 ಶಾಸಕರು ಈ ಬಾರಿ ಮತ್ತೆ ಸ್ಪರ್ಧಿಸುತ್ತಿದ್ದು ಅವರ ಸರಾಸರಿ ಆದಾಯ 7.3ಕೋಟಿ ರೂ.ಗಳಿದ್ದದ್ದು ಈಗ 18.71 ಕೋಟಿ ರೂ.ಗಳಿಗೆ ಏರಿದೆ, ಅಂದರೆ ಎರಡೂವರೆ ಪಟ್ಟಿಗಿಂತಲೂ ಹೆಚ್ಚು.

ಈ ಎರಡು ರಾಜ್ಯಗಳಲ್ಲಿ ಪ್ರಧಾನ ಮಂತ್ರಿಗಳೇ ಸ್ವತಃ ವ್ಯಾಪಕ ಪ್ರಚಾರ ಮಾಡಬೇಕಾಗಿ ಬಂದಿರುವುದು ಆ ಪಕ್ಷದ ವರ್ಚಸ್ಸು ಕೇವಲ ಒಬ್ಬ ವ್ಯಕ್ತಿಯ ಮೇಲೆ ನಿಂತಿದೆಯೆಂಬ ಟಿಪ್ಪಣಿಗಳಿಗೂ ಅನುವು ಮಾಡಿಕೊಟ್ಟಿದೆ.

## "ದ್ವೇಷ ಹರಡಿಸುವುದನ್ನು ನಿಲ್ಲಿಸಿ ಎಂದು ಪ್ರಧಾನ ಮಂತ್ರಿಗಳು ದ್ವೇಷ ಹರಡಿಸುವವರಿಗೆ ಹೇಳಬೇಕಾಗಿದೆ"

ಹೀಗೆಂದವರು ಪ್ರಖ್ಯಾತ ಟಿವಿ ಪತ್ರಕರ್ತ ರಾಜದೀಪ್ ಸರ್ದೇಸಾಯಿ. ನಮ್ಮ ಪ್ರಧಾನ ಮಂತ್ರಿಗಳು ನ್ಯೂಯಾರ್ಕಿನ ಮ್ಯಾಡಿಸನ್ ಚೌಕದಲ್ಲಿ ತಮ್ಮ ಅಮೆರಿಕನ್ ಭಾರತೀಯ ಅಭಿಮಾನಿಗಳನ್ನು ಉದ್ದೇಶಿಸಿ ಭಾರೀ ಪ್ರಚಾರ ಪಡೆದ ಭಾಷಣ ಮಾಡುತ್ತಿದ್ದಾಗಲೇ ಅಲ್ಲಿಯೇ ಸ್ವಲ್ಪ ದೂರದಲ್ಲಿ ಅವರ ವಿರುದ್ಧ ಇನ್ನೂ ಕೆಲವು ಭಾರತೀಯ ಅಮೆರಿಕನ್ನರು ಪ್ರತಿಭಟನೆಗಳನ್ನೂ ನಡೆಸುತ್ತಿದ್ದರು. ಅದನ್ನು ವರದಿ ಮಾಡುತ್ತಿದ್ದ 'ಹೆಡ್‌ಲೈನ್ಸ್ ಟುಡೆ'ಯ ಪತ್ರಕರ್ತ ಸರ್ದೇಸಾಯಿ ಮೋದಿಯವರ ಬಗ್ಗೆ ಪ್ರತಿಕೂಲ ಟಿಪ್ಪಣಿ ಮಾಡಿದರೆಂದು ಕೆಲವು ಮೋದಿ ಅಭಿಮಾನಿಗಳು ಅವರ ಮೇಲೆ ಹಲ್ಲೆಗೆ ಮುಂದಾದರು ಎಂದು ವರದಿಯಾಗಿದೆ. ಇದಾದ ನಂತರ ಈ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಪ್ರಾಚೀ ಪಾಟಣ್ಕರ್ ಎಂಬ ಮಹಿಳೆಯ ಮೇಲೂ ಹಲ್ಲೆ ನಡೆಸುವ ಪ್ರಯತ್ನವನ್ನು ಅವರು ಮಾಡಿದರು. ಈ ಬಗ್ಗೆ ಪ್ರತಿಕ್ರಿಯಿಸುತ್ತ ಸರ್ದೇಸಾಯಿಯವರು "ಪ್ರಧಾನ ಮಂತ್ರಿಗಳ ಬಗ್ಗೆ ನನಗೆ ಕೆಲವೊಮ್ಮೆ ಅದೇ ಸಮಸ್ಯೆ; ದ್ವೇಷ ಹರಡಿಸುತ್ತಿರುವವರಿಗೆ 'ದ್ವೇಷ ಹರಡಿಸುವುದನ್ನು ನಿಲ್ಲಿಸಿ' ಎಂದು ಅವರು ಹೇಳಬೇಕಾಗುತ್ತದೆ. ಏಕೆಂದರೆ ಅವರು ಸುಮ್ಮನಿದ್ದರೆ ಈ ಜನಗಳು ಇನ್ನಷ್ಟು ಕೊಬ್ಬಿ ಹೋಗುತ್ತಾರೆ" ಎಂದು ಹೇಳಿದ್ದಾರೆ. ಇದು ಈಗಾಗಲೇ ಎಲ್ಲ ಪ್ರಜಾಪ್ರಭುತ್ವವಾದಿಗಳ ಗಮನಕ್ಕೆ ಬಂದಿರುವ ಸಂಗತಿ- ಪ್ರಧಾನ ಮಂತ್ರಿಗಳದ್ದು 'ದಿವ್ಯಮೌನ' ಇರಬಹುದೇ ಎಂಬ ಸಂದೇಹ ಬರುವಷ್ಟರ ಮಟ್ಟಿಗೆ. ●

## ನಾ ಕಂಡ ಚೈನಾ....

ಪುಟ 16 ರಿಂದ

ಯ ಮಹತ್ವದ ಪಾತ್ರ ವಹಿಸಿದೆ. ಪ್ರಜಾಪ್ರಭುತ್ವ, ನ್ಯಾಯ ನಿಷ್ಠೆಯಿಂದ ಮತ್ತು ಶಾಖೆಯ ಪರಿಶ್ರಮ ಮತ್ತು ಸಕ್ರಿಯ ಪಾಲ್ಗೊಳ್ಳುವಿಕೆಯಿಂದ ಹಾಗೂ ಜನರ ಪಾಲ್ಗೊಳಿಸುವಿಕೆಯಿಂದ ಇದು ಸಾಧ್ಯವಾಗಿದೆ ಎಂದರು ಕಾರ್ಯದರ್ಶಿ.

### ಗ್ಯಾಂಗ್ ಮಿಂಗ್ ಗ್ರಾಮ

ಗ್ಯಾಂಗ್ ಮಿಂಗ್ ಗ್ರಾಮದ ಪಕ್ಷದ ಕಾರ್ಯದರ್ಶಿಗಳಾದ ಕಾಂ.ಹ್ಯೂಅಂಗ್‌ರವರು ತಮ್ಮ ಗ್ರಾಮದ ಅಭಿವೃದ್ಧಿಯನ್ನು ವಿವರಿಸಿದರು. "ಹುನಾನ್ ಜಿಲ್ಲೆಯ ನೈರುತ್ಯ ಭಾಗದಲ್ಲಿ ಗ್ಯಾಂಗ್‌ಮಿಂಗ್ ಗ್ರಾಮವಿದೆ. ಇಲ್ಲಿ 3,600ಕ್ಕೂ ಹೆಚ್ಚು ಜನಸಂಖ್ಯೆ ಇರುವ 946 ಕುಟುಂಬಗಳಿವೆ. 42 ಗ್ರಾಮ ಗುಂಪುಗಳಿವೆ. 110 ಕಮ್ಯೂನಿಸ್ಟ್ ಪಕ್ಷದ ಸದಸ್ಯರಿದ್ದಾರೆ. ಈ ಹಳ್ಳಿ ಒಂದು ಕುಗ್ರಾಮವಾಗಿತ್ತು. ಈ ಹಳ್ಳಿಯನ್ನು ಹೊಸ ಗ್ರಾಮ ರಚನಾ ವಲಯದಲ್ಲಿ ಆಯ್ಕೆ ಮಾಡಿದ ನಂತರ ಅತಿವೇಗವಾಗಿ ಅಭಿವೃದ್ಧಿಯಾಗುತ್ತಿದೆ. ಈ ಹಳ್ಳಿಗೆ ಸರ್ಕಾರದ ನಿರ್ದೇಶನ, ಮಾರುಕಟ್ಟೆ, ಸಾರ್ವಜನಿಕರು ಮತ್ತು ಕೈಗಾರಿಕೆಗಳ ಬೆಂಬಲವಿದೆ. ಕೃಷಿಯನ್ನು ಅಭಿವೃದ್ಧಿ ಪಡಿಸಲಾಗಿದೆ. ಕೈಗಾರಿಕಾ ವಲಯಕ್ಕೂ ಬೆಂಬಲವಿದೆ. ಸಾಮೂಹಿಕ ದುಡಿಮೆಯ ಅಭಿವೃದ್ಧಿಯ ಫಲವನ್ನು ಎಲ್ಲರೂ ಸಮಾನವಾಗಿ ಅನುಭವಿಸಲು ಸಾಧ್ಯವಾಗುತ್ತಿದೆ. ಕೃಷಿ ಚಟುವಟಿಕೆಗೆ ಹೆಚ್ಚಿನ ಹೂಡಿಕೆಯನ್ನು ಮಾಡಲಾಗಿದೆ. ಗ್ರಾಮ ಮತ್ತು ಕೃಷಿ ಚಟುವಟಿಕೆ ಎರಡೂ ಸಹ ಗ್ರಾಮೀಣಾಭಿವೃದ್ಧಿಯ ಲಾಭ ಪಡೆಯಲು ಸಾಧ್ಯವಾಗಿದೆ. 2ನೇಯದಾಗಿ ಸಾರ್ವಜನಿಕ ಸಹಭಾಗಿತ್ವ, ಕೈಗಾರಿಕಾ ವಲಯ ಮತ್ತು ಮಾರುಕಟ್ಟೆಗಳು ಇಲ್ಲದೆ ಅಭಿವೃದ್ಧಿಯ ನೆಲೆಯನ್ನು ಗಟ್ಟಿಗೊಳಿಸಲು ಸಾಧ್ಯವಿಲ್ಲ. ಗ್ರಾಮೀಣ ಪ್ರವಾಸೋದ್ಯಮಕ್ಕೂ ಹೆಚ್ಚಿನ ಆದ್ಯತೆ ನೀಡಿದ್ದರಿಂದ ದೊಡ್ಡ ಮಾರುಕಟ್ಟೆಗೆ ಸಹಾಯವಾಗಿದೆ. ನಮ್ಮ ಸಂಪ್ರಾದಾಯ ಮತ್ತು ಸಂಪನ್ಮೂಲಕ್ಕೆ ತಕ್ಕನಾದಂತೆ ಮನೆಗಳಿಗೆ ಸಾರಿಗೆ ವ್ಯವಸ್ಥೆ ಕಲ್ಪಿಸಿಕೊಂಡಿದ್ದೇವೆ. ನಮ್ಮ ವಸತಿಗಳಿಗೆ ನೀರಾವರಿ ವ್ಯವಸ್ಥೆ, ಹಣ್ಣುಗಳು, ಹೂತೋಟ ನಿರ್ಮಾಣದ ಅವಶ್ಯಕತೆಯಿದೆ. ನಾವು ಸೌರಶಕ್ತಿ ಮತ್ತು ಇಂಧನ ಉಳಿತಾಯ ವ್ಯವಸ್ಥೆಗಳಿಗೆ ಹೆಚ್ಚಿನ ಒತ್ತನ್ನು ಕೊಡುತ್ತೇವೆ. ಪರಿಸರ ರಕ್ಷಣೆಗೆ ಗಿಡಗಳನ್ನು ನೆಡುವ, ಮನೆಯ ಸುತ್ತ ಹೂತೋಟ ನಿರ್ಮಾಣಕ್ಕೆ ಹೆಚ್ಚು ಒತ್ತು ಕೊಡುತ್ತೇವೆ." ಎಂದು ಅವರು ವಿವರಿಸಿದರು.

### ಮೂಲಭೂತ ಸೌಕರ್ಯ :

ರಸ್ತೆಗಳು ಉತ್ತಮವಾಗಿ ನಿರ್ಮಾಣಗೊಂಡಿವೆ. ಮತ್ತು ಅವುಗಳನ್ನು ಹಾಗೇ ಕಾಯ್ದುಕೊಳ್ಳಲಾಗುತ್ತದಂತೆ. ಕ್ರೀಡೆಗೆ ಮತ್ತು ಸೈಕಲ್ ಸವಾರರಿಗೆ ಪ್ರತ್ಯೇಕ ಸ್ಥಳಗಳಿವೆ. ಈ ಯೋಜನೆಯನ್ನು ಜಾರಿಗೆ ತರಲು "ಭೂ ಹಸ್ತಾಂತರ ನೀತಿಯನ್ನು ಅನುಸರಿಸಿದೆವು". ಅಂದರೆ ಮೊದಲು ಎಲ್ಲಾ ಭೂ ಮಂಡಳಿಗಳನ್ನು ಸಹಕಾರಿ ಘಟಕಗಳ ಮೂಲಕ ಒಂದುಗೂಡಿಸಿದೆವು. ಹಳ್ಳಿಯ ಜನರಿಗೆ ದೊಡ್ಡ ಪ್ರಮಾಣದಲ್ಲಿ ವ್ಯವಹಾರವನ್ನು ಮಾಡಲು ಉತ್ತೇಜನ ನೀಡುವುದರ ಮೂಲಕ ಮತ್ತು ಅದರ ಜೊತೆಜೊತೆಗೆ ಪರಿಸರ ಸಂರಕ್ಷಣೆಯತ್ತ ಗಮನ ಹರಿಸುವಂತೆ ಮಾಡಿದ್ದರಿಂದ ಈ ಭೂ ಹಂಚಿಕೆಯ ಲಾಭ ಪಡೆಯಲು ಸಾಧ್ಯವಾಗಿದೆ. ಹಾಗಾಗಿ 10ಕ್ಕೂ ಹೆಚ್ಚು ಆಧುನಿಕ ವ್ಯವಸಾಯ ಮತ್ತು ತೋಟದ ಮನೆಗಳನ್ನು ಯಶಸ್ವಿಯಾಗಿ ನಿರ್ಮಿಸಲು ಸಾಧ್ಯವಾಯಿತು. ಹೂ ಗಿಡಗಳು ಮತ್ತು ಸಸ್ಯಗಳನ್ನು ನೆಡುವುದರಿಂದ ಪರಿಸರದಲ್ಲಿ ಉತ್ತಮ ಬದಲಾವಣೆ ಕಂಡು ಬಂತು. ಮೊದಲು ಹಲವು ಮಹಿಳೆಯರು, ಹೆಣ್ಣು ಮಕ್ಕಳು ಮನೆಯಲ್ಲೇ ಇರುತ್ತಿದ್ದರು. ಆದರೆ ಇಂದು ಅವರು ಫಾರ್ಮ್‌ಹೌಸ್‌ಗಳಿಗೆ ಬರುವ ಪ್ರವಾಸಿಗರಿಗೆ ಅಗತ್ಯ ಮಾರ್ಗದರ್ಶನ ಮಾಡುತ್ತಾರೆ. ಹಾಗಾಗಿ ಗ್ರಾಮದಲ್ಲಿ ಜನರ ಆದಾಯ ಗಮನಾರ್ಹವಾಗಿ ಹೆಚ್ಚಿದೆ.

2009ರಲ್ಲಿ ಕೇವಲ ವಾರ್ಷಿಕ 8,000 ಯುವಾನ್ ಇದ್ದ ತಲಾದಾಯ ಇಂದು 20,000 ಯುವಾನ್ ಆಗಿದೆ. (ಭಾರತ ರೂ.ಗಳಲ್ಲಿ 80 ಸಾವಿರದಿಂದ 2 ಲಕ್ಷ) ಇಲ್ಲಿ ಜನರ ಆದಾಯದ ಮೂಲಕ ಹಳ್ಳಿಗರು ತಮ್ಮ ಭೂಮಿಯನ್ನು ಬಾಡಿಗೆಗೆ ನೀಡುವುದರಿಂದ ಮತ್ತು ಅಲ್ಲಿ ಉದ್ಯಮವನ್ನು ನಡೆಸುವುದರಿಂದ ಈ ಗಳಿಕೆ ಸಾಧ್ಯವಾಗಿದೆ. ಬಹುತೇಕ ಜನ ಕೈಗಾರಿಕೆಯಲ್ಲಿ ಹೆಚ್ಚು ದುಡಿಯುತ್ತಾರೆ. ಇದ-ರಿಂದಾಗಿ ಈ ಕೈಗಾರಿಕೆಯ ವಾರ್ಷಿಕ ಉತ್ಪನ್ನ 1 ಹೆಕ್ಟೇರ್‌ಗೆ 15,000 ಯುವಾನ್ ಆಗಿದೆ. ಆಹಾರ ತಯಾರಿಕೆಗೆ ಬಳಸಲ್ಪಡುವ 'ಆಹಾರ ಸಂಸ್ಕರಣೆ'ಗೆ ಸಂಬಂಧಿಸಿದ 15 ಎಮ್‌ಯು ಫಾರ್ಮ್ ಹೌಸ್‌ಗಳಿವೆ. ಇವುಗಳ ಆದಾಯ ವರ್ಷಕ್ಕೆ 500 ಸಾವಿರ ಯುವಾನ್. ಇಲ್ಲಿ ಸಾಮೂಹಿಕ ಕೃಷಿ ಇದೆ. ಸರ್ಕಾರದಿಂದ 50 ಮಿಲಿಯನ್, ಗ್ರಾಮಸ್ಥರಿಂದ 30 ಮಿಲಿಯನ್ Project ನಿಂದ 300 ಮಿಲಿಯನ್ ಯುವಾನ್ ತೊಡಗಿಸಲಾಗುತ್ತಿದೆ. 'ಸಾಮೂಹಿಕ ದುಡಿಮೆ, ಸಾಮೂಹಿಕ ಹಂಚಿಕೆಯನ್ನು ಇಲ್ಲಿ ನೋಡಬಹುದಾಗಿದೆ'. ಇದಕ್ಕೆ ಮುಖ್ಯ ಕಾರಣ ಗ್ರಾಮದ ಜನರ ಸಾಮೂಹಿಕ ಪಾಲ್ಗೊಳ್ಳುವಿಕೆ. ಈ ಹಳ್ಳಿಗೆ 1 ಮಿಲಿಯನ್ ಪ್ರವಾಸಿಗರು 30 ದೇಶಗಳಿಂದ ಬರುತ್ತಾರೆ. ಹಳ್ಳಿಯನ್ನು ಅಭಿವೃದ್ಧಿ ಪಡಿಸುವ ಮತ್ತು ಜನರ ಆದಾಯವನ್ನು ಹೆಚ್ಚಿಸುವ ಗುರಿಯನ್ನು ಇಟ್ಟುಕೊಳ್ಳಲಾಗಿದೆ. ಈ ಗ್ರಾಮದಲ್ಲಿ 140 ಜನ ಪಕ್ಷದ ಸದಸ್ಯರ ಉತ್ತಮ ಗುಂಪಿದೆ. ಇವರು ಜನರೊಂದಿಗೆ ಬೆರೆತು ಅಭಿವೃದ್ಧಿ ಯೋಜನೆಯ ಯಶಸ್ಸಿಗೆ ಶ್ರಮಿಸುತ್ತಾರೆ ಎಂದು ವಿವರಗಳನ್ನು ಕಾರ್ಯದರ್ಶಿ ನೀಡಿದರು. ಕಮ್ಯೂನಿಸ್ಟ್ ಪಕ್ಷದ ಮುಖಂಡರು ವಿವರಿಸುತ್ತಿರುವ ಪ್ರಗತಿಯ ಚಿತ್ರಣಕ್ಕೂ ನಾವು ಕಣ್ಣಾರೆ ಕಾಣುತ್ತಿರುವ ಚಿತ್ರಕ್ಕೂ ಸರಿಯಾಗಿ ತಾಳೆಯಾಗುತ್ತಿತ್ತು. ಒಟ್ಟಾ-ರೆ ಚೀನಾದ ಈ ಹಳ್ಳಿಗಳು ಸಾಧಿಸಿರುವ ವಿಶೇಷ ಪ್ರಗತಿಯ ಚಿತ್ರ ನಮ್ಮ ಮನಸ್ಸಿನಲ್ಲಿ ಅಚ್ಚಳಿಯದೆ ದಾಖಲಾಯಿತು.

### ಗ್ರಾಮದ ಪ್ರಗತಿ-ಮುಂದಿನ ಗುರಿ

ಗ್ರಾಮದ ಮತ್ತಷ್ಟು ಪ್ರಗತಿಯ ಗುರಿಯೊಂದಿಗೆ 500 ರಿಂದ 800 ಮಿಲಿಯನ್ ಯುವಾನ್ ಮೊತ್ತದ 'ಯೋಜನೆ' ರೂಪಿಸಲಾಗಿದೆ. ಈ ಬಗೆ-ಯ ಅಭಿವೃದ್ಧಿಯ ಯೋಜನೆಯನ್ನು ನಗರದ ಸುತ್ತಲ 15 ಚ.ಕಿ.ಮೀ ಪ್ರದೇಶದಿಂದ 32 ಚ.ಕಿ.ಮೀ. ವ್ಯಾಪ್ತಿಯ ಗ್ರಾಮಗಳಿಗೆ ವಿಸ್ತರಣೆ ಮಾಡುವುದು, ಉತ್ತಮ ಸಾರಿಗೆ ವ್ಯವಸ್ಥೆಯ ಬಗ್ಗೆ ಗಮನ ಹರಿಸುವುದು ಮುಂತಾದವುಗಳು ಮುಂದಿನ ಯೋಜನೆಗಳಾಗಿವೆ.

### ಗೌಂಗ್‌ಟೌನ್ ಸರಕಾರಿ ವ್ಯವಹಾರ ಕೇಂದ್ರ

ಈ ಕೇಂದ್ರದಲ್ಲಿ ಶಿಕ್ಷಣ, ಆರೋಗ್ಯ, ಕೃಷಿ, ಭೂಮಿಗೆ ಸಂಬಂಧಿಸಿದ ಸುಸಜ್ಜಿತ, ಸುವ್ಯವಸ್ಥಿತ ಕಛೇರಿಗಳು ಇಲ್ಲಿವೆ. ಒಟ್ಟಾರೆ 53 ಇಲಾಖೆಗಳು ಇಲ್ಲಿವೆ. 600ಕ್ಕಿಂತ ಹೆಚ್ಚು ಸಿಬ್ಬಂದಿಗಳು ಇಲ್ಲಿ ಕೆಲಸ ಮಾಡುತ್ತಾರೆ. ಎಲ್ಲಾ ಇಲಾಖೆಗೂ ಸ್ವಾಗತ ಕಛೇರಿಯಿದೆ. ಅತ್ಯಾಧುನಿಕ ವ್ಯವಸ್ಥೆಗಳು ಇವೆ. ಜನರ ಅರ್ಜಿಗಳನ್ನು ನಿಯಮಿತ ದಿನದೊಳಗೆ ವ್ಯವಸ್ಥಿತ ರೀತಿಯಲ್ಲಿ ವಿಲೇವಾರಿ ಮಾಡಲಾಗುತ್ತದೆ.

ಕಡಿಮೆ ಆದಾಯ ಇರುವವರಿಗೆ ಮನೆಗಳು

ಕೌಟುಂಬಿಕ ಸೇವಾ ಕೇಂದ್ರದಿಂದ 50 ಸಾವಿರ ಜನರಿಗೆ ಸವಲತ್ತುಗಳನ್ನು ಕೊಡಲಾಗಿದೆ. ನಗರದಲ್ಲಿರುವ ಕಡಿಮೆ ಆದಾಯ ಇರುವವರಿಗೆ ಎಲ್ಲಾ ರೀತಿಯ ಸವಲತ್ತುಗಳಿರುವ ಮನೆಗಳು ಮತ್ತು ಸಮುದಾಯ ಕೇಂದ್ರಗಳನ್ನು ಒದಗಿಸಲಾಗಿದೆ. ಇಲ್ಲಿ 5,935 ಮನೆಗಳನ್ನು ನಿರ್ಮಿಸಲಾಗಿದ್ದು 3,988 ಮನೆಗಳನ್ನು ಕಡಿಮೆ ಆದಾಯ ಇರುವವರಿಗೆ ನೀಡಲಾಗಿದೆ. ವೃದ್ಧರಿಗೆ ಸೇವಾ ಕೇಂದ್ರ, ವಿಕಲಾಂಗರಿಗೆ ಸೌಲಭ್ಯಗಳು, ಚಿಕ್ಕಮಕ್ಕಳಿಗಾಗಿ ಶಿಕ್ಷಣ ಪೂರ್ವ ಕಲಿಕಾ ಕೇಂದ್ರಗಳು, ಸಾಂತ್ವನ ಸಂವಹನ ಕೇಂದ್ರ, ಮಾನಸಿಕ ರೋಗಕ್ಕೆ ಚಿಕಿತ್ಸೆ, ಕ್ರೀಡೆಗೆ ಉತ್ತೇಜನ, ಕಂಪ್ಯೂಟರ್ ಕೇಂದ್ರ ಗ್ರಂಥಾಲಯ, ಸಭಾಂಗಣ ಮುಂತಾದ ಸೌಲಭ್ಯಗಳು ಇಲ್ಲಿವೆ.

( ಮುಂದುವರಿಯುವುದು ) ●

# ನಾ ಕಂಡ ಚೈನಾ

**ಎಸ್. ವರಲಕ್ಷ್ಮಿ**



'ಭಾರತ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ 12 ಜನ ಪ್ರತಿನಿಧಿಗಳ ನಿಯೋಗವು ಚೈನಾ ದೇಶದ ಕಮ್ಯೂನಿಸ್ಟ್ ಪಕ್ಷದ ಅಹ್ವಾನದ ಮೇರೆಗೆ ಸೆಪ್ಟೆಂಬರ್ 15 ರಿಂದ 24, 2014 ರ ನಡುವೆ ಚೀನಾ ದೇಶಕ್ಕೆ ಭೇಟಿ ನೀಡಿತ್ತು. ಚೀನಾ ದೇಶದ ಅಭಿವೃದ್ಧಿ, ಚೀನಾ ಕಮ್ಯೂನಿಸ್ಟ್ ಪಕ್ಷದ ತಳಹಂತದಲ್ಲಿನ ಸಂಘಟನಾ ಸ್ವರೂಪ, ಜನರೊಂದಿಗಿನ ಪಕ್ಷದ ಒಡನಾಟ, ಪಕ್ಷದ ಸಿದ್ಧಾಂತ–ನೀತಿ ರೂಪಿಸುವ ಕ್ರಮ, ರೈತ ತರಬೇತಿ ವಿಧಾನ ಇತ್ಯಾದಿ ವಿಷಯಗಳ ಕುರಿತ ಅಧ್ಯಯನ ಈ ಭೇಟಿಯ ಉದ್ದೇಶವಾಗಿತ್ತು. ಈ ತಂಡದ ಭಾಗವಾಗಿದ್ದ ಕರ್ನಾಟಕದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಸ್. ವರಲಕ್ಷ್ಮಿಯವರು ತಮ್ಮ ಅನುಭವದ ಕುರಿತು ಇಲ್ಲಿ ಬರೆದಿದ್ದಾರೆ.

ಆಗಸ್ಟ್ 29, 2014ರಂದು ಪಕ್ಷದ ರಾಜ್ಯ ಕಾರ್ಯದರ್ಶಿಗಳು ನನಗೆ ದೂರವಾಣಿ ಮುಖಾಂತರ ನಿಮ್ಮ ಬಳಿ ಪಾಸ್‌ಪೋರ್ಟ್ ಇದೆ–ಯಾ ಎಂದು ಕೇಳಿದರು. ನಾನು ಇದೆ. 2018ರ ತನಕ ನನ್ನ ಪಾಸ್‌ಪೋರ್ಟ್ Validity ಇದೆ ಎಂದು ಹೇಳಿದೆ. ನಂತರ ಕಾರಣ ಏನು ಎಂದು ಕೇಳಿದಾಗ, ನಿಮ್ಮ ಹೆಸರನ್ನು ಚೈನಾಗೆ ಹೋಗಲು ಪಕ್ಷದ ಕಾರ್ಯದರ್ಶಿ ಮಂಡಳಿ ಶಿಫಾರಸ್ಸು ಮಾಡಿದೆ ಎಂದರು. ಆಗ ನನಗೆ ನಂಬಲು ಆಗಲೇ ಇಲ್ಲ. ಖುಷಿಯೋ ಖುಷಿ. ತಕ್ಷಣವೇ ವ್ಯಥೆ ಕೂಡಾ. ಖುಷಿ ಏಕೆ ಎಂದರೆ ಒಂದು ಕಮ್ಯೂನಿಸ್ಟ್ ಪ್ರಭುತ್ವ ಇರುವ ದೇಶಕ್ಕೆ ಹೋಗುವುದು ಒಬ್ಬ ಕಮ್ಯೂನಿಸ್ಟ್ ಪಕ್ಷದ ಕಾರ್ಯಕರ್ತೆಗೆ ಇದೊಂದು ದೊಡ್ಡ ಅವಕಾಶ. ಖುಷಿಗೆ ಮತ್ತೊಂದು ಕಾರಣವಿದೆ. ಇಡೀ ವಿಶ್ವದಲ್ಲಿ ಜಾಗತೀಕರಣದ ನೀತಿಗಳಿಂದಾಗಿ ಅಂತರ ರಾಷ್ಟ್ರೀಯ ಬಂಡವಾಳದ ಪಾದಕ್ಕೆ ಎಲ್ಲವನ್ನು ಅರ್ಪಿಸಿರುವ ದೇಶಗಳ ಪಟ್ಟಿಯೇ ನಮ್ಮ ಮುಂದಿದೆ. ಅಷ್ಟೇ ಅಲ್ಲ ದೊಡ್ಡಣ್ಣ (ಅಮೇರಿಕಾ) ತನ್ನ ಮಾತು ಕೇಳದವರ ಮೇಲೆ ಯಾವ ರೀತಿಯ ಅಕ್ರಮಣ(ಕ್ಯೂಬಾ, ಸಿರಿಯಾ, ಇರಾನ್) ನಡೆಸುತ್ತಿದೆ, ಹೇಗೆ ಎಂಬುದು ನಮಗೆ ಗೊತ್ತಿದೆ. ಇಂತಹ ಪರಿಸ್ಥಿತಿಯಲ್ಲಿ 'ಒಂದು ಕಮ್ಯೂನಿಸ್ಟ್ ಪ್ರಭುತ್ವ' 'ಜನರ ಮುನ್ನಡೆಗಾಗಿ' ಯಾವ ರೀತಿ



ಸೆಡ್ಡು ಹೊಡೆದು ನಿಂತಿದೆ. 'ಅಲ್ಲಿಯ ಜನರನ್ನು ಯಾವ ರೀತಿ ನಡೆಸಿಕೊಳ್ಳುತ್ತಿದೆ.' ಎಂಬುದನ್ನು ನೇರವಾಗಿ ಕಂಡು ತಿಳಿಯಬಹುದಲ್ಲ, ಅದಕ್ಕೆ ಖುಷಿ ಮತ್ತು ಕುತೂಹಲ.

ಇನ್ನು ವ್ಯಥೆ ಏಕೆಂದರೆ ನನ್ನಂತಹ ಒಬ್ಬ ಸಾಮಾನ್ಯ ಕಾರ್ಯಕರ್ತೆ ಸಿಪಿಐ(ಎಂ)ನ ಕೇಂದ್ರ ಸಮಿತಿಯನ್ನು ಪ್ರತಿನಿಧಿಸಿ ತ್ಯಾಗ ಬಲಿದಾನಗಳಿಂದ ಕೂಡಿದ ಕೆಂಪು ನೆಲಕ್ಕೆ ಕಾಲಿಡುವುದು ಎಂದರೆ ಅದಕ್ಕೆ ನಾನು ಅರ್ಹಳಾಗಿದ್ದೇನೆಯೇ ಎಂಬ ಪ್ರಶ್ನೆ. ಈ ರೀತಿಯ ದುಗುಡಗಳಿಂದಲೇ ನನ್ನ ಪ್ರಯಾಣ ಪ್ರಾರಂಭವಾಯಿತು. ಸೆಪ್ಟೆಂಬರ್ 14 ರಂದು ಸಿಪಿಐ(ಎಂ)ನ ಪೊಲಿಟ್‌ಬ್ಯೂರೊ ಸದಸ್ಯರಾದ ಕಾಂ.ಸೀತಾರಾಂ ಯೆಚೂರಿಯವರು ಚೈನಾ ದೇಶದ ಆಡಳಿತ ವ್ಯವಸ್ಥೆಯ ಬಗ್ಗೆ ಕೆಲವು ಮುಖ್ಯಾಂಶಗಳನ್ನು ವಿವರಿಸಿ, ಶುಭ ಹಾರೈಸಿ ಬೀಳ್ಕೊಟ್ಟರು.

ಚೈನಾದಲ್ಲಿ ಗ್ವಾನ್‌ಡಾಂಗ್ ರಾಜ್ಯದ ಗ್ವಾನೇಜ್ಹು, ಚಾಂಗ್ವಾ ರಾಜ್ಯದ ಹುನಾನ್ ನಗರ ಮತ್ತು ಬೀಜಿಂಗ್ ನಗರಗಳಲ್ಲಿ ಮತ್ತು ಹಳ್ಳಿಗಳಲ್ಲಿ ನಮ್ಮ ಸಭೆಗಳು ಮತ್ತು ಪ್ರವಾಸ ಇತ್ತು. ನಮ್ಮೊಟ್ಟಿಗೆ ಇದ್ದ ಸಂಗಾತಿಗಳು ಚೈನಾದ ಪೆಂಗ್‌ಬಿನ್, ಜಿನೆಯೆನ್, ವೆನ್‌ಜುನ್‌ರವರು, ಅಲ್ಲಿಯ ಅಂತರರಾಷ್ಟ್ರಿಯ ವ್ಯವಹಾರಗಳ ಇಲಾಖೆಯವರು. ಆಯಾಯ ರಾಜ್ಯಗಳಿಗೆ ಹೋದಾಗ ಇವರೊಟ್ಟಿಗೆ ಸ್ಥಳೀಯ ನಾಯಕರು ಬಂದು ಜೊತೆಗೂಡುತ್ತಿದ್ದರು.

ಅಲ್ಲಿಯ ಎಲ್ಲ ಅಧಿಕಾರಿಗಳು ಮತ್ತು ಪಕ್ಷದ ನಾಯಕರು ಚೈನಾ ಭಾಷೆಯಲ್ಲಿಯೇ ಮಾತನಾಡುತ್ತಿದ್ದರು. ಅದನ್ನು ಇಂಗ್ಲೀಷ್‌ಗೆ ತರ್ಜುಮೆ ಮಾಡಿ ನಮಗೆ ಹೇಳಲಾಗುತ್ತಿತ್ತು. ನಮ್ಮ ಸಂಭಾಷಣೆಗಳನ್ನು ಅವರಿಗೆ ಚೈನಾ ಭಾಷೆಗೆ ತರ್ಜುಮೆ ಮಾಡಿ ಹೇಳಲಾಗುತ್ತಿತ್ತು.

1947ರಲ್ಲಿ ಭಾರತ ದೇಶಕ್ಕೆ ಸ್ವಾತಂತ್ರ್ಯ ಬಂತು. ಆದರೆ ಇದುವರೆಗೂ ದೇಶದ ಜನರ ಮೂಲಭೂತ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ನಮ್ಮನಾಳಿದ ಬಲಪಂಥೀಯ ರಾಜಕೀಯ ಪಕ್ಷಗಳು ಸೋತಿವೆ. ಮಾತ್ರವಲ್ಲ ಅವರ ವ್ಯಾಖ್ಯಾನದ ಪ್ರಕಾರ "ಪ್ರಭುತ್ವ ಜನರಿಗೆ ಕೆಲವು 'ಕಲ್ಯಾಣ ಕಾರ್ಯಕ್ರಮ'ಗಳನ್ನ ಮಾತ್ರ ಕೊಡುವುದು." ಎಂಬುದನ್ನು ಸಾಬೀತು ಮಾಡಿದೆ. ಇತ್ತೀಚೆಗೆ ಎಲ್ಲ ರಂಗದಲ್ಲೂ ಖಾಸಗೀಕರಣ ಎನ್ನಲಾಗುತ್ತಿದೆ. ಹಲವು ಕಲ್ಯಾಣ ಕಾರ್ಯಕ್ರಮಗಳು ಬರಿ ಘೋಷಣೆಗಳಾಗಿದ್ದರೆ ಈ ಜನವಿರೋಧಿ ಖಾಸಗೀಕರಣದ ನೀತಿಗಳು ಭರದಿಂದ ಜಾರಿ ಆಗುತ್ತಿವೆ.

ನಮ್ಮ ದೇಶದ ಆರ್ಥಿಕ ತಜ್ಞರು, ರಾಜಕೀಯ ತಜ್ಞರು, ಸಮಾಜ ವಿಜ್ಞಾನಿಗಳು, ದೇಶದ ಬಂಡವಾಳಗಾರರು, ಕಾರ್ಪೋರೇಟ್ ಮಾಧ್ಯಮಗಳು ಜಾಗತೀಕರಣ ಮತ್ತು ಉದಾರೀಕರಣದ ನೀತಿಗಳಿಗೆ ಅನುಗುಣವಾಗಿ ನಾವು ಹೋಗಬೇಕು ಮಾತ್ರವಲ್ಲ ಎಲ್ಲವನ್ನೂ ಸಾಮ್ರಾಜ್ಯಶಾಹಿಗಳ ಪಾದದ ಬುಡಕ್ಕೆ ಅರ್ಪಿಸಬೇಕು ಎಂದು ಪ್ರತಿಪಾದಿಸುತ್ತಿದ್ದಾರೆ.

ಚೈನಾದಲ್ಲಿ 1949ರ ಕ್ರಾಂತಿಯ ನಂತರ ಅಲ್ಲಿಯ ಕಮ್ಯೂನಿಸ್ಟ್ ಸರ್ಕಾರವನ್ನು ಕಿತ್ತೊಗೆಯಲು ಅಲ್ಲಿಯ ಸ್ಥಳೀಯ ಪಟ್ಟಭದ್ರ ಶಕ್ತಿಗಳು ಮತ್ತು ಹೊರಗಿನ ಶಕ್ತಿಗಳು ನಿರಂತರವಾಗಿ ಪಿತೂರಿ ನಡೆಸಿಕೊಂಡು ಬಂದಿವೆ. ಇಂದಿನ ಜಾಗತೀಕರಣದ ನೀತಿಗಳು, ವಿಶ್ವ ಹಣಕಾಸು ಬಂಡವಾಳದ ಆಕ್ರಮಣಗಳ ಮಧ್ಯೆ ಒಂದು ಕಮ್ಯೂನಿಸ್ಟ್ ಸರ್ಕಾರ ಉಳಿದಿದೆ. ಏಕೆಂದರೆ ಅದರ ಹೃದಯ ಬಿಂದು 'ಜನರ ಆಡಳಿತ'. (People`s government) ಎಲ್ಲಾ ನೀತಿಗಳು ಜನರಿಗಾಗಿ! ಇದೇ ನಮ್ಮಂತಹ ದೇಶದ ಪ್ರಭುತ್ವಕ್ಕೂ ಒಂದು ಕಮ್ಯೂನಿಸ್ಟ್ ದೇಶದ ಪ್ರಭುತ್ವಕ್ಕೂ ಇರುವ ಮೂಲಭೂತ ವ್ಯತ್ಯಾಸ.

### ಗ್ರಾಮೀಣಾಭಿವೃದ್ಧಿ

ಚೀನಾ ದೇಶದ ಗ್ರಾಮೀಣಾಭಿವೃದ್ಧಿಯನ್ನು ಖುದ್ದು ನೋಡಿ ತಿಳಿಯುವ ಅವಕಾಶ ನಮಗೆ ಸಿಕ್ಕಿತು. ನಾವು ಕಂಡ ಎರಡು ಹಳ್ಳಿಗಳ ಅಭಿವೃದ್ಧಿಯ ವಿವರಗಳು ತುಂಬಾ ಆಸಕ್ತಿದಾಯಕವಾಗಿವೆ.

### ಹೌಂಗ್ಲಾಂಗ್ ಎಂಬ ಗ್ರಾಮ

ಹುನಾನ್ ನಗರದ ಹೊರವಲಯದಲ್ಲಿರುವ ಹೌಂಗ್ಲಾಂಗ್ ಗ್ರಾಮದ ಪೂರ್ವಕ್ಕೆ ವಿಮಾನ ನಿಲ್ದಾಣವಿದೆ. ಪಶ್ಚಿಮಕ್ಕೆ ಕೈಗಾರಿಕಾ ಪಾರ್ಕ್ ಇದೆ. ಚಾಂಗಾಷಾ ರಾಜ್ಯದ ಹೆದ್ದಾರಿ ಹಾದು ಹೋಗುತ್ತದೆ. ಈ ಹಳ್ಳಿ 8.7 ಚ.ಕಿ.ಮಿ ಯೋಜನಾ ವಲಯದೊಳಗಡೆ ಇದೆ. ಇದನ್ನು ಪಟ್ಟಣವನ್ನಾಗಿ ಪರಿವರ್ತಿಸಲಾಗಿದೆ. ಈ ಹಳ್ಳಿ ಬೆಟ್ಟ, ಕಾಡನ್ನು ಹೊಂದಿರುವ ಗುಡ್ಡಗಾಡು ಪ್ರದೇಶ.



ಕಡಿಮೆ ಆದಾಯ ಇರುವವರಿಗೆ ನಿರ್ಮಿಸಿರುವ ವಸತಿ ಸಮುಚ್ಚಯ

ಕಮ್ಯೂನಿಸ್ಟ್ ಪಕ್ಷದ ಗ್ರಾಮ ಘಟಕದ ಕಾರ್ಯದರ್ಶಿ ವಿವರಗಳನ್ನು ಕೊಡುತ್ತಾ ಹೋದರು. ಗ್ರಾಮದಲ್ಲಿನ ಭೂವ್ಯಾಪ್ತಿ 300 ಹೆಕ್ಟೇರ್. ಉಳುಮೆ ಭೂಮಿ 180 ಹೆಕ್ಟೇರ್. ಇಲ್ಲಿ 21 ಗ್ರಾಮ ಗುಂಪುಗಳಿವೆ. 1,040 ಕುಟುಂಬಗಳಿವೆ. 3,558 ಜನರಿದ್ದಾರೆ.

'ಒಂದು ಕಾಲದಲ್ಲಿ ಕುಗ್ರಾಮವಾಗಿದ್ದ ಈ ಹಳ್ಳಿ ಇಂದು ಸುಂದರವಾದ ನೈಸರ್ಗಿಕ ವಾತಾವರಣ, ಮಾನವೀಯವಾದ ಸಮಾನತೆ ಮತ್ತು ವ್ಯಾಪಕವಾದ ಶಕ್ತಿ ಎಲ್ಲವನ್ನು ಹೊಂದಿದೆ.' ಎಂದು ವಿವರಿಸಿದರು. ಈ ಹಳ್ಳಿಯಲ್ಲಿ 180 ಹೆಕ್ಟೇರ್ ಭೂಮಿಯಲ್ಲಿ ದ್ರಾಕ್ಷಿ, ಭತ್ತ, ತರಕಾರಿಗಳನ್ನು ಬೆಳೆಯುತ್ತಾರೆ. ಕೃಷಿಯಲ್ಲಿ ತಂತ್ರಜ್ಞಾನದ ಬಳಕೆಯಿಂದ ಹೆಚ್ಚು ಬೆಳೆಯಲು ಸಾಧ್ಯವಾಗಿದೆ. ಇಲ್ಲಿ ಎಲ್ಲರಿಗೂ ಬೇಸಾಯಕ್ಕೂ, ಕೈಗಾರಿಕೆಗಳಿಗೂ, ಮನೆಗಳಿಗೂ ನೀರು ಮತ್ತು ವಿದ್ಯುತ್ ಶಕ್ತಿಯಿದೆ. 890 ಸ್ವ–ಂತ ಕಂಪ್ಯೂಟರ್‌ಗಳು ಈ ಹಳ್ಳಿಯಲ್ಲಿವೆ. ಟಿ.ವಿ. ಸ್ಟೇಷನ್, ಕ್ರೀಡಾ ಕ್ಲಬ್, ಜಿಮ್ನಾಸ್ಟಿಕ್ ಸೌಲಭ್ಯಗಳಿವೆ. ಮಕ್ಕಳಿಗೆ ಒಳ್ಳೆಯ 'ಕಿಂಡರ್‌ಗಾರ್ಟನ್' ಇದೆ. ಹಳ್ಳಿಯ ದೃಶ್ಯಗಳನ್ನು ನೋಡಿದ ನಮಗೆ ನಿಜಕ್ಕೂ ಸಂತೋಷವಾಯಿತು.

ಪರಿಸರವನ್ನು ಕಾಪಾಡಲು ಕುಟುಂಬಗಳಿಗೆ 'ಪರಿಸರದ ಪ್ರಜ್ಞೆ' ಕುರಿತು ಅರಿವು ಮೂಡಿಸಲಾಗಿದೆ. ಎಲ್ಲಾ ಮನೆಗಳಲ್ಲಿಯೂ ಗಿಡಗಳನ್ನು ನೆಟ್ಟಿರುವುದು ಕಾಣುತ್ತದೆ. ಹಳ್ಳಿಯ ಕಸವನ್ನು 70% ಸಂಸ್ಕರಿಸಲಾಗುತ್ತದಂತೆ. ಮನೆಗಳಿಗೆ ಸೌರವಿದ್ಯುತ್ ವ್ಯವಸ್ಥೆಯನ್ನು ಅಳವಡಿಸಲಾಗಿದೆ.

2012ರಲ್ಲಿ ಹಳ್ಳಿಯ ಆದಾಯ 550 ಮಿಲಿಯನ್ ಯುವಾನ್. ಹಳ್ಳಿಯ ಜನರ ತಲಾದಾಯ ಅಂದರೆ ಸರಾಸರಿ ಆದಾಯ 21,000 ಯುವಾನ್ (ಭಾರತದ 10 ರೂ.ಗಳಿಗೆ ಚೀನಾದ 1 ಯುವಾನ್ ಸಮಾನ). ಹಳ್ಳಿಯ ಸಾಮೂಹಿಕ ಆರ್ಥಿಕತೆಯು ಕೃಷಿ ಕೈಗಾರಿಕೆ ಸಂಸ್ಥಾಪನೆಗಳ ಮೇಲೆ ಅವಲಂಬನೆಯಾಗಿದೆ. ವಾರ್ಷಿಕ ಉತ್ಪನ್ನದ ಮೌಲ್ಯ 70 ಮಿಲಿಯನ್ ಯುವಾನ್ ತಲುಪಿದೆ. ವೈಯಕ್ತಿಕ ಉದ್ದಿಮೆಗಳು ಗ್ರಾಮದಲ್ಲಿ ಗಮನಾರ್ಹವಾಗಿ ವೃದ್ಧಿಯಾಗಿವೆ. ಇಲ್ಲಿ ಒಟ್ಟು 258 ವೈಯುಕ್ತಿಕ ಉದ್ದಿಮೆಗಳಿವೆ. ವಾರ್ಷಿಕ ಉತ್ಪನ್ನದ ಮೌಲ್ಯ 210 ಮಿಲಿಯನ್ ಯುವಾನ್. ಈ ಗ್ರಾಮವು ಹಲವಾರು ಪ್ರಶಸ್ತಿಗಳಿಂದ ಗೌರವಿಸ್ಪಲ್ಪಟ್ಟಿದೆ. ಈ ಹಳ್ಳಿಯ ಸಾಧನೆಯಲ್ಲಿ ಕಮ್ಯೂನಿಸ್ಟ್ ಪಕ್ಷದ ಶಾಖೆ–

ಪುಟ 15 ಕ್ಕೆ

JANASHAKTHI KANNADA VARA PATRIKE: Printed by G.V.SRIRAMA REDDY, EMS Bhavana, No.37/A, 8th Cross, Mahalakshmi Layout, BANGALORE-560086Published by: G.V.SRIRAMA REDDY EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor NITHYANANDASWAMI EMS Bhavana, No.37/A, 8th Cross, Mahalakshmi Layout, BANGALORE-560086 Editor : NITHYANANDASWAMI